بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّیْ عَلٰی رَسُوْلِهِ الْکَرِیْمِ    وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 29

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

21 ಜುಲೈ 2022, 21 ವಫಾ 1401 ಹಿಜರಿ ಶಮ್‌ಸಿ,
21 ಧಿಲ್ ಹಜ್ಜ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِذَا رَاَيْتَ الَّذِيْنَ يَخُوْضُوْنَ فِيْٓ اٰيٰتِنَا فَاَعْرِضْ عَنْهُمْ حَتّٰى يَخُوْضُوْا فِيْ حَدِيْثٍ غَيْرِهٖ ۚ وَاِمَّا يُنْسِيَنَّكَ الشَّيْطٰنُ فَلَا تَقْعُدْ بَعْدَ الذِّكْرٰى مَعَ الْقَوْمِ الظّٰلِمِيْنَ (الانعام:69)

**(ಅಲ್ ಅನ್‌ಆಮ್ : 69)**

**ಅಂದರೆ: ನಮ್ಮ ದೃಷ್ಟಾಂತಗಳ ಕುರಿತು (ವಿಮರ್ಶೆ ಮಾಡುತ್ತಾ) ನಿರರ್ಥಕವಾಗಿ ಮಾತನಾಡುವವರನ್ನು ನೀನು ಕಂಡರೆ ಅವರು ಬೇರೊಂದು ಮಾತುಕತೆಯಲ್ಲಿ ತೊಡಗುವ ವರೆಗೆ ನೀನು ಅವರಿಂದ ಅಗಲಿ ನಿಲ್ಲು. ಶೈತಾನನು ಯಾವಾಗಲಾದರೂ ನಿನಗೆ ಮರೆವು ಉಂಟಾಗುವಂತೆ ಮಾಡಿದರೆ ನೆನಪುಂಟಾದ ನಂತರ ನೀನು ಅಧರ್ಮಿಗಳೊಂದಿಗೆ ಕುಳಿತುಕೊಳ್ಳಬಾರದು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಅನುಮತಿ ಸಿಗದಿದ್ದಾಗ ಹಿಂತಿರುಗಿರಿ

(2062) ಉಬೈದ್ ಬಿನ್ ಉಮೈರ್ ಅವರಿಂದ ವರದಿ ಇದೆ ಅವರು ಹೇಳುತ್ತಾರೆ: ಹಝ್ರತ್ ಅಬುಮೂಸಾ ಅಲ್-ಅಶ್'ಅರಿ(ರ) ಅವರು ಹಝ್ರತ್ ಉಮರ್ ಇಬ್ನ್ ಖತ್ತಾಬ್(ರ) ಅವರನ್ನು ಭೇಟಿ ಮಾಡಲು ಅನುಮತಿ ಕೇಳಿದರು. ಆದರೆ ಅವರಿಗೆ ಅನುಮತಿ ನೀಡಲಾಗಿಲ್ಲ ಮತ್ತು (ಹಝ್ರತ್ ಉಮರ್(ರ)) ಕಾರ್ಯನಿರತರಾಗಿದ್ದರು ಎಂದು ತೋರುತ್ತದೆ. ಹಝ್ರತ್ ಅಬುಮೂಸಾ ಹಿಂತಿರುಗಿದರು. ಅಷ್ಟರಲ್ಲಿ ಹಝ್ರತ್ ಉಮರ್(ರ) ಅವರು ತಮ್ಮ ಕೆಲಸದಿಂದ ಬಿಡುಗಡೆ ಹೊಂದಿ ಕೇಳಿದರು: ನಾನು ಅಬ್ದುಲ್ಲಾ ಬಿನ್ ಕೈಸ್ (ಅಬುಮೂಸಾ) ಅವರ ಧ್ವನಿಯನ್ನು ಕೇಳಿದ್ದೇನೆಯೇ? ಅವರಿಗೆ ಅನುಮತಿಸಿರಿ (ಪ್ರವೇಶಿಸಲು). ಅವರು ಹಿಂತಿರುಗಿದ್ದಾರೆ ಎಂದು ಅವರಿಗೆ ತಿಳಿಸಲಾಯಿತು, ತದನಂತರ ಹಝ್ರತ್ ಉಮರ್(ರ) ಅವರನ್ನು ಕರೆದು (ಮತ್ತು ವಿಚಾರಿಸಿದರು) ಆಗ (ಹಝ್ರತ್ ಅಬುಮೂಸಾ(ರ)) ಹೇಳಿದರು: ಇದು ನಮಗೆ ಆಜ್ಞಾಪಿಸಲ್ಪಟ್ಟಿದೆ (ಅನುಮತಿ ನೀಡದಿದ್ದಾಗ ಹಿಂತಿರುಗಿರಿ ಎಂದು) ಅವರು ಹೇಳಿದರು. ಅದಕ್ಕೆ ಹಝ್ರತ್ ಉಮರ್(ರ) ಹೇಳಿದರು: ನೀವು ಈ ವಿಷಯದ ಕುರಿತು ಸಾಕ್ಷಿ ನೀಡಬೇಕು. ಆದ್ದರಿಂದ ಅವರು ಅನ್ಸಾರ್‌ರವರ ಅವರ ಬಳಿಗೆ ಹೋಗಿ ಅವರೊಂದಿಗೆ ಕೇಳಿದಾಗ ಅವರು ಹೇಳಿದರು: ನಮ್ಮಲ್ಲಿ ಚಿಕ್ಕವನಾದ ಅಬುಸಈದ್ ಅಲ್-ಖುದ್ರಿ(ರ) ಹೊರತುಪಡಿಸಿ ಯಾರೂ ಈ ವಿಷಯದಲ್ಲಿ ನಿಮ್ಮ ಪರವಾಗಿ ಸಾಕ್ಷಿ ಹೇಳುವುದಿಲ್ಲ. ನಂತರ ಅವರು ತಮ್ಮೊಂದಿಗೆ ಹಝ್ರತ್ ಅಬುಸಈದ್ ಅಲ್-ಖುದ್ರಿ(ರ) ಅವರನ್ನು ಕರೆದೊಯ್ದರು. ಹಝ್ರತ್ ಉಮರ್(ರ) (ಅವರ ಮಾತುಗಳನ್ನು ಕೇಳಿ) ಹೇಳಿದರು: ಪೈಗಂಬರ್(ಸ) ಅವರ ಈ ಸೂಚನೆಯು ನನಗೆ ಮರೆಯಾಗಿದೆಯೇ? ಮಾರುಕಟ್ಟೆಗಳಲ್ಲಿನ ವ್ಯಾಪಾರವು ನನ್ನನ್ನು ಕತ್ತಲೆಯಲ್ಲಿ ಇರಿಸಿತು. ಇದರರ್ಥ ಅವರು ವ್ಯಾಪಾರಕ್ಕಾಗಿ ಹೊರಗೆ ಹೋಗುತ್ತಿದ್ದರು ಎಂದಾಗಿದೆ. **(ಸಾಹಿಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯೂ, 2008 ಖಾದಿಯಾನ್)**

## ಭಯಭಕ್ತಿಯುಳ್ಳವರ ಬಗ್ಗೆ ಬಹಳಷ್ಟು ವಾಗ್ದಾನಗಳಿವೆ, ಭಯಭಕ್ತಿವುಳ್ಳವನು ಅಲ್ಲಾಹನ ಮಿತ್ರನಾಗುವನು, ಅದಕ್ಕಿಂತ ಬೇರೆ ಯಾವ ಸ್ಥಾನವಿದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅದಾದ ನಂತರ ಮತ್ತೆ ನಾನು ಅಸಲು ವಿಷಯದತ್ತ ಬರುತ್ತೇನೆ ಮತ್ತು ಹೇಳುವೆನು. ಮುತ್ತಖಿ (ಭಯಭಕ್ತಿಯುಳ್ಳವನು) ಯಾರು? ವಾಸ್ತವವಾಗಿ ಭಯಭಕ್ತಿಯುಳ್ಳವರಿಗೆ ಬಹು ದೊಡ್ಡ ದೊಡ್ಡ ವಾಗ್ದಾನಗಳಿವೆ. ಭಯಭಕ್ತಿಯುಳ್ಳವನು ಅಲ್ಲಾಹನ ಮಿತ್ರನಾಗುವನು, ಅದಕ್ಕಿಂತ ಬೇರೆ ಯಾವ ಸ್ಥಾನವಿದೆ. ನಾವು ಅಲ್ಲಾಹನ ಮಿತ್ರನಾಗಿದ್ದೇವೆ ಎಂದು ಭಯಭಕ್ತರಹಿತವಾಗಿದ್ದರೆ, ಕಪಟತನದ ಜೀವನ ಸಾಗಿಸುವವರಾಗಿದ್ದರೆ ಅವರು ತಮ್ಮ ವಾದದಲ್ಲಿ ಸುಳ್ಳುಗಾರರು ಎನ್ನಬಹುದು. ಅದಲ್ಲದೆ ಅವರು ಬಗೆಯುವ ದ್ರೋಹವೇನೆಂದರೆ ತನ್ನನ್ನು ಅಲ್ಲಾಹನ ಮಿತ್ರರೆಂದು ಸಾರುತ್ತಾರೆ. ಆದರೆ ಅಲ್ಲಾಹನು ಭಯಭಕ್ತಿವುಳ್ಳವರು ಯಾರೆಂಬುದಕ್ಕೆ ಶರತ್ತುಗಳನ್ನು ನೀಡಿರುತ್ತಾನೆ.

ಮತ್ತೊಂದು ಶರತ್ತು ವಿಧಿಸಿರುವುದೇನೆಂದರೆ ಅಥವ ಭಯಭಕ್ತಿವುಳ್ಳವರ ಗುರುತು ಅಂದರೆ- "ಇನ್ನಲ್ಲಾಹ ಮಅಲ್ಲಝೀನತ್ತಖಾ" ಅಲ್ಲಾಹನು ಅವರೊಂದಿಗಿರುವನು ಅಂದರೆ ಅವರನ್ನು ರಕ್ಷಿಸುವನು," ಅಲ್ಲಾಹನು ಅವನೊಂದಿಗಿರುವನು ಎಂಬುದಕ್ಕೆ ಸಾಕ್ಷಿ ಅವನ ಕೃಪಾಕಟಕ್ಷ ಅವನೊಂದಿರುತ್ತದೆ. ಮಿತ್ರತ್ವದ ಮೊದಲ ಬಾಗಿಲು ಅವರ ಪ್ರಕಾರ ಮುಚ್ಚಿದೆ. ಈಗ ಎರಡನೆಯ ಬಾಗಿಲು (ಅವನ ಸಂರಕ್ಷಣೆ ಮತ್ತು ಸಹಾಯ ಮಾಡುವ ಬಾಗಿಲು) ಅದೇ ರೀತಿ ಬಂದ್ ಆಗಿದೆ. ನೆನಪಿಡಿರಿ. ಅಲ್ಲಾಹನ ಸಹಾಯ ಎಂದೂ ಪಾಪಿಗಳಿಗೆ ಮತ್ತು ಕಪಟಧಾರಿಗಳಿಗೆ ಲಭಿಸುವುದಿಲ್ಲ. ಅದಕ್ಕೆ ಮಾನದಂಡ ಭಯಭಕ್ತಿಯೇ ಆಗಿದೆ. ಅಲ್ಲಾಹನು ಭಯಭಕ್ತಿಯುಳ್ಳವರಿಗೆ ಮಾತ್ರ ಸಹಕರಿಸುವನು.

ಮತ್ತೊಂದು ಮಾರ್ಗವೆಂದರೆ ಮನುಷ್ಯನು ಕಷ್ಟಗಳಿಗೆ ಮತ್ತು ಆಪತ್ತುಗಳಿಗೆ ಗುರಿಯಾಗುತ್ತಾನೆ ಮತ್ತು ಹಲವು ಅಗತ್ಯಗಳು ಬೇಕಾಗುತ್ತವೆ. ಅದಕ್ಕೆಲ್ಲ ಪರಿಹಾರವು ಭಯಭಕ್ತಿಯೇ ಆಗಿದೆ. ಆರ್ಥಿಕ ಸಂಕಷ್ಟವಾಗಲೀ ಅಥವಾ ಬೇರೆ ಕಷ್ಟಗಳಾಗಲಿ ಅದಕ್ಕೆ ಮುಕ್ತಿ ಪಡೆಯುವ ಮಾರ್ಗ ಭಯಭಕ್ತಿಯೇ ಆಗಿದೆ. ಅಲ್ಲಾಹನು ಹೇಳಿದನು. ವಮ್ಯಂ ಎತ್ತಬಿಲ್ಲಾಹ್.. (ಅತ್ತರಾಖ್ : 3,4) ಭಯಭಕ್ತಿವುಳ್ಳವನಿಗೆ ಎಲ್ಲಾ ಕಷ್ಟಗಳಲ್ಲಿಯೂ ಮುಕ್ತಿಯ ಒಂದು ಮಾರ್ಗ ತೆರೆದಿರುತ್ತಾನೆ. ಮತ್ತು ಅವನಿಗೆ ಅದೃಶ್ಯ ರೀತಿಯಲ್ಲಿ ಪ್ರಾಪ್ತಿಯ ಮಾರ್ಗಗಳು ಒದಗಿಸಿಕೊಡುತ್ತಾನೆ. ಅವನಿಗೆ ಯಾವ ರೀತಿಯಲ್ಲಿ ಆಹಾರ ನೀಡುತ್ತಾನೆಂದರೆ ಅವನಿಗೆ ತಿಳಿಯಲಿಕ್ಕೂ ಸಾಧ್ಯವಾಗುವುದಿಲ್ಲ.

**(ಮಲ್ಫೂಝಾತ್ ಸಂಪುಟ 1, ಪುಟ 379, ಮುದ್ರಣ 2018 ಖಾದಿಯಾನ್)**

## ಈ ಆಯತ್‌ನಲ್ಲಿ ಅಂದಿನ ಕಾಲದಲ್ಲಿ ಜಗತ್ತಿಗೆ ತಿಳಿದಿರದ ಮತ್ತು ನಂತರ ಕಂಡುಹಿಡಿದ ಹಾಲು ಉತ್ಪಾದನೆಯ ವಿಧಾನವನ್ನು ವಿವರಿಸಲಾಗಿದೆ. ಪವಿತ್ರ ಖುರ್‌ಆನ್‌ನ ಮಾತುಗಳು ಪ್ರಸ್ತುತ ವೈಜ್ಞಾನಿಕ ಸಂಶೋಧನೆಗೆ ಅನುಗುಣವಾಗಿವೆ

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ ನಹಲ್ ಆಯತ್ 67 ವ **ಇನ್ನಲಕುಮ್ ಫಿಲ್ ಅನ್‌ಆಮಿ ಲಇಬ್‌ರತನ್, ನುಸ್ಖೀಕುಮ್ಮಿಮ್ಮಾ ಫೀ ಬುತೂನಿಹೀ ಮಿಮ್ ಬೈನಿ ಫರ್ನಿವ್ವ ದಮಿಲ್ಲಬನನ್ ಖಾಲಿಸನ್ ಸಆಇಗಲ್ಲಿಶ್ಶಾರಿಬೀನ್** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

ಅಂದಿನ ಕಾಲದಲ್ಲಿ ಜಗತ್ತಿಗೆ ಅರಿವಿರದ ಮತ್ತು ನಂತರ ಕಂಡುಹಿಡಿದ ಹಾಲಿನ ಉತ್ಪಾದನೆಯ ವಿಧಾನವನ್ನು ವಿವರಿಸಿರುವುದರಿಂದ ಪವಿತ್ರ ಖುರ್‌ಆನ್‌ನ ಅವತರಿಸುವವನೇ ಪ್ರಪಂಚದ ಸೃಷ್ಟಿಕರ್ತ ಎಂಬ ಅಂಶಕ್ಕೆ ಈ ಆಯತ್ ಸಾಕ್ಷಿಯಾಗಿದೆ. ಆಹಾರವು ಹೊಟ್ಟೆಯಿಂದ ಕರುಳನ್ನು ಪ್ರವೇಶಿಸುತ್ತದೆ ಮತ್ತು ಅದರಿಂದ ಸಗಣಿ ಉತ್ಪತ್ತಿಯಾಗುತ್ತದೆ, ಈ ಸಗಣಿಯಲ್ಲಿ ಒಂದು ಭಾಗವು ರಕ್ತವಾಗುತ್ತದೆ ಮತ್ತು ಈ ರಕ್ತದಿಂದ ಹಾಲು ರೂಪುಗೊಳ್ಳುತ್ತದೆ. ಇದು ಪವಿತ್ರ ಖುರ್‌ಆನ್‌ನ ಅವತರಣಿಕೆಯ ನಂತರ ಸಂಶೋಧನೆಯಿಂದ ಸಾಬೀತಾಗಿರುವ ಸತ್ಯವಾಗಿದೆ. ಆದ್ದರಿಂದ, ನಂತರದ ವ್ಯಾಖ್ಯಾನಕಾರರು, ಆರಂಭಿಕ ವ್ಯಾಖ್ಯಾನಕಾರರ ದೋಷವನ್ನು ಪ್ರಸ್ತುತಪಡಿಸುವ ಮೂಲಕ ವಾಸ್ತವವಾಗಿ ಸಗಣಿಯಿಂದ ರಕ್ತ ಬರುತ್ತದೆ ಮತ್ತು ರಕ್ತದಿಂದ ಹಾಲು ಬರುತ್ತದೆ ಎಂದು ತೋರಿಸಿದ್ದಾರೆ. ಆದರೆ ಅವರು ನೀಡಿದ ವ್ಯಾಖ್ಯಾನವು ಸಂಪೂರ್ಣವಾಗಿ ವಿಜ್ಞಾನಕ್ಕೆ ಅನುಗುಣವಾಗಿಲ್ಲ, ಆದರೆ ಪವಿತ್ರ ಖುರ್‌ಆನ್‌ನ ಮಾತುಗಳು ಪ್ರಸ್ತುತ ವೈಜ್ಞಾನಿಕ ಸಂಶೋಧನೆಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತವೆ ಮತ್ತು ಆಹಾರವು ಹೊಟ್ಟೆಯಿಂದ ಕರುಳಿಗೆ ಹೋಗುತ್ತದೆ ಮತ್ತು ಅಲ್ಲಿಂದ ಜೀರ್ಣವಾಗಿರುವ ಉತ್ತಮ ಭಾಗವು ಕೆಲವು ರಕ್ತನಾಳಗಳ ಮೂಲಕ ಒಂದು ಭಾಗವು ನೇರವಾಗಿ ಹೃದಯಕ್ಕೆ ಹೋಗಿ ಕಂಠದ ದಪ್ಪನಾಡಿಗಳಿಗೆ ಬಿದ್ದು ತಕ್ಷಣವೇ ರಕ್ತವಾಗುತ್ತದೆ ಮತ್ತು ಇನ್ನೊಂದು ಸೂಕ್ಷ್ಮ ಭಾಗವು ನೇರವಾಗಿ ಹೊಟ್ಟೆಯಿಂದ ಯಕೃತ್ತಿಗೆ ಹೋಗುತ್ತದೆ ಮತ್ತು ಅಲ್ಲಿಂದ ಅದು ಕಂಠದ ದಪ್ಪನಾಡಿಗಳ ಮೂಲಕ ಹೃದಯಕ್ಕೆ ಬಿದ್ದು ರಕ್ತವಾಗುತ್ತದೆ. ನಂತರ ಈ ರಕ್ತವು ಕೆಚ್ಚಲುಗಳ ಬಳಿ ಹೋದಾಗ, ಸರ್ವಶಕ್ತನಾದ ಅಲ್ಲಾಹನು ಅಲ್ಲಿ ಅಂತಹ ವಸ್ತುಗಳನ್ನು ಸೃಷ್ಟಿಸಿದ್ದಾನೆ, ಆ ರಕ್ತವು ಅಲ್ಲಿಗೆ ಹೋಗಿ

*(ಪುಟ ಸಂಖ್ಯೆ-07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಅಬೂಬಕರ್(ರ) ಅಬೂಖಸೀಮರನ್ನು ಕಂಡಾಗ ಕೇಳಿದರು: ಎಲೈ ಅಬೂಖಸೀಮ, ಯಾವ ವಾರ್ತೆಯನ್ನು ತಂದಿದ್ದೀಯ? ಅವರು ಹೇಳಿದರು: ಹೇ ಖಲೀಫತುರ್‍ರಸೂಲ್, ಸುವಾರ್ತೆಯಿದೆ. ಅಲ್ಲಾಹನು ನಮಗೆ ಯಮಾಮದಲ್ಲಿ ವಿಜಯವನ್ನು ನೀಡಿರುವನು. ಹಝ್ರತ್ ಅಬೂಬಕರ್(ರ) ಕೂಡಲೇ ಸಜದ ಮಾಡಿದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಯಮಾಮ ಯುದ್ಧದ ಪರಿಸ್ಥಿತಿಗಳ ವಿವರಾತ್ಮಕ ಪ್ರಸ್ತಾವನೆ**

**ಮುಸೈಲಮ ಕಝ್ಝಾಬ್‌ನ ವಧೆಯ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10-06-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪದಲ್ಲಿ ಯಮಾಮ ಯುದ್ಧದ ಬಗ್ಗೆ ಹೇಳುತ್ತಿದ್ದೆ. ಇದರ ಕುರಿತು ಹೆಚ್ಚಿನ ವಿವರಗಳು ಇವೆ. ಹಝ್ರತ್ ಅಬೂ ಸಈದ್ ಖುದ್‌ರಿ(ರ) ಹೇಳುತ್ತಾರೆ. ಉಬಾದ್ ಬಿನ್ ಬಶರ್(ರ) ನನ್ನೊಡನೆ ಹೀಗೆ ಹೇಳಿದರು: ಎಲೈ ಅಬೂಸಈದ್ ನಾವು ಬುಝಾಖದಿಂದ ತೆರಳಿದ ರಾತ್ರಿಯಂದು ನಾನು ಕನಸಿನಲ್ಲಿ ಆಕಾಶವು ತೆರೆಯಲ್ಪಟ್ಟಂತೆ ಹಾಗೂ ನನ್ನ ಮುಂದಿನಿಂದ ಮುಚ್ಚಲ್ಪಟ್ಟಂತೆ ಕಂಡೆನು. ಅದರ ಅರ್ಥ ಶಹಾದತ್ ಆಗಿದೆ. ಅಬೂಸಈದ್(ರ) ಹೇಳುತ್ತಾರೆ: ನಾನು ಹೇಳಿದೆ. ಇನ್ಶಾ ಅಲ್ಲಾಹ್, ಏನೇ ಆದರೂ ಒಳಿತೇ ಆಗುವುದು. ಅವರು ಹೇಳುತ್ತಾರೆ: ಯಮಾಮ ದಿನದಂದು ನಾನು ಅವರನ್ನು ನೋಡುತ್ತಿದ್ದೆ. ನಮ್ಮ ಕಡೆಗೆ ಬನ್ನಿರಿ ಎಂದು ಅವರು ಕೂಗುತ್ತಾ ಅನ್ಸಾರರನ್ನು ಕರೆಯುತ್ತಿದ್ದರು. ಆಗ 400 ಜನರು ಬಂದರು. ಅವರಲ್ಲಿ ಬರಾಅ್ ಬಿನ್ ಮಾಲಿಕ್(ರ), ಅಬುದುಜಾನ(ರ) ಮತ್ತು ಉಬಾದ ಬಿನ್ ಬಶರ್(ರ) ಮುಂದೆ ಮುಂದೆ ಇದ್ದರು. ಕೊನೆಗೆ ಅವರು ತೋಟದ ಬಾಗಿಲ ಬಳಿ ತಲುಪಿದರು. ನಾನು ಉಬಾದ ಬಿನ್ ಬಶರಿನ(ರ) ಶಹಾದತಿನ ನಂತರ ನೋಡಿದ್ದೇನೆಂದರೆ, ಅವರ ಮುಖದಲ್ಲಿ ಖಡ್ಗದ ಅನೇಕ ಗುರುತುಗಳು ಇದ್ದುವು. ಅವರ ಶರೀರದಲ್ಲಿ ಇದ್ದ ಒಂದು ಲಕ್ಷಣದಿಂದ ನಾನು ಅವರನ್ನು ಗುರುತು ಹಿಡಿದೆ.

ಅನಂತರ ಹಝ್ರತ್ ಉಮ್ಮೇ ಅಮ್ಮಾರರ(ರ) ಪ್ರಸ್ತಾಪ ಬರುತ್ತದೆ. ಅವರು ಇಸ್ಲಾಮಿನ ಚರಿತ್ರೆಯಲ್ಲಿ ಅತ್ಯಂತ ಶೂರರಾದ ಮಹಿಳೆಯೂ ಸಹಾಬಿಯೂ ಆಗಿದ್ದರು. ಅವರ ಹೆಸರು ನಸೀಬ ಬಿನ್ತ್ ಕಅಬ್ ಎಂದಾಗಿತ್ತು. ಅವರು ಉಹದ್ ಯುದ್ಧದಲ್ಲೂ ಭಾಗವಹಿಸಿದ್ದರು. ಅತ್ಯಂತ ಶೌರ್ಯದಿಂದ ಹೋರಾಡಿದರು. ಮುಸ್ಲಿಮರು ಮೇಲುಗೈಯಿದ್ದ ತನಕ ಅವರು ಚರ್ಮದ ಚೀಲದಲ್ಲಿ ನೀರು ತುಂಬಿಸಿ ಜನರಿಗೆ ಕೊಡುತ್ತಿದ್ದರು. ಆದರೆ ಪರಾಜಿತಗೊಳ್ಳುವಂತಾದಾಗ ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಅವರನ್ನು ಸಂರಕ್ಷಿಸಲು ತೊಡಗಿದರು. ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಬರುತ್ತಿದ್ದಾಗ ಉಮ್ಮೇ ಅಮ್ಮಾರ(ರ) ಅವರನ್ನು ಈಟಿ ಮತ್ತು ಖಡ್ಗದಿಂದ ತಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅನಂತರ ಸ್ವತಃ ಹೀಗೆ ಹೇಳಿದ್ದರು: ನಾನು ಉಮ್ಮೇ ಅಮ್ಮಾರಳನ್ನು(ರ) ನನ್ನ ಬಲ ಮತ್ತು ಎಡೆಗಡೆ ಹೋರಾಡುತ್ತಾ ಇರುವುದನ್ನು ನೋಡಿದ್ದೇನೆ. ಇಬ್ನು ಖುಮ್‌ಯ ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಬಂದಾಗ ಉಮ್ಮೇ ಅಮ್ಮಾರ(ರ) ಮುಂದಕ್ಕೆ ಹೋಗಿ ತಡೆದರು. ಅವನ ಹಲ್ಲೆಯಿಂದ ಹಝ್ರತ್ ಉಮ್ಮೇ ಅಮ್ಮಾರರ(ರ) ತೋಳಲ್ಲಿ ಆಳವಾದ ಗಾಯವಾಯಿತು. ಅವರು ಕೂಡ ಖಡ್ಗದಿಂದ ಅವನ ಮೇಲೆ ಹಲ್ಲೆ ಮಾಡಿದರು. ಆದರೆ ಅವನು ಎರಡು ಯುದ್ಧ ಕವಚಗಳನ್ನು ಧರಿಸಿದ್ದನು. ಆದ್ದರಿಂದ ಅವನಿಗೆ ಹಾನಿ ಉಂಟಾಗಲಿಲ್ಲ. ಹೇಗಿದ್ದರೂ ಇದು ಉಮ್ಮೇ ಅಮ್ಮಾರರ(ರ) ಚಾರಿತ್ರಿಕ ಸ್ಥಾನವಾಗಿದೆ. ಅವರ ಪುತ್ರನಾದ ಅಬ್ದುಲ್ಲಾಹ್(ರ) ಮುಸೈಲಿಮ ಕಝ್ಝಾಬ್‌ರನ್ನು ಕೊಂದು ಹಾಕಿದರು. ಹಝ್ರತ್ ಉಮ್ಮೇ ಅಮ್ಮಾರ(ರ) ಸ್ವತಃ ಆ ದಿನದಂದು ಯಮಾಮ ಯುದ್ಧದಲ್ಲಿ ಭಾಗಿಯಾಗಿದ್ದರು. ಯುದ್ಧದಲ್ಲಿ ಅವರ ಒಂದು ಕೈ ತುಂಡಾಯಿತು. ಹಝ್ರತ್ ಉಮ್ಮೇ ಅಮ್ಮಾರ(ರ) ಈ ಯುದ್ಧದಲ್ಲಿ ಭಾಗಿಯಾಗಲು ಉಂಟಾದ ಕಾರಣದ ಕುರಿತು ಹೀಗೆ ವರದಿಯಿದೆ. ಅವರ ಮಗನಾದ ಹಬೀಬ್ ಬಿನ್ ಝೈದ್(ರ) ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ಜೊತೆಗೆ ಒಮಾನಿನಲ್ಲಿ ಇದ್ದರು. ಹಝ್ರತ್ ಪೈಗಂಬರ್(ಸ) ನಿಧನರಾದ ಸಮಯದಲ್ಲಿ ಅವರು ಒಮಾನಿನಲ್ಲಿದ್ದರು. ಈ ಸುದ್ದಿ ಅಮ್ರಿಗೆ ತಲುಪಿದಾಗ ಅವರು ಒಮಾನಿನಿಂದ ಮರಳಿದರು. ದಾರಿ ಮಧ್ಯೆ ಮುಸೈಲಿಮ ಅವರ ಮುಂದೆ ಬಂದನು. ಹಝ್ರತ್ ಅಮ್ರ್ ಬಿನ್ ಆಸ್(ರ) ಮುಂದಕ್ಕೆ ಹೋದರು. ಹಬೀಬ್ ಬಿನ್ ಝೈದ್(ರ) ಮತ್ತು ಅಬ್ದುಲ್ಲಾಹ್ ಬಿನ್ ವಹಬ್ ಹಿಂದೆ ಇದ್ದರು. ಇಬ್ಬರನ್ನೂ ಮುಸೈಲಿಮ ಹಿಡಿದನು ಮತ್ತು ಹೀಗೆ ಕೇಳಿದನು: ನಾನು ಅಲ್ಲಾಹನ ಪ್ರವಾದಿಯೆಂಬುದಕ್ಕೆ ಸಾಕ್ಷ್ಯವಹಿಸುತ್ತೀರಾ ಎಂದು ಕೇಳಿದರು. ಹೌದೆಂದು ಅಬ್ದುಲ್ಲಾಹ್ ಬಿನ್ ವಹಬ್ ಹೇಳಿದರು. ಜೀವ ರಕ್ಷಣೆಗಾಗಿ ಹೇಳುತ್ತಿದ್ದಾನೆ ಎಂದು ಭಾವಿಸಿ ಅವರನ್ನು ಸರಪಳಿಯಲ್ಲಿ ಕಟ್ಟಿಹಾಕಲು ಮುಸೈಲಿಮ ಆದೇಶ ನೀಡಿದನು. ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಎಂಬುದಕ್ಕೆ ಸಾಕ್ಷ್ಯವಹಿಸುತ್ತೀಯಾ ಎಂದು ಮುಸೈಲಿಮ ಹಬೀಬ್ ಬಿನ್ ಝೈದ್‌ನೊಡನೆ(ರ) ಕೇಳಿದನು. ನಾನು ಆಲಿಸುತ್ತಿಲ್ಲ ಎಂದು ಹಝ್ರತ್ ಹಬೀಬ್(ರ) ಹೇಳಿದರು. ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿರುವರು ಎಂಬುದಕ್ಕೆ ನೀನು ಸಾಕ್ಷ್ಯವಹಿಸುತ್ತೀಯ ಎಂದು ಕೇಳಿದನು. ಹೌದೆಂದು ಹಬೀಬ್(ರ) ಹೇಳಿದರು. ಮುಸೈಲಿಮ ಹಬೀಬ್(ರ)ರ ಬಗ್ಗೆ ಆದೇಶ ನೀಡಿದಾಗ, ಅವರನ್ನು ತುಂಡುತುಂಡನ್ನಾಗಿ ಮಾಡಲಾಯಿತು. ಮುಸೈಲಿಮ ಅಲ್ಲಾಹನ ರಸೂಲ್ ಎಂಬುದಕ್ಕೆ ಸಾಕ್ಷ್ಯ ನೀಡಲು ಹೇಳಲಾಗುವಾಗ, ನನಗೆ ಆಲಿಸಲು ಆಗುತ್ತಿಲ್ಲವೆಂದು ಹಬೀಬ್(ರ) ಹೇಳುತ್ತಿದ್ದರು. ಆದರೆ ಮುಹಮ್ಮದ್(ಸ) ಅಲ್ಲಾಹನು ಪ್ರವಾದಿಯಾಗಿರುವರು ಎಂಬುದಕ್ಕೆ ಸಾಕ್ಷ್ಯವಹಿಸುತ್ತೀಯ ಎಂದು ಕೇಳಲಾಗುವಾಗ ಹಬೀಬ್(ರ) ಹೌದೆಂದು ಹೇಳುತ್ತಿದ್ದರು. ಕೊನೆಗೆ ಅವನು ಅವರ ಒಂದೊಂದು ಅಂಗಾಂಗಗಳನ್ನು ಕತ್ತರಿಸಿದನು. ಅವರ ಕೈಗಳನ್ನು ತೋಳು ಸಮೇತ ಕತ್ತರಿಸಲಾಯಿತು. ಅವರ ಕಾಲುಗಳನ್ನು ಮುಟ್ಟಿನ ಮೇಲಿನಿಂದ ಕತ್ತರಿಸಲಾಯಿತು. ಅನಂತರ ಅವರನ್ನು ಬೆಂಕಿಗೆ ಹಾಕಲಾಯಿತು. ಈ ಎಲ್ಲ ಘಟನೆಯ ವೇಳೆ ಅವರು ತನ್ನ ಮಾತಿನಿಂದ ಹಿಂದಕ್ಕೆ ಸರಿಯಲಿಲ್ಲ. ಮುಸೈಲಿಮ ಕೂಡ ಅವರನ್ನು ಬೆಂಕಿಗೆ ಹಾಕಿ ಶಹೀದ್ ಮಾಡುವ ತನಕ ತನ್ನ ಮಾತಿನಿಂದ ಹಿಂದಕ್ಕೆ ಸರಿಯಲಿಲ್ಲ. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಹಬೀಬ್(ರ) ಮುಸೈಲಿಮನ ಕಡೆಗೆ ಪತ್ರದೊಂದಿಗೆ ಹೋದಾಗ ಅವನು ಹಝ್ರತ್ ಹಬೀಬ್‌ರ ಪ್ರತಿಯೊಂದು ಅಂಗಾಂಗವನ್ನು ಕತ್ತರಿಸಿ ಶಹೀದ್ ಮಾಡಿ ಬೆಂಕಿಗೆ ಹಾಕಿದನು.

ಹಝ್ರತ್ ಉಮ್ಮೇ ಅಮ್ಮಾರ(ರ)ರಿಗೆ ತನ್ನ ಮಗನ ಶಹಾದತಿನ ಸುದ್ದಿ ಮುಟ್ಟಿದಾಗ, ಮುಸೈಲಿಮನನ್ನು ಎದುರಿಸಲು ಮತ್ತು ಕೊಂದುಹಾಕಲು ಅಥವಾ ಅಲ್ಲಾಹನ ಮಾರ್ಗದಲ್ಲಿ ಶಹೀದ್ ಆಗಲು ಹಝ್ರತ್ ಉಮ್ಮೇ ಅಮ್ಮಾರ(ರ) ಸ್ವತಃ ಪಣತೊಟ್ಟರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಯಮಾಮಕ್ಕೆ ಹೋಗಲು ಸೇನೆಯನ್ನು ತಯಾರು ಮಾಡಿದಾಗ ಹಝ್ರತ್ ಉಮ್ಮೇ ಅಮ್ಮಾರ(ರ) ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾಗಿ ಯುದ್ಧದಲ್ಲಿ ಭಾಗಿಯಾಗಲು ಅನುಮತಿ ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ನಿಮ್ಮಂತಹ ಮಹಿಳೆಗೆ ಯುದ್ಧದಲ್ಲಿ ಭಾಗಿಯಾಗಲು ಯಾವುದೇ ಸಂಗತಿ ತಡೆಯಾಗಲು ಸಾಧ್ಯವಿಲ್ಲ. ನೀವು ಅಲ್ಲಾಹನ ಹೆಸರೆತ್ತಿ ಹೊರಡಿರಿ. ಈ ಯುದ್ಧದಲ್ಲಿ ಅವರ ಮತ್ತೊಬ್ಬ ಮಗನಾದ ಹಝ್ರತ್ ಅಬ್ದುಲ್ಲಾಹ್(ರ) ಕೂಡ ಭಾಗಿಯಾಗಿದ್ದರು. ಹಝ್ರತ್ ಉಮ್ಮೇ ಅಮ್ಮಾರ(ರ) ಹೇಳುತ್ತಾರೆ: ನಾವು ಯಮಾಮ ತಲುಪಿದಾಗ ಘೋರವಾದ ಯುದ್ಧ ನಡೆಯಿತು. ಅನ್ಸಾರರು ಸಹಾಯಕ್ಕಾಗಿ ಕರೆದರು ಮತ್ತು ಮುಸ್ಲಿಮರು ಸಹಾಯಕ್ಕಾಗಿ ತಲುಪಿದರು. ನಾವು ತೋಟದ ಮುಂದೆ ತಲುಪಿದಾಗ ತೋಟದ ಬಾಗಿಲಿನ ಬಳಿ ಜನದಟ್ಟನೆ ಉಂಟಾಯಿತು. ನಮ್ಮ ಶತ್ರುಗಳು ತೋಟದ ಒಂದೆಡೆ ಇದ್ದರು. ನಾವು ತೋಟದಲ್ಲಿ ಬಲವಂತವಾಗಿ ನುಗ್ಗಿದೆವು ಮತ್ತು ಸ್ವಲ್ಪ ಸಮಯ ಅವರ ವಿರುದ್ಧ ಯುದ್ಧ ನಡೆಸಿದೆವು. ಅಲ್ಲಾಹನ ಶತ್ರುವಾದ

ಮುಸೈಲಿಮನನ್ನು ಹುಡುಕಲು ಮತ್ತು ಆತನನ್ನು ನೋಡಲು ನಾನು ನಿರ್ಧರಿಸಿದೆ. ನಾನು ಆತನನ್ನು ಕಂಡರೆ ಅವನನ್ನು ಬಿಟ್ಟು ಬಿಡುವುದಿಲ್ಲ ಮತ್ತು ಆತನನ್ನು ವಧಿಸುವೆ ಅಥವಾ ಸ್ವತಃ ಸಾಯುವೆ ಎಂದು ನಾನು ಅಲ್ಲಾಹನ ಹೆಸರಲ್ಲಿ ಪ್ರತಿಜ್ಞೆ ಮಾಡಿದೆ. ಕೊನೆಗೆ ನಾನು ಅಲ್ಲಾಹನ ಶತ್ರುವನ್ನು ಕಂಡೆ. ನಾನು ಅವನ ಮೇಲೆ ಹಲ್ಲೆ ನಡೆಸಿದೆ. ಒಬ್ಬ ವ್ಯಕ್ತಿ ನನ್ನ ಮುಂದೆ ಬಂದನು. ಆತನು ನನ್ನ ಮೇಲೆ ಹಲ್ಲೆ ನಡೆಸಿ ನನ್ನ ಕೈಯನ್ನು ತುಂಡರಿಸಿದನು. ಆದರೆ ಅಲ್ಲಾಹನ ಆಣೆ, ನಾನು ಚಂಚಲಗೊಳ್ಳಲಿಲ್ಲ. ಏಕೆಂದರೆ ನಾನು ಆ ನೀಚನ ಬಳಿಗೆ ತಲುಪಬೇಕಾಗಿತ್ತು. ಆತನು ನೆಲದಲ್ಲಿ ಬಿದ್ದಿರುವುದನ್ನು ನಾನು ಕಂಡೆನು. ನಾನು ನನ್ನ ಮಗನನ್ನು ಸಹ ಅಲ್ಲಿ ಕಂಡೆನು. ಅವನು ಮುಸೈಲಿಮನನ್ನು ಕೊಂದುಹಾಕಿದ್ದನು. ಬೇರೊಂದು ವರದಿಯೂ ಇದೆ. ಹಝ್ರತ್ ಉಮ್ಮೇ ಅಮ್ಮಾರ(ರ) ಹೇಳುತ್ತಾರೆ: ನನ್ನ ಮಗನು ತನ್ನ ಬಟ್ಟೆಯಿಂದ ತನ್ನ ಖಡ್ಗವನ್ನು ಶುಚಿಗೊಳಿಸುತ್ತಿದ್ದನು. ನೀನು ಮುಸೈಲಿಮನನ್ನು ವಧಿಸಿದೆಯಾ ಎಂದು ನಾನು ಕೇಳಿದೆ. 'ಹೌದು ನನ್ನ ತಾಯಿ' ಎಂದು ಅವನು ಹೇಳಿದನು. ನಾನು ಅಲ್ಲಾಹನ ಮುಂದೆ **ಸಜ್ದ ಶುಕ್ರ್** ಮಾಡಿದೆ. ಅಲ್ಲಾಹನು ಶತ್ರುಗಳ ಬೇರನ್ನು ಕತ್ತರಿಸಿದನು. ಯುದ್ಧ ಕೊನೆಗೊಂಡು ನಾನು ನನ್ನ ಮನೆಗೆ ಮರಳಿಹೋದಾಗ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಒಬ್ಬ ಅರೇಬಿಯನಾದ ವೈದ್ಯನನ್ನು ನನ್ನ ಬಳಿಗೆ ಕರೆದುಕೊಂಡು ಬಂದರು. ಅವನು ಕುದಿಯುವ ಎಣ್ಣೆಯಿಂದ ನನ್ನ ಚಿಕಿತ್ಸೆ ನಡೆಸಿದನು. ಅಲ್ಲಾಹನಾಣೆ, ಈ ಚಿಕಿತ್ಸೆಯು ನನಗೆ ನನ್ನ ಕೈ ತುಂಡಾಗಿ ಹೋದದ್ದಕ್ಕಿಂತ ಹೆಚ್ಚು ನೋವಿನಿಂದ ಕೂಡಿದ್ದಾಗಿತ್ತು. ಹಝ್ರತ್ ಖಾಲಿದ್(ರ) ನನ್ನ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು ಮತ್ತು ನಮ್ಮೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ನಮ್ಮ ಹಕ್ಕುಗಳ ಬಗ್ಗೆ ಗಮನವಹಿಸುತ್ತಿದ್ದರು ಮತ್ತು ನಮ್ಮ ಬಗ್ಗೆ ಹಝ್ರತ್ ಪೈಗಂಬರ್(ಸ) ನೀಡಿದ್ದ ವಸಿಯ್ಯತ್ತಿನ ಕುರಿತು ಕಾಳಜಿ ವಹಿಸುತ್ತಿದ್ದರು.

ಯಮಾಮ ಯುದ್ಧದಲ್ಲಿ ಮುಸ್ಲಿಮರ ಗಾಯಾಳುಗಳ ಸಂಖ್ಯೆ ಬಹಳ ಹೆಚ್ಚಾಗಿತ್ತು. ಜನರು ಯಮಾಮದಲ್ಲಿ 15 ದಿನಗಳು ತಂಗಿದರು. ಯುದ್ಧ ಕೊನೆಗೊಂಡಿತ್ತು. ಗಾಯದ ಕಾರಣದಿಂದ ಅನ್ಸಾರ್ ಮತ್ತು ಮುಹಾಜಿರರಲ್ಲಿ ಬಹಳ ಸ್ವಲ್ಪ ಜನರು ಹಝ್ರತ್ ಖಾಲಿದ್(ರ)ರ ಜೊತೆಗೆ ನಮಾಝ್ ನಿರ್ವಹಿಸುತ್ತಿದ್ದರು. ಮತ್ತೊಂದು ವರದಿಯಲ್ಲಿ ಹೀಗೆಯೂ ಇದೆ: ಹಝ್ರತ್ ಉಮ್ಮೇ ಅಮ್ಮಾರ(ರ) ಯಮಾಮದ ದಿನದಂದು ಗಾಯಾಳಾದರು. ಖಡ್ಗ ಮತ್ತು ಈಟಿಗಳ ಹನ್ನೊಂದು ಗಾಯಗಳು ಅವರಿಗೆ ಉಂಟಾಗಿದ್ದುವು. ಅದಲ್ಲದೇ ಅವರ ಒಂದು ಕೈ ತುಂಡಾಯಿತು. ಹಝ್ರತ್ ಅಬೂಬಕರ್(ರ) ಅವರ ಆರೋಗ್ಯಾವಸ್ಥೆಯನ್ನು ಅರಿಯಲು ಬರುತ್ತಿದ್ದರು. ಕಅ್‌ಬ್ ಬಿನ್ ಅಜ್ರ್(ರ) ಆ ದಿನದಂದು ಕಠಿಣವಾದ ಯುದ್ಧ ನಡೆಸಿದರು. ಆ ದಿನದಂದು ಜನರಿಗೆ ಬಹಳ ನಷ್ಟವುಂಟಾಯಿತು. ಜನರು ಪರಾಜಿತಗೊಂಡು ಓಡುತ್ತಾ ಸೇನೆಯ ಕೊನೆಗೆ ಭಾಗವನ್ನು ಕೂಡ ದಾಟಿದರು. ಕಅ್‌ಬ್ ಹೀಗೆ ಕೂಗಿ ಕರೆದರು: ಎಲೈ ಅನ್ಸಾರ್, ಅಲ್ಲಾಹ್ ಮತ್ತು ಪ್ರವಾದಿಯ ಸಹಾಯಕ್ಕಾಗಿ ಬನ್ನಿರಿ. ಹೀಗೆ ಹೇಳುತ್ತಾ ಅವರು ಮುಹ್‌ಕಂ ಬಿನ್ ತುಫೈಲ್‌ನ ತನಕ ತಲುಪಿದರು. ಮುಹ್‌ಕಂ ಅವರ ಮೇಲೆ ಹಲ್ಲೆ ನಡೆಸಿದನು. ಅವರ ಎಡಗೈ ತುಂಡಾಯಿತು. ಅಲ್ಲಾಹನಾಣೆ, ಆದಾಗ್ಯೂ ಕಅ್‌ಬ್(ರ) ನಡುಗಲಿಲ್ಲ. ಎಡಗೈಯಿಂದ ರಕ್ತ ಹರಿಯುತ್ತಿದ್ದಂತೆಯೇ ಬಲಗೈಯಿಂದ ಹಲ್ಲೆ ನಡೆಸುತ್ತಿದ್ದರು. ಹಝ್ರತ್ ಅಬೂ ಅಖೀಲ್(ರ)ರ ಬಗ್ಗೆ ಹೀಗೆ ವರದಿಯಿದೆ: ಹಝ್ರತ್ ಅಬೂಅಖೀಲ್(ರ) ಅನ್ಸಾರರ ಸಹಾಯಕ ಸಂಘಕ್ಕೆ ಸೇರಿದವರಾಗಿದ್ದರು. ಅವರು ಯಮಾಮದ ದಿನದಂದು ಮೊತ್ತಮೊದಲು ಯುದ್ಧಕ್ಕಾಗಿ ಹೊರಟರು. ಅವರಿಗೆ ಒಂದು ಬಾಣ ತಗುಲಿತು. ಅದು ಹೆಗಲನ್ನು ಮುರಿಯುತ್ತಾ ಹೃದಯದ ತನಕ ತಲುಪಿತು. ಅವರು ಆ ಬಾಣವನ್ನು ಹೊರಗೆ ತೆಗೆದರು. ಅವರು ಈ ಗಾಯದಿಂದ ಬಲಹೀನರಾದರು. ಮಅ್‌ನ್ ಬಿನ್ ಅದ್ದಿ ಹೀಗೆ ಹೇಳುತ್ತಿರುವುದನ್ನು ಅವರು ಆಲಿಸಿದರು: ಎಲೈ ಅನ್ಸಾರ್, ಶತ್ರುಗಳ ಮೇಲೆ ಹಲ್ಲೆ ನಡೆಸಲು ಹೊರಡಿರಿ. ಅಮ್ರ್ ಹೇಳುತ್ತಾರೆ: ಅಬೂಅಖೀಲ್(ರ) ತನ್ನ ಜನರ ಕಡೆಗೆ ಹೊರಡಲು ಎದ್ದರು. ನಾನು ಹೀಗೆ ಕೇಳಿದೆ: ಅಬೂ ಅಖೀಲ್, ನಿಮ್ಮ ಉದ್ದೇಶವೇನು? ಯುದ್ಧ ಮಾಡುವ ಸಾಮರ್ಥ್ಯ ನಿಮಗೆ ಈಗಿಲ್ಲ. ನೀವು ಬಹಳ ದುರ್ಬಲಗೊಂಡಿರುವಿರಿ. ಅವರು ಹೇಳಿದರು: ಕರೆಯುವವನು ನನ್ನ ಹೆಸರನ್ನು ಎತ್ತಿ ಕರೆದಿರುವನು. ನಾನು ಹೇಳಿದೆ: ಅವರಂತು ಕೇವಲ ಅನ್ಸಾರರ ಹೆಸರನ್ನು ಎತ್ತಿರುವರು. ಗಾಯಾಳುಗಳನ್ನು ಅವರು ಉದ್ದೇಶಿಸಿಲ್ಲ. ಹಝ್ರತ್ ಅಬೂಅಖೀಲ್(ರ) ಹೇಳಿದರು: ನಾನು ಅನ್ಸಾರರಲ್ಲಿ ಸೇರಿದವನಾಗಿದ್ದೇನೆ. ಬೇರೆಯವರು ದುರ್ಬಲತೆ ತೋರಿಸಿದರೂ ನಾನು ಆ ಕರೆಗೆ ಖಂಡಿತ ಉತ್ತರಿಸುವೆನು. ಇಬ್ನು ಉಮರ್(ರ) ಹೇಳುತ್ತಾರೆ: ಅಬೂಅಖೀಲ್(ರ) ಧೈರ್ಯಮಾಡಿಕೊಂಡು ಎದ್ದರು. ತನ್ನ ಬಲಗೈಯಿಂದ ತೆರೆದ ಖಡ್ಗವನ್ನು ಹಿಡಿದರು ಮತ್ತು ಹೀಗೆ ಕೂಗಿ ಹೇಳಿದರು: ಎಲೈ ಅನ್ಸಾರ್, ಹುನೈನ್ ಯುದ್ಧದ ದಿನದಂದು ಮಾಡಿದ ರೀತಿಯಲ್ಲಿ ಮರಳಿ ದಾಳಿ ನಡೆಸಿರಿ. ಅವರೆಲ್ಲರೂ ಒಟ್ಟು ಸೇರಿದರು ಮತ್ತು ಶತ್ರುಗಳ ಮುಂದೆ ಇತರ ಮುಸ್ಲಿಮರ ಸಂರಕ್ಷಕರಾಗಿ ನಿಂತರು. ಕೊನೆಗೆ ಅವರು ಶತ್ರುಗಳನ್ನು ತೋಟದೊಳಗೆ ನುಗ್ಗುವಂತೆ ಮಾಡಿದರು. ಅನಂತರ ಒಳಗೆ ಹೋಗಿ ಘೋರವಾದ ಯುದ್ಧ ನಡೆಯಿತು. ನಾನು ಅಬೂಅಖೀಲ್(ರ)ರನ್ನು ನೋಡಿದೆ. ಅವರ ಗಾಯಗೊಂಡ ಕೈ ಭುಜ ಸಮೇತ ತುಂಡಾಗಿ ನೆಲಕ್ಕೆ ಬಿತ್ತು. ಅವರಿಗೆ 14 ಗಾಯಗಳು ಉಂಟಾಗಿದ್ದುವು. ಈ ಎಲ್ಲ ಗಾಯದ ಕಾರಣದಿಂದ ಅವರು ಶಹೀದ್ ಆದರು. ಇಬ್ನು ಉಮರ್(ರ) ಹೇಳುತ್ತಾರೆ: ನಾನು ಅಬೂಅಖೀಲ್(ರ)ರ ಸಮೀಪಕ್ಕೆ ತಲುಪಿದೆ. ಅವರು ನೆಲಕ್ಕೆ ಬಿದ್ದು ಕೊನೆಯುಸಿರು ತೆಗೆಯುತ್ತಿದ್ದರು. ಹೇ ಅಬೂಅಖೀಲ್ ಎಂದು ನಾನು ಕರೆದೆ. ಆಗ ಅವರು ನಡುಗುವ ನಾಲಗೆಯಿಂದ 'ನಾನು ಹಾಜರಿದ್ದೇನೆ' ಎಂದು ಹೇಳಿದರು. ಯಾರು ಪರಾಜಿತಗೊಂಡರು ಎಂದು ಅವರು ಕೇಳಿದರು. ನಾನು ಉಚ್ಚ ಸ್ವರದಲ್ಲಿ ಹೇಳಿದೆ: ಶುಭಾಶಯಗಳು, ಅಲ್ಲಾಹನ ಶತ್ರು ಮುಸೈಲಿಮ ಕೊಲ್ಲಲ್ಪಟ್ಟನು. ಅವರು **ಅಲ್‌ಹಮ್‌ದುಲಿಲ್ಲಾಹ್** ಎಂದು ಹೇಳುತ್ತಾ ತನ್ನ ಬೆರಳನ್ನು ಆಕಾಶದ ಕಡೆಗೆ ಎತ್ತಿದರು ಮತ್ತು ಜೀವತ್ಯಾಗ ಮಾಡಿದರು. ಇಬ್ನು ಉಮರ್(ರ) ಹೇಳುತ್ತಾರೆ: ನಾನು ನನ್ನ ತಂದೆಯಾದ ಹಝ್ರತ್ ಉಮರ್(ರ)ರಿಗೆ ಈ ಎಲ್ಲ ಘಟನೆಯನ್ನು ತಿಳಿಸಿದೆ. ಅವರು ಹೇಳಿದರು: ಅಲ್ಲಾಹನು ಅವರ ಮೇಲೆ ಕರುಣೆದೋರಲಿ. ಅವರು ಸದಾ ಶಹಾದತ್ ಪಡೆಯಲು ಬಯಸುತ್ತಿದ್ದರು. ನನ್ನ ತಿಳುವಳಿಕೆ ಪ್ರಕಾರ ಅವರು ಹಝ್ರತ್ ಪೈಗಂಬರ್(ಸ)ರ ಕೆಲವು ವರಿಷ್ಠ ಸಹಾಬಿಯರಲ್ಲಿ ಮತ್ತು ಇಸ್ಲಾಂ ಸ್ವೀಕಾರ ಮಾಡಿದ ಆರಂಭ ಕಾಲದವರಲ್ಲಿ ಒಬ್ಬರಾಗಿದ್ದರು.

ಯಮಾಮ ಯುದ್ಧದ ನಂತರ ಒಂದು ದಿನ ಮುಜಾಅ ಬಿನ್ ಮುರಾರ ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು: ಹೇ ಖಲೀಫತುರ್ರಸೂಲ್, ಯಮಾಮ ಯುದ್ಧದಲ್ಲಿ ಭಾಗಿಯಾಗಿದ್ದ ಸಹಾಬಿಯರಿಗಿಂತ ಹೆಚ್ಚಾಗಿ ಯಾರನ್ನೂ ಖಡ್ಗಗಳ ದಾಳಿಗಳ ಮುಂದೆ ಸ್ಥಿರಚಿತ್ತರಾಗಿ ನಿಲ್ಲುವವರನ್ನಾಗಿ ಮತ್ತು ಶಕ್ತವಾಗಿ ದಾಳಿ ನಡೆಸುವವರನ್ನಾಗಿ ನಾನು ಕಂಡಿಲ್ಲ. ಮಅ್‌ನ್ ಬಿನ್ ಅದ್ದಿ ಮತ್ತು ಅನ್ಸಾರರು ಶಕ್ತವಾದ ಸ್ಥಿರಚಿತ್ತತೆ ಮತ್ತು ಧೈರ್ಯದಿಂದ ಹೋರಾಡುತ್ತಾ ಶಹೀದ್ ಆದ ಘಟನೆಗಳನ್ನು ಮುಜಾಅ ಹಝ್ರತ್ ಅಬೂಬಕರ್(ರ)ರೊಡನೆ ಹೇಳುತ್ತಿದ್ದರು. ಇದನ್ನು ಆಲಿಸಿ ಹಝ್ರತ್ ಅಬೂಬಕರ್(ರ) ಅತ್ತುಬಿಟ್ಟರು. ಎಷ್ಟರ ವರೆಗೆ ಎಂದರೆ, ಅವರ ಗಡ್ಡ ಕಣ್ಣೀರಿನಿಂದ ಒದ್ದೆಯಾಯಿತು.

ಅಬೂಸಈದ್ ಖುದ್‌ರಿ(ರ) ವರದಿ ಮಾಡುತ್ತಾರೆ: ಝುಹರಿನ ಸಮಯವಾದಾಗ ನಾನು ತೋಟದಲ್ಲಿ ಪ್ರವೇಶಿಸಿದೆ ಮತ್ತು ಕಠಿಣವಾದ ಯುದ್ಧ ನಡೆಯುತಿತ್ತು. ಝುಹರಿನ ಅದ್ಹಾನ್ ಕೊಡಲು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮುಅದ್ದಿನಿಗೆ ಆದೇಶ ನೀಡಿದಾಗ ಆತ ತೋಟದ ಗೋಡೆಯ ಮೇಲಿಂದ ಝುಹರಿನ ಅದ್ಹಾನ್ ನೀಡಿದನು. ಜನರು ಯುದ್ಧದ ಕಾರಣದಿಂದ ನಡುಕದಲ್ಲಿದ್ದರು. ಕೊನೆಗೆ ಅಸರಿನ ನಂತರ ಯುದ್ಧ ಕೊನೆಗೊಂಡಾಗ ಹಝ್ರತ್ ಖಾಲಿದ್(ರ)ರ ನೇತೃತ್ವದಲ್ಲಿ ನಾವು ಝುಹರ್ ಮತ್ತು ಅಸರಿನ ನಮಾಝ್ ನಿರ್ವಹಿಸಿದೆವು. ಅನಂತರ ಅವರು ನೀರು ಕುಡಿಸುವವರನ್ನು ಯುದ್ಧದಲ್ಲಿ ಕೊಲ್ಲಲಟ್ಟ ಜನರ ಬಳಿಗೆ ಕಳುಹಿಸಿದರು. ನಾನು ಕೂಡ ಅವರ ಜೊತೆಗೆ ಹೋದೆ. ನಾನು ಅಬೂಅಖೀಲ್‌ರ(ರ) ಸಮೀಪದಿಂದ ದಾಟಿ ಹೋದೆನು. ಅವರಿಗೆ 15 ಗಾಯಗಳು ಉಂಟಾಗಿದ್ದುವು. ಅವರು ನನ್ನೊಡನೆ ನೀರು ಕೇಳಿದರು. ನಾನು ಅವರಿಗೆ ನೀರು ಕುಡಿಸಿದೆ. ಆಗ ಅವರ ಎಲ್ಲ ಗಾಯಗಳಿಂದ ನೀರು ಹರಿಯತೊಡಗಿತು ಮತ್ತು ಅವರು ಶಹೀದ್ ಆದರು. ನಾನು ಬಶರ್ ಬಿನ್ ಅಬ್ದುಲ್ಲಾಹ್‌ರ(ರ) ಸಮೀಪದಿಂದ ದಾಟಿಹೋದೆನು. ಅವರು ಅಲ್ಲಿ ಕುಳಿತುಕೊಂಡಿದ್ದರು. ಅವರು ನನ್ನೊಡನೆ ನೀರು ಕೇಳಿದರು. ನಾನು ಅವರಿಗೆ ನೀರು ಕುಡಿಸಿದ ನಂತರ ಅವರು ಕೂಡ ಶಹೀದ್ ಆದರು.

ಮಹ್ಮೂದ್ ಬಿನ್ ಲಬೀದ್(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಖಾಲಿದ್(ರ) ಯಮಾಮದ ಜನರನ್ನು ವಧಿಸಿದ ಸಮಯದಲ್ಲಿ ಮುಸ್ಲಿಮರು ಕೂಡ ಈ ಯುದ್ಧದಲ್ಲಿ ದೊಡ್ಡ ಸಂಖ್ಯೆಯಲ್ಲಿ ಶಹೀದ್ ಆದರು. ಹಝ್ರತ್ ಪೈಗಂಬರ್(ಸ)ರ ಅನೇಕ ಸಹಾಬಿಯರು ಕೂಡ ಶಹೀದ್ ಆದರು. ಬದುಕಿ ಉಳಿದವರಲ್ಲಿ ಹೆಚ್ಚಿನವರು ಗಾಯಾಳು ಆಗಿದ್ದರು.(ಅಲ್ ಇಕ್ತಿಫಾ, ಸಂಪುಟ-2, ಭಾಗ-1, ಪುಟ-57-66, ಆಲಿಮುಲ್ ಕುತುಬ್ ಬೈರೂ 1997) (ಸೈರುಸ್ಸಹಾಬಿಯಾತ್, ಸೈಯದ್ ಅನ್ಸಾರಿ, ಪುಟ-122, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್) (ಸಯ್ಯದುನಾ ಅಬೂಬಕ್ಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಸಲಾಬಿ ಪುಟ-349, ಫುರ್ಖಾನ್ ಟ್ರಷ್ಟ್ ಖಾನ್‌ಗಡ್ ಪಾಕಿಸ್ತಾನ್)

ಮುಸೈಲಮನ ಕೊಲೆಯ ಬಗ್ಗೆ ಹಝ್ರತ್ ಖಾಲಿದ್(ರ) ಅವರಿಗೆ ತಿಳಿಸಿದಾಗ, ಅವರು ಮುಸೈಲಮನನ್ನು ಗುರುತಿಸಲು ಮುಜ್ಜಾಅನನ್ನು ಕೈಕೋಳಗಳನ್ನು ಹಾಕಿ ತನ್ನೊಂದಿಗೆ ಕರೆತಂದರು. ಅವನು ಶವಗಳನ್ನು ನೋಡುತ್ತಲೇ ಇದ್ದನು ಆದರೆ ಮುಸೈಲಮ ಅವನಿಗೆ ಅಲ್ಲಿ ಕಾಣಲಿಲ್ಲ. ನಂತರ ಅವನು ತೋಟವನ್ನು ಪ್ರವೇಶಿಸಿದನು ಅಲ್ಲಿ ಓರ್ವ ಗಿಡ್ಡ ಗಾತ್ರ, ಹಳದಿ ಮೈಬಣ್ಣ, ಮತ್ತು ಚಪ್ಪಟೆ ಮೂಗು ಹೊಂದಿರುವ ಮನುಷ್ಯನ ದೇಹವನ್ನು ನೋಡಿದಾಗ ಮುಜ್ಜಾಅ ಇವನೇ ಮುಸೈಲಮ ಎಂದು ಹೇಳಿದನು. ಅದಕ್ಕೆ ಹಝ್ರತ್ ಖಾಲಿದ್(ರ) ಹೇಳಿದರು: ಈ ಮನುಷ್ಯನೇ ನಿಮ್ಮೊಂದಿಗೆ ಹೀಗೆಲ್ಲ ಮಾಡಿರುವನು. ಮುಜ್ಜಾಅ ಸೆರೆಯಲ್ಲಿದ್ದ ಕಾರಣ, ಬಾನು ಹನೀಫಾ ಅವರ ಪ್ರತಿನಿಧಿಯೂ ಆಗಿದ್ದನು, ಸರ್ದಾರ ಆಗಿದ್ದನು. ಆದ್ದರಿಂದ ಅವನು ಅವರನ್ನು

ಉಳಿಸಲು ಬಯಸಿದನು. ಸಾಮಾನ್ಯವಾಗಿ ಎಲ್ಲಾ ಪುರುಷರು ಮರಣ ಹೊಂದಿದ್ದರು, ಆದರೆ ಅವನು ಒಂದು ಉಪಾಯ ಮಾಡಿದನು. ಕೋಟೆಯಲ್ಲಿ ಸಿಕ್ಕಿಬಿದ್ದ ಉಳಿದ ಜನರನ್ನು ಉಳಿಸಲು ಅವನು ವಂಚಿಸಿದನು ಮತ್ತು ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡ. ಕೋಟೆಗಳು ಇನ್ನೂ ಹೋರಾಟಗಾರರಿಂದ ತುಂಬಿರುವಾಗ ನಿಮ್ಮ ವಿರುದ್ಧ ಹೋರಾಡಲು ಹೊರಟವರು ಕೇವಲ ಆತುರದ ಜನರು ಎಂದು ಅವನು ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ಹೇಳಿದನು. ಹಝ್‌ರತ್ ಖಾಲಿದ್(ರ) ಹೇಳಿದರು: ನೀನು ಏನು ಹೇಳುತ್ತಿದ್ದೀಯ? ಅದಕ್ಕೆ ಅವನು ಹೇಳಿದನು ಅಲ್ಲಾಹನ ಆಣೆ! ನಾನು ಹೇಳುತ್ತಿರುವುದು ಸಂಪೂರ್ಣ ಸತ್ಯವಾಗಿದೆ. ಆದುದರಿಂದ ನನ್ನ ಹಿಂದೆ ನನ್ನ ಜನರ ಪರವಾಗಿ ಬಂದು ನನ್ನೊಂದಿಗೆ ಸಂಧಾನ ಮಾಡಿಕೊಳ್ಳಿ. ಅವನು ವಂಚನೆಯಿಂದ ಈ ವಿಷಯಗಳನ್ನು ಹೇಳಿದನು, ಆದಾಗ್ಯೂ, ನಂತರ ಸ್ಪಷ್ಟವಾಗುತ್ತದೆ. ಈ ಭೀಕರ ಯುದ್ಧದಲ್ಲಿ ಮುಸ್ಲಿಮರ ಮೇಲೆ ಉಂಟುಮಾಡಿದ ಜೀವಹಾನಿಯ ದೃಷ್ಟಿಯಿಂದ, ಹಝ್‌ರತ್ ಖಾಲಿದ್(ರ)ರವರು ಈಗ ಬಾನು ಹನೀಫಾನ ಮುಖ್ಯಸ್ಥ ಮತ್ತು ಮೂಲ ಬಂಡಾಯ ನಾಯಕ ಮತ್ತು ಅವನ ಸಹಚರರು ಕೊಲ್ಲಲ್ಪಟ್ಟರು, ಮುಸ್ಲಿಮರು ಮತ್ತಷ್ಟು ಸಾವುನೋವುಗಳನ್ನು ಅನುಭವಿಸುವುದು ಸೂಕ್ತವೆಂದು ಅವರು ಪರಿಗಣಿಸಿದರು. ಹಾಗೆ ಮಾಡದಿರುವುದು ಉತ್ತಮ, ಆದ್ದರಿಂದ ಹಝ್‌ರತ್ ಖಾಲಿದ್(ರ) ಶಾಂತಿಗೆ ಒಪ್ಪಿದರು. ಹಝ್‌ರತ್ ಖಾಲಿದ್(ರ) ಅವರಿಂದ ಶಾಂತಿಯ ಒಪ್ಪಂದವನ್ನು ಪಡೆದುಕೊಂಡು, ಮುಜಾಅ ಹೇಳಿದನು, "ನಾನು ಅವರ ಬಳಿಗೆ ಹೋಗಿ ಅವರನ್ನು ಸಮಾಲೋಚಿಸುತ್ತೇನೆ." ನಂತರ ಅವನು ಅವರ ಬಳಿಗೆ ಹೋದನು ಮತ್ತು ಅವನಿಗೆ ಅರಿವಿತ್ತು ಕೋಟೆಯ ಒಳಗೆ ಕೇವಲ ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಹೊರತು ಪಡಿಸಿ ಯಾರೂ ಇರಲಿಲ್ಲ ಎಂದು. ಅವನು ಅವರಿಗೆ ರಕ್ಷಕವಚವನ್ನು ತೊಡಿಸಿ ನಾನು ಹಿಂದಿರುಗುವವರೆಗೂ ಕೋಟೆಯ ಗೋಡೆಗಳನ್ನು ಏರಲು ಮಹಿಳೆಯರಿಗೆ ಹೇಳಿದನು. ನಂತರ ಅವನು ಹಝ್‌ರತ್ ಖಾಲಿದ್ ಅವರ ಬಳಿಗೆ ಬಂದು ನಾನು ಒಪ್ಪಂದ ಮಾಡಿದ ಷರತ್ತನ್ನು ಅವರು ಒಪ್ಪಲಿಲ್ಲ ಎಂದು ಹೇಳಿದನು. ಹಝ್‌ರತ್ ಖಾಲಿದ್ ಅವರು ಕೋಟೆಯ ಕಡೆಗೆ ನೋಡಿದಾಗ, ಅವರು ಪುರುಷರಿಂದ ತುಂಬಿರುವುದನ್ನು ಕಂಡರು. ರಕ್ಷಾಕವಚ ಇತ್ಯಾದಿ ಧರಿಸಿದ ಮಹಿಳೆಯರು ಇದ್ದರು. ಈ ಯುದ್ಧವು ಮುಸ್ಲಿಮರಿಗೂ ಹಾನಿಯನ್ನುಂಟುಮಾಡಿತು ಮತ್ತು ಯುದ್ಧವು ಎಷ್ಟು ಉದ್ದವಾಗಿತ್ತು ಎಂದರೆ ಮುಸ್ಲಿಮರು ವಿಜಯಶಾಲಿಯಾಗಿ ಮರಳಲು ಬಯಸಿದ್ದರು ಏಕೆಂದರೆ ಮುಂದೆ ಏನಾಗಲಿದೆ ಎಂದು ಅವರಿಗೆ ತಿಳಿದಿರಲಿಲ್ಲ. ಆದ್ದರಿಂದ, ಹಝ್‌ರತ್ ಖಾಲಿದ್ ಅವರು ತುಲನಾತ್ಮಕವಾಗಿ ಮೃದುವಾದ ಷರತ್ತುಗಳು, ಚಿನ್ನ, ಬೆಳ್ಳಿ, ಶಸ್ತ್ರಾಸ್ತ್ರಗಳು ಮತ್ತು ಅರ್ಧದಷ್ಟು ಕೈದಿಗಳ ಮೇಲೆ ರಾಜಿ ಮಾಡಿಕೊಂಡರು ಮತ್ತು ಅವರು ಕಾಲುಭಾಗದಲ್ಲಿ ರಾಜಿ ಮಾಡಿಕೊಂಡರು ಎಂದು ಸಹ ಹೇಳಲಾಗುತ್ತದೆ. ಕೋಟೆಯ ದ್ವಾರಗಳನ್ನು ತೆರೆದಾಗ, ಅವರಲ್ಲಿ ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಹೊರತುಪಡಿಸಿ ಯಾರೂ ಇರಲಿಲ್ಲ. ಇದಾದ ಮೇಲೆ ಹಝ್‌ರತ್ ಖಾಲಿದ್ ಅವರು ಮುಜ್ಜಾಅನನ್ನು ಉದ್ದೇಶಿಸಿ, "ನೀನು ಕೆಟ್ಟವನು, ನೀನು ನನಗೆ ಮೋಸ ಮಾಡಿದ್ದೀಯ" ಎಂದು ಹೇಳಿದರು. ಅದಕ್ಕೆ ಮುಜ್ಜಾಅ ಹೇಳಿದನು, "ಇವರು ನನ್ನ ಖೌಮಿನ ಜನರಾಗಿದ್ದಾರೆ, ಅವರನ್ನು ಉಳಿಸುವುದು ನನಗೆ ಅಗತ್ಯವಾಗಿತ್ತು." ನಾನು ಇನ್ನೇನು ಮಾಡಬಲ್ಲೆ? ಅದರ ನಂತರ, ಪ್ರತಿ ವಯಸ್ಕನನ್ನು ಕೊಲ್ಲಬೇಕು ಎಂದು ಅಬುಬಕ್ಕರ್ ಅವರ ಪತ್ರವು ಹಝ್‌ರತ್ ಖಾಲಿದ್(ರ) ಅವರಿಗೆ ತಲುಪಿತು, ಆದರೆ ಈ ಪತ್ರವು ಹಝ್‌ರತ್ ಖಾಲಿದ್(ರ) ಅವರು ಅವರೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ತಲುಪಿತು, ಆದ್ದರಿಂದ ಅವರು ತಮ್ಮ ವಾಗ್ದಾನವನ್ನು ಪೂರೈಸಿದರು ಮತ್ತು ಅವಿಧೇಯನಾಗಲಿಲ್ಲ. (ಅಲ್-ಕಾಮಿಲ್ ಫೀ ಅಲ್-ತಾರಿಖ್ ಇಬ್ನ್ ಅಸೀರ್, ಸಂಪುಟ-2, ಪುಟಗಳು 222-223, ದಾರ್ ಅಲ್-ಕುತುಬ್ ಅಲ್-ಅಲಮಿಯಾ ಬೈರುತ್ 2006)

ಅವರ ಪ್ರಾಣ ಉಳಿಸಲು ಆಶ್ರಯ ನೀಡಿದ್ದರಿಂದ ಆದ್ದರಿಂದ ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರು ಹಝ್‌ರತ್ ಅಬೂಬಕ್ಕರ್(ರ) ಅವರಿಗೆ ಮುಸ್ಲಿಮರ ಸ್ಥಿತಿ ಮತ್ತು ಸಾಮರಸ್ಯದ ಕಾರಣವನ್ನು ವಿವರಿಸಲು ಪತ್ರವನ್ನು ಕಳುಹಿಸಿದರು, ಅದನ್ನು ಓದಿದ ನಂತರ ಹಝ್‌ರತ್ ಅಬೂಬಕರ್(ರ) ಅವರು ತೃಪ್ತಿ ಮತ್ತು ಸಂತೋಷಪಟ್ಟರು. ಹಝ್‌ರತ್ ಖಾಲಿದ್(ರ) ಅವರು ಒಪ್ಪಂದವನ್ನು ಮುಗಿಸಿದ ನಂತರ ಅವರು ಕೋಟೆಗಳ ಬಗ್ಗೆ ಆದೇಶ ನೀಡಿದರು, ಆದ್ದರಿಂದ ಅಲ್ಲಿ ಪುರುಷರನ್ನು ನೇಮಿಸಲಾಯಿತು. ಮುಜಾಅ ಅಲ್ಲಾಹನ ಮೇಲೆ ಪ್ರತಿಜ್ಞೆ ಮಾಡಿದನು, ಶಾಂತಿ ಮಾಡಲಾದ ಯಾವುದೇ ವಿಷಯವು ತನಗೆ ಮರೆಯಾಗುವುದಿಲ್ಲ ಮತ್ತು ಯಾರಾದರೂ ಯಾವುದೇ ರಹಸ್ಯವನ್ನು ತಿಳಿದಿದ್ದರೆ ಅದನ್ನು ಖಾಲಿದ್‌ಗೆ ತಿಳಿಸಲಾಗುತ್ತದೆ. ನಂತರ ಕೋಟೆಗಳನ್ನು ತೆರೆಯಲಾಯಿತು, ಖಾಲಿದ್ ಪ್ರತ್ಯೇಕವಾಗಿ ಸಂಗ್ರಹಿಸಿದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಈ ಕೋಟೆಗಳಲ್ಲಿ ಕಂಡುಬರುವ ದೀನಾರ್‌ಗಳು ಮತ್ತು ದಿರ್ಹಮ್‌ಗಳನ್ನು ಸಹ ಪ್ರತ್ಯೇಕವಾಗಿ ಸಂಗ್ರಹಿಸಲಾಯಿತು ಅವುಗಳ ರಕ್ಷಾಕವಚವನ್ನು ಸಂಗ್ರಹಿಸಲಾಯಿತು. ನಂತರ ಕೈದಿಗಳನ್ನು ಹೊರತೆಗೆದು ಎರಡು ಭಾಗಗಳಾಗಿ ವಿಂಗಡಿಸಲಾಯಿತು. ನಂತರ ಯುದ್ಧದಲ್ಲಿ ಪಡೆದ ಸಂಪತ್ತಿನಲ್ಲಿ ರಕ್ಷಾಕವಚ ಮತ್ತು ಸಂಕೋಲೆಗಳು ಮತ್ತು ಚಿನ್ನ ಬೆಳ್ಳಿ ಇತ್ಯಾದಿಗಳನ್ನು ತೂಗಿ ಖುಮ್ಸ್ ಭಾಗವನ್ನು ಬೇರ್ಪಡಿಸಲಾಯಿತು. ಜನರಿಗೆ ಕಾಲು ಭಾಗದಷ್ಟು ಖುಮ್ಸ್ ಹಂಚಲಾಯಿತು. ಸವಾರರಿಗೆ ಎರಡು ಭಾಗಗಳನ್ನು ಮತ್ತು ಕುದುರೆಯ ಮಾಲೀಕರಿಗೆ ಒಂದು ಭಾಗವನ್ನು ನಿಗದಿಪಡಿಸಲಾಯಿತು ಮತ್ತು ಅವರೆಲ್ಲರಿಂದಲೂ ಖುಮ್ಸ್‌ಗಳನ್ನು ಕಡಿತಗೊಳಿಸಲಾಯಿತು ಮತ್ತು ಈ ಎಲ್ಲಾ ಖುಮ್ಸ್‌ಗಳನ್ನು ಹಝ್‌ರತ್ ಅಬೂಬಕರ್ ಸಿದ್ದೀಕ್(ರ) ಅವರ ಸೇವೆಗೆ ಕಳುಹಿಸಲಾಯಿತು.

(ಅಲ್-ಇಕ್ತಿಫಾ, ಸಂಪುಟ-2, ಭಾಗ-1, ಪುಟ 70-71, ಆಲಂ ಅಲ್-ಕಿತಾಬ್ ಬೈರುತ್ 1997)

ಇದರ ನಂತರ, ಬನು ಹನೀಫಾರವರು ಬೈಅತ್ ಮಾಡಲು ಮತ್ತು ಮುಸೈಲಮನ ಪ್ರವಾದಿತ್ವದೊಂದಿಗೆ ಸಂಬಂಧವನ್ನು ಇರಿಸುವುದಿಲ್ಲ ಎಂದು ತೋರಿಸಲು ಒಟ್ಟುಗೂಡಿದರು. ಈ ಎಲ್ಲ ಜನರನ್ನು ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರ ಬಳಿಗೆ ಕರೆತರಲಾಯಿತು, ಅಲ್ಲಿ ಅವರು ಬೈಅತ್ ಮಾಡಿ ಪುನಃ ಇಸ್ಲಾಂಗೆ ಮತಾಂತರಗೊಳ್ಳುವುದಾಗಿ ಘೋಷಿಸಿದರು. ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರು ಹಝ್‌ರತ್ ಅಬೂಬಕರ್ ಸಿದ್ದೀಕ್(ರ) ಅವರ ಸೇವೆಯಲ್ಲಿ ಒಂದು ಗುಂಪನ್ನು ಮದೀನಾಕ್ಕೆ ಕಳುಹಿಸಿದರು. ಅವರು ಹಝ್‌ರತ್ ಅಬೂಬಕ್ಕರ್(ರ) ಅವರನ್ನು ತಲುಪಿದಾಗ, ಹಝ್‌ರತ್ ಅಬೂಬಕರ್(ರ) ಅವರು ಮುಸಲ್ಮಾನರ ಬಲೆಯಲ್ಲಿ ನೀವು ಹೇಗೆ ಸಿಕ್ಕಿಬಿದ್ದು ದಾರಿ ತಪ್ಪಿದಿರಿ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಅದಕ್ಕೆ ಅವರು ಉತ್ತರಿಸಿದರು: ಓ ಖಲೀಫರೇ! ನಮ್ಮ ಪರಿಸ್ಥಿತಿಯ ಬಗ್ಗೆ ನಿಮಗೆ ಚೆನ್ನಾಗಿ ತಿಳಿದಿದೆ. ಮುಸೈಲಮ ತನಗೆ ಪ್ರಯೋಜನವಾಗಲಿಲ್ಲ, ಮತ್ತು ಅವನ ಸಂಬಂಧಿಕರಿಗೂ ಪ್ರಯೋಜನ ನೋಡಲಿಲ್ಲ ಮತ್ತು ಖೌಮಿಗೂ ಪ್ರಯೋಜನವಾಗಲಿಲ್ಲ. (ಹಝ್‌ರತ್ ಅಬುಬಕರ್ ಸಿದ್ದಿಕ್(ರ) ಅವರಿಂದ ಮುಹಮ್ಮದ್ ಹುಸೇನ್ ಹೈಕಲ್‌ನ ಪುಟ-206)

ಹಝ್‌ರತ್ ಅಬೂಬಕರ್(ರ)ರ ಒಂದು ಕನಸಿನ ಪ್ರಸ್ತಾಪವಿದೆ. ಹಝ್‌ರತ್ ಖಾಲಿದ್(ರ)ರನ್ನು ಹಝ್‌ರತ್ ಅಬೂಬಕರ್(ರ) ಯಮಾಮ ಕಡೆಗೆ ಕಳುಹಿಸಿದಾಗ ಅವರು ಹೀಗೊಂದು ಕನಸನ್ನು ಕಂಡರು. ಅವರ ಬಳಿ ಹಜರ್ ಗ್ರಾಮವಿತ್ತು. ಅಲ್ಲಿನ ಖರ್ಜೂರಗಳಿಂದ ಕೆಲವು ಖರ್ಜೂರಗಳನ್ನು ತರಲಾಯಿತು. ಅವರು ಅವುಗಳಿಂದ ಒಂದು ಖರ್ಜೂರವನ್ನು ತಿಂದರು. ಆದರೆ ಅದು ಖರ್ಜೂರವಾಗಿರಲಿಲ್ಲ. ಬದಲಾಗಿ ಅದರ ಬೀಜವಾಗಿತ್ತು. ಸ್ವಲ್ಪ ಸಮಯ ಜಗಿದ ನಂತರ ಅವರು ಅದನ್ನು ಬಿಸಾಕಿದರು. ಅವರು ಈ ಕನಸನ್ನು ಹೀಗೆ ವ್ಯಾಖ್ಯಾನಿಸಿದರು: ಹಝ್‌ರತ್ ಖಾಲಿದ್(ರ)ರಿಗೆ ಯಮಾಮ ನಿವಾಸಿಗಳ ಕಡೆಯಿಂದ ಕಠಿಣವಾದ ಹೋರಾಟವನ್ನು ಎದುರಿಸಬೇಕಾಗಿ ಬರುವುದು. ಅಲ್ಲಾಹನು ಖಂಡಿತ ಅವರ ಕೈಗಳಲ್ಲಿ ವಿಜಯವನ್ನು ದಯಪಾಲಿಸುವನು. (ಅಲ್ಇಕ್ತಿಫಾ, ಸಂಪುಟ-2, ಭಾಗ-1, ಪುಟ-72 ಆಲಿಮುಲ್ ಕುತುಬ್ ಬೈರೂತ್ 1997)

ಯಮಾಮದ ಕಡೆಯಿಂದ ಬರುವ ಸುದ್ದಿಗಳಿಗಾಗಿ ಕಾತರದಿಂದ ಹಝ್‌ರತ್ ಅಬೂಬಕರ್(ರ) ಕಾಯುತ್ತಿದ್ದರು. ಹಝ್‌ರತ್ ಖಾಲಿದ್(ರ)ರ ಕಡೆಯಿಂದ ಯಾವನಾದರೂ ದೂತನು ಬಂದರೆ, ಬೇಗನೇ ಅವರು ಅವರಿಂದ ಮಾಹಿತಿಗಳನ್ನು ಪಡೆಯುತ್ತಿದ್ದರು. ಒಂದು ದಿನ ಹಝ್‌ರತ್ ಅಬೂಬಕರ್(ರ) ಮಧ್ಯಾಹ್ನದ ಸಮಯದ ಬಿಸಿಲಿನಲ್ಲಿ ಹೊರಗೆ ಬಂದರು. ಅವರು ಸಿರಾರ್ ಎಂಬ ಹೆಸರಿನ ಪ್ರದೇಶಕ್ಕೆ ಹೋಗಲು ಬಯಸುತ್ತಿದ್ದರು. ಅದು ಮದೀನದಿಂದ 3 ಮೈಲುಗಳ ದೂರದಲ್ಲಿತ್ತು. ಅವರ ಜೊತೆಗೆ ಹಝ್‌ರತ್ ಉಮರ್(ರ), ಹಝ್‌ರತ್ ಸಈದ್ ಬಿನ್ ಝೈದ್, ತುಲೈಹ ಬಿನ್ ಉಬೈದುಲ್ಲಾಹ್ ಹಾಗೂ ಮುಹಾಜಿರ್ ಅನ್ಸಾರರ ಒಂದು ಸಂಘವಿತ್ತು. ಹಝ್‌ರತ್ ಖಾಲಿದ್(ರ) ದೂತರನ್ನಾಗಿ ಕಳುಹಿಸಿದ ಅಬೂಖಸೀಮ ನಜ್ಜಾರಿಯನ್ನು ಹಝ್‌ರತ್ ಅಬೂಬಕರ್(ರ) ಭೇಟಿಯಾದರು. ಹಝ್‌ರತ್ ಅಬೂಬಕರ್(ರ) ಅಬೂಖಸೀಮರನ್ನು ಕಂಡಾಗ ಕೇಳಿದರು: ಎಲೈ ಅಬೂಖಸೀಮ, ಯಾವ ವಾರ್ತೆಯನ್ನು ತಂದಿದ್ದೀಯ? ಅವರು ಹೇಳಿದರು: ಹೇ ಖಲೀಫತುರ್‌ರಸೂಲ್, ಸುವಾರ್ತೆಯಿದೆ. ಅಲ್ಲಾಹನು ನಮಗೆ ಯಮಾಮದಲ್ಲಿ ವಿಜಯವನ್ನು ನೀಡಿರುವನು. ಹಝ್‌ರತ್ ಅಬೂಬಕರ್(ರ) ಕೂಡಲೇ ಸಜದ ಮಾಡಿದರು. ನಿಮ್ಮ ಹೆಸರಲ್ಲಿ ಖಾಲಿದ್‌ರ ಪತ್ರವಿದೆ ಎಂದು ಅಬೂಖಸೀಮ ಹೇಳಿದರು. ಹಝ್‌ರತ್ ಅಬೂಬಕರ್(ರ) ಮತ್ತು ಸಹಾಬಿಯರು ಅಲ್ಲಾಹನನ್ನು ಸ್ತುತಿಸಿದ ನಂತರ, ಯುದ್ಧ ಹೇಗಿತ್ತು ಎಂದು ಹೇಳಲು ಕೇಳಿಕೊಂಡರು. ಅಬೂಖಸೀಮ ಅವರಿಗೆ ಯುದ್ಧದ ಬಗ್ಗೆ ಹೇಳಲು ತೊಡಗಿದರು. ಖಾಲಿದ್(ರ) ಏನೆಲ್ಲ ಮಾಡಿದರು, ಹೇಗೆ ಸೇನೆಯ ಪಂಕ್ತಿಗಳನ್ನು ಕ್ರಮೀಕರಿಸಿದರು, ಮುಸ್ಲಿಮರಿಗೆ ಏನೆಲ್ಲ ನಷ್ಟವುಂಟಾಯಿತು, ಯಾರೆಲ್ಲ ಶಹೀದ್ ಆದರು ಎಂದೆಲ್ಲ ಹೇಳಿಕೊಟ್ಟರು. ಹಝ್‌ರತ್ ಅಬೂಬಕರ್(ರ) **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಹೇಳಿದರು ಮತ್ತು ಅವರಿಗಾಗಿ ಕರುಣೆಯ ದುಆ ಮಾಡಿದರು. ಅಬೂಖಸೀಮ ಹೇಳಿದರು: ಹೇ ಖಲೀಫತುರ್‌ರಸೂಲ್, ನಾವು ಬದವಿ ಜನರಾಗಿರುವೆವು. ಶತ್ರುಗಳು ನಮ್ಮನ್ನು ಪರಾಜಿತಗೊಳಿಸಿದರು. ನಾವು ಇಷ್ಟಪಡದ ಸಂಗತಿಗಳನ್ನು

ಅವರು ಮಾಡಿಕೊಂಡರು. ಅದರ ನಂತರ ಅಲ್ಲಾಹನು ನಮಗೆ ಅವರ ಮೇಲೆ ವಿಜಯವನ್ನು ನೀಡಿದನು. (ಅಲ್ಇಕ್ತಿಫಾ, ಸಂಪುಟ–2, ಭಾಗ–1, ಪುಟ–72–73 ಆಲಿಮುಲ್ ಕುತುಬ್ ಬೈರೂತ್ 1997) (ಫರ್ಹಂಗ್ ಸೀರತ್, ಪುಟ–172, ಝುವಾರ ಅಕಾಡಮಿ ಕರಾಚಿ 2004)

ಮೃತರಾದ ಜನರ ಸಂಖ್ಯೆಯ ಬಗ್ಗೆ ಹೀಗೆ ಹೇಳಲಾಗುತ್ತದೆ: ಈ ಯುದ್ಧದಲ್ಲಿ ಕೊಲ್ಲಲ್ಪಟ್ಟ ಧರ್ಮತ್ಯಾಗಿಗಳ ಸಂಖ್ಯೆ ಸುಮಾರು 10 ಸಾವಿರವಾಗಿತ್ತು. 21 ಸಾವಿರ ಎಂದೂ ವರದಿಯಿದೆ. ಸುಮಾರು ಐನೂರು ಅಥವಾ ಆರುನೂರು ಮುಸ್ಲಿಮರು ಶಹೀದ್ ಆಗಿದ್ದರು. ಯಮಾಮ ಯುದ್ಧದಲ್ಲಿ ಶಹೀದ್ ಆದ ಮುಸ್ಲಿಮರ ಸಂಖ್ಯೆ ಏಳುನೂರು, ಸಾವಿರದ ಇನ್ನೂರು ಮತ್ತು ಸಾವಿರದ ಏಳುನೂರು ಎಂದೂ ವರದಿಯಿದೆ. (ಅಲ್ಬಿದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–321, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001) (ಫತೂಹುಲ್ ಬಲದಾನ್ ಅಲ್ಇಮಾಮ್ ಅಬೀ ಅಲ್ಹಸನ್ ಅಹ್ಮದ್ ಬಿನ್ ಯಹ್ಯಾ ಅಲ್ಬಲಾಝುರಿ, ಪುಟ–63, ದಾರುಲ್ ಕುತುಬ್ ಅಲ್ಇಲ್ಮಿಯ ಬೈರೂತ್ 2000)

ಒಂದು ವರದಿಯ ಪ್ರಕಾರ ಈ ಯುದ್ಧದಲ್ಲಿ ಹುತಾತ್ಮರಾದವರಲ್ಲಿ ಏಳುನೂರಕ್ಕಿಂತ ಹೆಚ್ಚು ಖುರ್ಆನ್ ಹಾಫಿಝ಼್‌ಗಳಾಗಿದ್ದರು. (ಉಮ್ದತುಲ್ ಖಾರಿ ಶರಹ್ ಸಹೀಹ್ ಬುಖಾರಿ ಕಿತಾಬ್ ಫಝಾ಼ ಎಲುಲ್ ಖುರ್ಆನ್, ಸಂಪುಟ–20, ಪುಟ–23, ದಾರುಲ್ ಕುತುಬ್ ಇಲ್ಮಿಯ 2001)

ಮುಸ್ಲಿಮರ ಎಡೆಯಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಹೊಂದಿದ್ದ ಶ್ರೇಷ್ಠ ಸಹಾಬಿಯರು ಮತ್ತು ಖುರ್ಆನ್ ಹಾಫಿಝ್‌ಗಳು ಕೂಡ ಈ ಹುತಾತ್ಮರಲ್ಲಿ ಒಳಪಡುತ್ತಾರೆ. ಅವರು ಶಹೀದ್ ಆದದ್ದು ಬಹಳ ದೊಡ್ಡ ದುಃಖಕರ ಘಟನೆಯಾಗಿತ್ತು. ಆದರೆ ಈ ಖುರ್ಆನ್ ಹಾಫಿಝ಼್‌ಗಳು ಹುತಾತ್ಮರಾದದ್ದೇ ಅನಂತರ ಪವಿತ್ರ ಖುರ್ಆನ್ ಸಂಕಲಿಸಲು ಕಾರಣವಾಯಿತು. ಈ ಹುತಾತ್ಮರಲ್ಲಿ ಕೆಲವು ಪ್ರಸಿದ್ಧ ಸಹಾಬಿಯರ ಹೆಸರುಗಳು ಹೀಗಿವೆ: ಹಝ್ರ಼ತ್ ಝೈದ್ ಬಿನ್ ಖ಼ತ್ತಾಬ್(ರ), ಹಝ಼್ರತ್ ಅಬೂಹುಝೈಫ ಬಿನ್ ರಬೀಅ(ರ), ಹಝ್ರ಼ತ್ ಸಾಲಿಂ ಮೌಲಾ ಅಬೂಹುಧೈಫ(ರ), ಹಝ್ರ಼ತ್ ಖ಼ಾಲಿದ್ ಬಿನ್ ಉಸೈದ್(ರ), ಹಝ್ರ಼ತ್ ಹಕಂ ಬಿನ್ ಸಈದ್(ರ), ಹಝ್ರ಼ತ್ ತುಫೈಲ್ ಬಿನ್ ಅಮ್ರ್ ದೂಸಿ(ರ), ಹಝ್ರ಼ತ್ ಝು಼ಬೇರ್ ಬಿನ್ ಅವಾಮ್(ರ)ರ ಸಹೋದರ ಹಝ್ರ಼ತ್ ಸಾಯಿಬ್ ಬಿನ್ ಅವಾಮ್(ರ), ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಹಾರಿಸ್ ಬಿನ್ ಖೈಸ್(ರ), ಹಝ್ರ಼ತ್ ಉಬಾದ್ ಬಿನ್ ಹಾರಿಸ್(ರ), ಹಝ್ರ಼ತ್ ಉಬಾದ್ ಬಿನ್ ಬಶರ್(ರ), ಹಝ್ರ಼ತ್ ಮಾಲಿಕ್ ಬಿನ್ ಔಸ್(ರ), ಹಝ್ರ಼ತ್ ಸುರಾಖ ಬಿನ್ ಕಅ್ಬ್(ರ), ಹಝ್ರ಼ತ್ ಪೈಗಂಬರ್(ಸ)ರ ವಕ್ತಾರ ಹಝ್ರ಼ತ್ ಮಅ್ನ್ ಬಿನ್ ಅದ್ದಿ(ರ), ಹಝ್ರ಼ತ್ ಸಾಬಿತ್ ಬಿನ್ ಖೈಸ್ ಬಿನ್ ಶುಮಾಸ್(ರ), ಹಝ್ರ಼ತ್ ಅಬೂದುಜಾನ(ರ), ಮುನಾಫಿಕರ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲಿನ ಸತ್ಯಸಂಧ ಸತ್ಯವಿಶ್ವಾಸಿ ಮಗನಾದ ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಅಬ್ದುಲ್ಲಾಹ್(ರ) ಮತ್ತು ಹಝ್ರ಼ತ್ ಯಝೀ಼ದ್ ಬಿನ್ ಸಾಬಿತ್ ಖ಼ಝ್ರ಼ಜಿ(ರ). (ಫತೂಹುಲ್ ಬಲದಾನ್, ಪುಟ–124–126, ಮುಅಸ್ಸಸುಲ್ ಮಆರಿಫ್, ಬೈರೂತ್ 1987)

ಕೆಲವು ಚರಿತ್ರೆಗಾರರ ಪ್ರಕಾರ ಯಮಾಮ ಯುದ್ಧವು ಹಿಜರೀ 12, ರಬೀಉಲ್ ಅವ್ವಲ್ ಮಾಸದಲ್ಲಿ ನಡೆದಿತ್ತು. ಆದರೆ ಕೆಲವರ ಪ್ರಕಾರ ಇದು ಹಿಜರೀ 11ರ ಕೊನೆಗೆ ನಡೆದಿತು. ಇದರಿಂದ ಈ ಯುದ್ಧವು ಹಿಜರೀ 11ರಲ್ಲಿ ಆರಂಭವಾಯಿತು ಮತ್ತು ಅದರ ಅಂತ್ಯ ಹಿಜರೀ 12ರಲ್ಲಿ ಆಯಿತು ಎಂದು ಈ ಎರಡೂ ಅಭಿಪ್ರಾಯಗಳನ್ನು ಸರಿದೂಗಿಸಿ ಹೇಳಬಹುದಾಗಿದೆ. (ಅಲ್ಬಿದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–322, 11 ಹಿಜರಿ ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರ಼ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಪ್ರವಾದಿತ್ವದ ಸುಳ್ಳುವಾದ ಮಾಡಿದ ಯಾವ ವ್ಯಕ್ತಿಗಳ ವಿರುದ್ಧ ಸಹಾಬಿಯರು ಯುದ್ಧ ಮಾಡಿದ್ದರೋ ಅವರೆಲ್ಲರೂ ಇಸ್ಲಾಮಿನ ಆಡಳಿತದ ವಿರುದ್ಧ ದಂಗೆಯೆದ್ದಿದ್ದ ಜನರಾಗಿದ್ದರು. ಅವರು ಇಸ್ಲಾಮಿನ ಆಡಳಿತದ ವಿರುದ್ಧ ಯುದ್ಧ ಘೋಷಣೆ ಮಾಡಿದ್ದರು. ಮುಸೈಲಿಮ ಸ್ವತಃ ಹಝ್ರ಼ತ್ ಪೈಗಂಬರ್(ಸ)ರ ಕಾಲದಲ್ಲಿ ಅವರಿಗೆ ಹೀಗೆ ಪತ್ರ ಬರೆದಿದ್ದರು: ಅರೇಬಿಯದ ಅರ್ಧ ದೇಶ ನಮಗೆ ಮತ್ತು ಉಳಿದ ಅರ್ಧ ದೇಶ ಖುರೈಶಿಯರಿಗೆ ಆಗಿದೆ ಎಂಬ ದೈವಿಕ ಆದೇಶ ನನಗೆ ಲಭಿಸಿದೆ. ಹಝ್ರ಼ತ್ ಪೈಗಂಬರ್(ಸ)ರ ನಿಧನದ ನಂತರ ಅವನು ಹಜರ್ ಮತ್ತು ಯಮಾಮದಿಂದ ಹಝ್ರ಼ತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಯಾದ ಸಮಾಮ ಬಿನ್ ಉಸಾಲ್‌ರನ್ನು ತೆಗೆದುಹಾಕಿ ಸ್ವತಃ ಆ ಪ್ರದೇಶದ ಅಧಿಕಾರಿಯಾದನು ಮತ್ತು ಮುಸ್ಲಿಮರ ಮೇಲೆ ದಾಳಿ ನಡೆಸಿದನು. ಅದೇ ರೀತಿಯಲ್ಲಿ ಮದೀನದ ಇಬ್ಬರು ಸಹಾಬಿಯರಾದ ಹಬೀಬ್ ಬಿನ್ ಝೈದ್ ಮತ್ತು ಅಬ್ದುಲ್ಲಾಹ್ ಬಿನ್ ವಹಬ್‌ರನ್ನು ಬಂಧಿಸಿ ಅವರಿಂದ ತನ್ನ ಪ್ರವಾದಿತ್ವವನ್ನು ನಂಬಲು ಒತ್ತಾಯಿಸಿದನು. ಅಬ್ದುಲ್ಲಾಹ್ ಬಿನ್ ವಹಬ್ ಅಂತು ಹೆದರಿಕೊಂಡು ಅವನ ಮಾತನ್ನು ನಂಬಿದನು. ಆದರೆ ಹಬೀಬ್ ಬಿನ್ ಝೈದ್ ಅವನ ಮಾತನ್ನು ನಂಬುವುದನ್ನು ನಿರಾಕರಿಸಿದರು. ಆಗ ಮುಸೈಲಿಮ ಅವರ ಅಂಗಾಂಗಗಳನ್ನು ತುಂಡರಿಸಿ ಬೆಂಕಿಗೆ ಹಾಕಿದನು.

ಅದೇ ರೀತಿಯಲ್ಲಿ ಯಮನನಲ್ಲೂ ಹಝ್ರ಼ತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಗಳು ಇದ್ದರು. ಅವರಲ್ಲಿ ಕೆಲವರನ್ನು ಅವನು ಬಂಧಿಸಿದನು ಮತ್ತು ಕೆಲವರಿಗೆ ಕಠಿಣವಾದ ಶಿಕ್ಷೆಯನ್ನು ನೀಡಿದನು. ಅದೇ ರೀತಿಯಲ್ಲಿ ಅಸ್ವದ್ ಅನ್ಸಿ ಕೂಡ ದಂಗೆಯೆದ್ದನು. ಹಝ್ರ಼ತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಯನ್ನು ಉಪದ್ರವ ಮಾಡಿದನು ಮತ್ತು ಅವರಿಂದ ಝಕಾತನ್ನು ಕಸಿಯಲು ಆದೇಶ ನೀಡಿದನು. ಹಝ್ರ಼ತ್ ಪೈಗಂಬರ್(ಸ) ಸುನ್ಅದಲ್ಲಿ ನಿಶ್ಚಯಿಸಿದ ಅಧಿಕಾರಿಯಾದ ಶಹರ್ ಬಿನ್ ಬಾಝಾ಼ನಿನ ಮೇಲೆ ಅವನು ಹಲ್ಲೆ ನಡೆಸಿದನು. ಅನೇಕ ಮುಸ್ಲಿಮರನ್ನು ಕೊಂದುಹಾಕಿದನು. ದರೋಡೆ ನಡೆಸಿದನು, ಅವರನ್ನು ವಧಿಸಿದ ನಂತರ ಅವರ ಮುಸ್ಲಿಂ ಪತ್ನಿಯನ್ನು ಬಲವಂತವಾಗಿ ನಿಕಾಹ್ ಮಾಡಿದನು. ಬನೂ ನಜ್ರಾನ್ ಗೋತ್ರ ಕೂಡ ದಂಗೆ ಎದ್ದರು. ಅವರು ಕೂಡ ಅಸ್ವದ್ ಅನ್ಸಿಯೊಡನೆ ಸೇರಿಕೊಂಡರು. ಅವರು ಎರಡು ಸಹಾಬಿಯರಾದ ಅಮ್ರ್ ಬಿನ್ ಹಝ಼್ಮ್ ಮತ್ತು ಖ಼ಾಲಿದ್ ಬಿನ್ ಸಈದ್‌ರನ್ನು ಪ್ರದೇಶದಿಂದ ಹೊರಗೆ ಹಾಕಿದರು.

ಈ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ, ಅವರು ಹಝ್ರ಼ತ್ ಪೈಗಂಬರ್‌ರ(ಸ) ಸಮುದಾಯದಲ್ಲಿ ಇದ್ದುಕೊಂಡು ಪ್ರವಾದಿತ್ವದ ವಾದವನ್ನು ಮಾಡಿದ ಕಾರಣದಿಂದ ಅವರ ವಿರುದ್ಧ ಯುದ್ಧ ಮಾಡಲಾಗಿರಲಿಲ್ಲ. ಬದಲಾಗಿ ಅವರು ಇಸ್ಲಾಮಿನ ಶರೀಅತನ್ನು ರದ್ದುಗೊಳಿಸಿಕೊಂಡು ತಮ್ಮ ಕಾನೂನನ್ನು ಜಾರಿಗೊಳಿಸಿದ್ದರು ಮತ್ತು ತಮ್ಮ ತಮ್ಮ ಪ್ರದೇಶಗಳ ಅಧಿಕಾರದ ವಾದವನ್ನು ಮಾತ್ರ ಹೊಂದಿರಲಿಲ್ಲ. ಬದಲಾಗಿ ಅವರು ಸಹಾಬಿಯರನ್ನು ವಧಿಸಿದ್ದರು. ಇಸ್ಲಾಮಿನ ದೇಶಗಳ ಮೇಲೆ ದಾಳಿ ನಡೆಸಿದರು. ಸ್ಥಾಪಿತಗೊಂಡಿದ್ದ ಸರ್ಕಾರದ ವಿರುದ್ಧ ದಂಗೆಯೆದ್ದರು ಮತ್ತು ತಾವು ಅದರಿಂದ ಸ್ವತಂತ್ರರೆಂದು ಘೋಷಿಸಿದರು. (ಮೌಲಾನ ಮೌದೂದಿ ಸಾಹಿಬ್ ಕೆ ರಿಸಾಲೆ ಖಾದಿಯಾನ ಮಸ್ಅಲ ಕಾ ಜವಾಬ್, ಅನ್ವಾರುಲ್ ಉಲೂಮ್ ಸಂಪುಟ–24, ಪುಟ–12–14)

ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಹಝ್ರ಼ತ್ ಪೈಗಂಬರ್(ಸ) ನಿಧನರಾದಾಗ ಮರಳುಗಾಡಿನ ಅರೇಬಿಯರು ಧರ್ಮತ್ಯಾಗ ಮಾಡಿದರು. ಅಂತಹ ಸೂಕ್ಷ್ಮ ಸಮಯದ ಸ್ಥಿತಿಯ ಬಗ್ಗೆ ಹಝ್ರ಼ತ್ ಆಯಿಶ(ರ) ಹೀಗೆ ಹೇಳುತ್ತಾರೆ:

ಹಝ್ರ಼ತ್ ಪೈಗಂಬರ್(ಸ) ನಿಧನರಾದರು ಮತ್ತು ಕೆಲವು ಸುಳ್ಳುಪ್ರವಾದಿಗಳು ಮುಂದೆ ಬಂದರು. ಕೆಲವರು ನಮಾಝ಼್‌ಗಳನ್ನು ಉಪೇಕ್ಷಿಸಿದರು ಮತ್ತು ತಮ್ಮ ಸ್ವಭಾವಗಳನ್ನು ಬದಲಾಯಿಸಿದರು. ಅಂತಹ ಸ್ಥಿತಿಯಲ್ಲಿ ಮತ್ತು ವಿಪತ್ತಿನಲ್ಲಿ ನನ್ನ ತಂದೆ ಹಝ್ರ಼ತ್ ಪೈಗಂಬರ್(ಸ)ರ ಖ಼ಲೀಫ ಮತ್ತು ಉತ್ತರಾಧಿಕಾರಿಯಾದರು. ಅವರಿಗೆ ಉಂಟಾದ ದುಃಖಗಳು ಪರ್ವತಗಳ ಮೇಲೆ ಬೀಳುತ್ತಿದ್ದರೆ, ಅವುಗಳು ನೆಲಸಮವಾಗಿ ಮಣ್ಣುಪಾಲಾಗುತ್ತಿದ್ದುವು. ಕಷ್ಟತೆಗಳ ಪರ್ವತಗಳು ತನ್ನ ಮೇಲೆ ಬಿದ್ದರು ಕೂಡ ಅವರು ಧೈರ್ಯಗೆಡಲಿಲ್ಲ. ಅದು ಒಬ್ಬ ಸಾಧಾರಣ ವ್ಯಕ್ತಿಗೆ ಸಾಧ್ಯವಾಗುವ ಸಂಗತಿಯಲ್ಲ. ಈ ಸ್ಥೈರ್ಯಕ್ಕೆ ಸತ್ಯಸಂಧತೆಯ ಆವಶ್ಯಕತೆಯಿದೆ. ಅದನ್ನು ಸಿದ್ದೀಖ್ ಅವರೇ ಮಾಡಿ ತೋರಿಸಿದರು. ಈ ಅಪಾಯವನ್ನು ಬೇರೆ ಯಾರಿಂದಲೂ ನಿಯಂತ್ರಿಸಲು ಸಾಧ್ಯವಿರಲಿಲ್ಲ. ಎಲ್ಲ ಸಹಾಬಿಯರು ಆ ಸಮಯದಲ್ಲಿ ಇದ್ದರು. ಇದು ನಮ್ಮಿಂದ ಸಾಧ್ಯವೆಂದೋ ಖ಼ಲೀಫರಾಗುವುದು ನಮ್ಮ ಹಕ್ಕೆಂದೋ ಯಾರು ಹೇಳಲಿಲ್ಲ. ಬೆಂಕಿ ಹೊತ್ತಿಕೊಂಡಿದೆ ಎಂದು ಅವರೆಲ್ಲರೂ ನೋಡುತ್ತಿದ್ದರು. ಯಾರಿಗೂ ಆ ಬೆಂಕಿಗೆ ಬೀಳುವ ಧೈರ್ಯವಿರಲಿಲ್ಲ. ಹಝ್ರ಼ತ್ ಉಮರ್(ರ) ಈ ಸ್ಥಿತಿಯಲ್ಲಿ ತನ್ನ ಕೈಯನ್ನು ಚಾಚಿ ಹಝ್ರ಼ತ್ ಅಬೂಬಕರ್‌ರ(ರ) ಬೈಅತ್ ಮಾಡಿದರು. ಅನಂತರ ಒಬ್ಬೊಬ್ಬರಾಗಿ ಎಲ್ಲರೂ ಬೈಅತ್ ಮಾಡಿದರು. ಅವರ ಸತ್ಯಸಂಧತೆಯಿಂದಲೇ ಈ ಪಿತೂರಿ ದೂರವಾಯಿತು ಮತ್ತು ಆ ಉಪದ್ರವಕಾರಿಗಳನ್ನು ಅವರು ನಾಶಮಾಡಿದರು. ಮುಸೈಲಿಮನ ಜೊತೆಗೆ ಒಂದು ಲಕ್ಷ ಜನರಿದ್ದರು. ಅವನು ಶರೀಅತಿನಲ್ಲಿ ನಿಷಿದ್ಧವಾದದನ್ನು ಧರ್ಮಬದ್ಧವೆಂದು ಹೇಳಿಕೊಂಡಿದ್ದನು. ಅದನ್ನು ನೋಡಿಕೊಂಡು ಜನರು ಅದರಲ್ಲಿ ಸೇರುತ್ತಿದ್ದರು. ಅನೇಕ ತಪ್ಪಾದ ಸಂಗತಿಗಳನ್ನು ಅನುಮತನೀಯವೆಂದು ಹೇಳಿದ್ದನು. ಆದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಜೊತೆಗೆ ಇದ್ದನು ಮತ್ತು ಎಲ್ಲ ಕಷ್ಟತೆಗಳನ್ನು ಸುಲಭಗೊಳಿಸಿದನು.

(ಮಲ್ಫೂಝಾ಼ತ್, ಸಂಪುಟ–1, ಪುಟ–378–379)

ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಹಝ್ರ಼ತ್ ಅಬೂಬಕರ್(ರ)ರ ಖ಼ಿಲಾಫತಿನ ಕಾಲಘಟ್ಟವು ಭಯ ಮತ್ತು ಆಪತ್ತುಗಳ ಸಮಯವಾಗಿತ್ತು ಎಂಬುದು ಸತ್ಯಾನ್ವೇಷಕರಿಗೆ ಸಂಶೋಧಕರಿಗೆ ಗೊತ್ತಿರುವ ಸಂಗತಿಯಾಗಿದೆ. ಹಝ್ರ಼ತ್ ಪೈಗಂಬರ್(ಸ) ನಿಧನರಾದಾಗ ಇಸ್ಲಾಂ ಮತ್ತು ಮುಸ್ಲಿಮರ ಮೇಲೆ ಆಪತ್ತುಗಳು ಬಂದೆರಗಿತು. ಅನೇಕ ಕಪಟವಿಶ್ವಾಸಿಗಳು ಧರ್ಮತ್ಯಾಗಿಗಳಾದರು. ಧರ್ಮತ್ಯಾಗಿಗಳು ದೊಡ್ಡ ದೊಡ್ಡ ಮಾತುಗಳನ್ನಾಡಲು ತೊಡಗಿದರು. ಸುಳ್ಳುವಾದಿಗಳ ಒಂದು ಗುಂಪು ಪ್ರವಾದಿತ್ವವನ್ನು ವಾದಿಸಿದರು. ಅನೇಕ ಗ್ರಾಮವಾಸಿಗಳು ಸುಳ್ಳುವಾದಿಗಳ

ಜೊತೆಗೆ ಸೇರಿದರು. ಎಲ್ಲಿಯ ವರೆಗೆ ಎಂದರೆ, ಮುಸೈಲಿಮ ಕಝ್ಝಾಬ್‌ರ ಜೊತೆಗೆ ಸುಮಾರು ಒಂದು ಲಕ್ಷದಷ್ಟು ಮೂಢ ಮತ್ತು ದುಸ್ಸ್ವಭಾವಿಗಳಾದ ಜನರು ಸೇರಿದರು. ಪಿತೂರಿಗಳು ಮತ್ತು ಆಪತ್ತುಗಳು ವರ್ಧಿಸಿದುವು. ಆಪತ್ತುಗಳು ಸಮೀಪ ಮತ್ತು ದೂರ ಪ್ರದೇಶಗಳಲ್ಲಿ ವ್ಯಾಪಿಸಿದುವು. ಸತ್ಯವಿಶ್ವಾಸಿಗಳ ಮೇಲೆ ಕಠಿಣವಾದ ಭೂಕಂಪದ ಸ್ಥಿತಿಯುಂಟಾಯಿತು. ಆ ಸಮಯದಲ್ಲಿ ಎಲ್ಲರೂ ಪರೀಕ್ಷಿಸಲ್ಪಟ್ಟರು. ಭಯಾನಕ ಮತ್ತು ಮೂರ್ಛೆಹೋಗುವಂತಹ ಅವಸ್ಥೆಗಳು ಪ್ರಕಟಗೊಂಡುವು. ಸತ್ಯವಿಶ್ವಾಸಿಗಳು ಎಷ್ಟು ನಿಸ್ಸಹಾಯಕರಾಗಿದ್ದರು ಎಂದರೆ, ಅವರ ಹೃದಯಗಳಲ್ಲಿ ಬೆಂಕಿಯ ಕೆಂಡಗಳು ಉರಿಯಲು ಶುರುವಾಗಿದ್ದುವು ಅಥವಾ ಅವರನ್ನು ಚೂರಿಯಿಂದ ಕೊಯ್ಯಲಾದ ಸ್ಥಿತಿಯಂತಾಗಿತ್ತು. ಕೆಲವೊಮ್ಮೆ ಅವರು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಪೈಗಂಬರ್(ಸ)ರ ಅಗಲುವಿಕೆಯ ಕಾರಣದಿಂದ ಮತ್ತು ಕೆಲವೊಮ್ಮೆ ಸುಟ್ಟು ಭಸ್ಮಗೊಳಿಸುವ ಬೆಂಕಿಯ ರೂಪದಲ್ಲಿ ಪ್ರಕಟಗೊಂಡಿದ್ದ ಈ ಪಿತೂರಿಗಳ ಕಾರಣದಿಂದ ಅವರು ಅಳುತ್ತಿದ್ದರು. ಶಾಂತಿ ಸಮಾಧಾನ ಕಿಂಚಿತ್ತೂ ಇರಲಿಲ್ಲ. ಕಸದ ರಾಶಿಯ ನಡುವೆ ಬೆಳೆದ ಹುಲ್ಲುಗಳಂತೆ ಪಿತೂರಿಗಾರರು ಎಲ್ಲೆಡೆ ಇದ್ದರು. ಸತ್ಯವಿಶ್ವಾಸಿಗಳ ಭಯ ಮತ್ತು ಗಾಬರಿ ಬಹಳ ವರ್ಧಿಸಿತ್ತು. ಹೃದಯಗಳು ಭಯ ಮತ್ತು ಅಸಮಾಧಾನದಿಂದ ತುಂಬಿದುವು. ಅಂತಹ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಕಾಲಘಟ್ಟದ ಅಧಿಕಾರಿ ಮತ್ತು ಹಝ್ರತ್ ಪೈಗಂಬರ್(ಸ)ರ ಖಲೀಫರನ್ನಾಗಿ ಮಾಡಲಾಯಿತು. ಕಪಟವಿಶ್ವಾಸಿಗಳು, ಸತ್ಯನಿಷೇಧಿಗಳು ಮತ್ತು ಧರ್ಮತ್ಯಾಗಿಗಳು ತೋರಿಸುತ್ತಿದ್ದ ವರ್ತನೆ ಮತ್ತು ನಡವಳಿಕೆಯನ್ನು ನೋಡಿದಾಗ ಅವರು ದುಃಖದಲ್ಲಿ ಮುಳುಗಿದರು. ಅವರು ಬಹಳವಾಗಿ ಅಳುತ್ತಿದ್ದರು ಮತ್ತು ಅವರ ಕಣ್ಣೀರು ಚಿಲುಮೆಯ ಹಾಗೆ ಹರಿಯುತ್ತಿತ್ತು. ಅವರು ಇಸ್ಲಾಂ ಮತ್ತು ಮುಸ್ಲಿಮರ ಒಳಿತಿಗಾಗಿ ಅಲ್ಲಾಹನಲ್ಲಿ ದುಆ ಮಾಡುತ್ತಿದ್ದರು.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನನ್ನ ತಂದೆಯನ್ನು ಖಲೀಫರನ್ನಾಗಿ ಮಾಡಲಾದಾಗ, ಎಂದರೆ ಅಲ್ಲಾಹನು ಅವರಿಗೆ ನೇತೃತ್ವ ಸ್ಥಾನವನ್ನು ಕೊಟ್ಟಾಗ, ಖಿಲಾಫತಿನ ಆರಂಭದಲ್ಲೇ ಅವರು ಎಲ್ಲ ರೀತಿಯ ಪಿತೂರಿಗಳ ಅಲೆ ಏಳುವುದನ್ನು, ಸುಳ್ಳುಪ್ರವಾದಿಗಳ ಕಾರ್ಯಾಚರಣೆಗಳನ್ನು ಮತ್ತು ಕಪಟವಿಶ್ವಾಸಿಗಳ ದಂಗೆಗಳನ್ನು ನೋಡಿದರು. ಅವರ ಮೇಲೆ ಎಷ್ಟು ವಿಪತ್ತುಗಳು ಬಂದೆರಗಿದುವು ಎಂದರೆ, ಅವುಗಳು ಪರ್ವತಗಳ ಮೇಲೆ ಬೀಳುತ್ತಿದ್ದರೆ, ಅವುಗಳು ನೆಲಸಮವಾಗಿ ಮಣ್ಣುಪಾಲಾಗುತ್ತಿದ್ದುವು. ಆದರೆ ಅವರಿಗೆ ಪ್ರವಾದಿಗಳಂತಹ ಸಹನೆಯನ್ನು ದಯಪಾಲಿಸಲಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಕೊನೆಗೆ ಅಲ್ಲಾಹನ ಸಹಾಯ ತಲುಪಿತು ಹಾಗೂ ಸುಳ್ಳುಪ್ರವಾದಿಗಳನ್ನು ಮತ್ತು ಧರ್ಮತ್ಯಾಗಿಗಳನ್ನು ನಾಶಮಾಡಲಾಯಿತು. ಪಿತೂರಿಗಳನ್ನು ದೂರ ಮಾಡಲಾಯಿತು. ವಿಪತ್ತುಗಳು ಇಲ್ಲವಾದುವು. ಸಂಗತಿಗಳ ತೀರ್ಮಾನವಾಯಿತು. ಖಿಲಾಫತಿನ ವಿಷಯ ಸುದೃಢಗೊಂಡಿತು ಮತ್ತು ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಆಪತ್ತುಗಳಿಂದ ರಕ್ಷಿಸಿದನು ಹಾಗೂ ಅವರ ಭಯದ ಸ್ಥಿತಿಯನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು. ಅವರಿಗೆ ಅವರ ಧರ್ಮವನ್ನು ಸುದೃಢಗೊಳಿಸಿದನು. ಒಂದು ಲೋಕವನ್ನೇ ಸತ್ಯದಲ್ಲಿ ನೆಲೆನಿಲ್ಲಿಸಿದನು. ಪಿತೂರಿಗಾರರ ಮುಖಗಳಲ್ಲಿ ಇರುಳು ಕವಿಯಿತು. ಅಲ್ಲಾಹನು ತನ್ನ ವಾಗ್ದಾನವನ್ನು ಈಡೇರಿಸಿದನು. ತನ್ನ ದಾಸನಾದ ಹಝ್ರತ್ ಅಬೂಬಕರ್(ರ)ರಿಗೆ ನೆರವಾದನು. ದುಷ್ಟರಾದ ನೇತಾರರನ್ನು ಮತ್ತು ವಿಗ್ರಹಗಳನ್ನು ನಾಶಮಾಡಿದನು. ಸತ್ಯನಿಷೇಧಿಗಳ ಹೃದಯಗಳಲ್ಲಿ ಎಂತಹ ಭಯ ಹುಟ್ಟಿಸಿದನು ಎಂದರೆ, ಅವರು ಹಿಂದೆ ಸರಿದರು. ಕೊನೆಗೆ ಅವರು ಹಿಂದೆಸರಿದು ಪಶ್ಚಾತ್ತಾಪ ಮಾಡಿದರು. ಇದೇ ಸರ್ವಶಕ್ತನಾದ ಅಲ್ಲಾಹನ ವಾಗ್ದಾನವಾಗಿತ್ತು. ಅವನು ಎಲ್ಲ ಸತ್ಯವಂತರಿಗಿಂತ ಸತ್ಯವಂತನಾಗಿದ್ದಾನೆ. ಒಟ್ಟಿನಲ್ಲಿ ಯೋಚಿಸಿರಿ, ಹೇಗೆ ಖಿಲಾಫತಿನ ವಾಗ್ದಾನ ತನ್ನ ಎಲ್ಲ ಸಂಗತಿಗಳೊಂದಿಗೆ ಮತ್ತು ಲಕ್ಷಣಗಳೊಂದಿಗೆ ಹಝ್ರತ್ ಅಬೂಬಕರ್(ರ)ರಲ್ಲಿ ಈಡೇರಿದುವು. (ಸಿರ್ರುಲ್ ಖಿಲಾಫ, ಉರ್ದು ಅನುವಾದ, ಪುಟ-47-50, ನಝಾರತ್ ಇಶಾಅತ್)

ನಂತರ ಹಝ್ರತ್ ಖಾಲಿದ್ ಯಮಾಮಾ ಅವರ ಅಭಿಯಾನವನ್ನು ಪೂರ್ಣಗೊಳಿಸಿದ ನಂತರ, ಹಝ್ರತ್ ಅಬುಬಕರ್(ರ) ಅವರು ಇರಾಕ್‌ಗೆ ಹೋಗಬೇಕೆಂದು ಅವರಿಗೆ ಪತ್ರ ಬರೆದರು. (ತಾರೀಖ್ ತಬರಿ, ಸಂಪುಟ-2, ಪುಟ-307, ದಾರುಲ್-ಕುತುಬ್ ಅಲ್-ಅಲಮಿಯಾ ಲೆಬನಾನ್ 2012)

ಹಝ್ರತ್ ಅಲಾ ಇಬ್ನ್ ಹಝ್ರಮಿ(ರ) ಅವರು ಹಝ್ರತ್ ಅಬುಬಕರ್(ರ) ಅವರನ್ನು ಸಹಾಯಕ್ಕಾಗಿ ಕೇಳಿದರು ಎಂದು ಹೇಳಲಾಗುತ್ತದೆ. ಅವರು ಖಾಲಿದ್ ಬಿನ್ ವಲೀದ್(ರ) ಅವರಿಗೆ ಪತ್ರ ಬರೆದರು ಮತ್ತು ಯಮಾಮಾದಿಂದ ಅಲಾಗೆ ತ್ವರೆಯಾಗಿ ಮತ್ತು ಅವರಿಗೆ ಸಹಾಯ ಮಾಡಲು ಆದೇಶಿಸಿದರು ಮತ್ತು ಅವರು ಅವರ ಸಹಾಯಕ್ಕೆ ಬಂದರು. ಅವರು ಹುತಮ್ ಅನ್ನು ಕೊಂದ ನಂತರ ಅವರೊಂದಿಗೆ ಖುತ್ ಅನ್ನು ಮುತ್ತಿಗೆ ಹಾಕಿದರು. ಖುತ್ ಬಹ್ರೇನ್‌ನ ಅಬ್ದುಲ್ ಕೈಸ್ ಗೋತ್ರದ ನೆರೆಹೊರೆಯಾಗಿದ್ದು, ಅಲ್ಲಿ ಖರ್ಜೂರದ ಮರಗಳು ಹೇರಳವಾಗಿವೆ. ನಂತರ ಹಝ್ರತ್ ಅಬುಬಕರ್(ರ) ಅವರಿಗೆ ಇರಾಕ್‌ನ ಕಡೆಗೆ ಹೊರಡಲು ಆದೇಶಿಸಿದರು ಮತ್ತು ಅವರು ಬಹ್ರೇನ್‌ನಿಂದ ಹೊರಟರು. (ಫತೂಹುಲ್ ಬಲದಾನ್, ಬಲಾಝುರಿ ಅನುವಾದ, ಸಂಪುಟ-135, ನಫೀಸ್ ಅಕಾಡಮಿ ಕರಾಚಿ) (ಮುಜಮುಲ್ ಬಲದಾನ್, ಸಂಪುಟ-2, ಪುಟ-433)

ಮುಜಾಅ ಬಿನ್ ಮುರಾರಾ ಅವರ ಮಗಳೊಂದಿಗೆ ಹಝ್ರತ್ ಖಾಲಿದ್(ರ) ಅವರ ವಿವಾಹದ ಬಗ್ಗೆ ಉದ್ಭವಿಸುವ ಪ್ರಶ್ನೆಗೆ ಸಂಬಂಧಿಸಿದಂತೆ, ಇತಿಹಾಸ ಮತ್ತು ಜೀವನಚರಿತ್ರೆಯ ಗ್ರಂಥಗಳಲ್ಲಿ ಬರೆಯಲಾಗಿದೆ ಯಮಾಮಾ ಯುದ್ಧದ ಅಂತ್ಯದ ನಂತರ ಮತ್ತು ಬನೂ ಹನೀಫಾರ ಉಳಿದ ಜನರೊಂದಿಗೆ ಮಾಡಿದ ಶಾಂತಿ ಒಪ್ಪಂದದ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ವಿವಾಹವನ್ನು ಉಲ್ಲೇಖಿಸಲಾಗಿದೆ. ಇತಿಹಾಸಕಾರರ ಪ್ರಕಾರ, ಹಝ್ರತ್ ಅಬೂಬಕ್ಕರ್(ರ) ರವರು ಈ ಮದುವೆಯ ಸುದ್ದಿ ತಿಳಿದಾಗ, ಹಝ್ರತ್ ಅಬೂಬಕ್ಕರ್(ರ) ಅವರು ಹಝ್ರತ್ ಖಾಲಿದ್(ರ) ಅವರ ಮೇಲೆ ಕೋಪಗೊಂಡರು, ಆದರೆ ಹಝ್ರತ್ ಖಾಲಿದ್(ರ) ಅವರು ಪತ್ರದಲ್ಲಿ ವಿವರವಾದ ವಿವರಣೆಯನ್ನು ಮಂಡಿಸಿದಾಗ, ಹಝ್ರತ್ ಅಬೂಬಕರ್(ರ) ಅವರ ಕೋಪವೆಲ್ಲವೂ ಹೊರಟುಹೋಯಿತು. ವಿವರಗಳ ಪ್ರಕಾರ, ಒಪ್ಪಂದ ಮಾಡಿಕೊಂಡ ನಂತರ, ಖಾಲಿದ್(ರ) ಅವರು ಮುಜ್ಜಾಅ ರವರನ್ನು ಅವರ ಮಗಳನ್ನು ತನಗೆ ಮದುವೆ ಮಾಡಬೇಕೆಂದು ಕೇಳಿಕೊಂಡರು. ಮಲಿಕ್ ಇಬ್ನ್ ನುವೈರಾ ಅವರ ಪತ್ನಿ ಲೈಲಾ ಉಮ್ಮ್ ತಮೀಮ್ ಅವರ ಘಟನೆ ಮತ್ತು ಹಝ್ರತ್ ಖಾಲಿದ್(ರ) ಅವರನ್ನು ಮದುವೆಯಾಗಲು ಅಬೂಬಕರ್ ಅವರ ಅಸಮಾಧಾನದ ಬಗ್ಗೆ ಮುಜಾಅ ಅವರಿಗೆ ತಿಳಿದಿತ್ತು, ಆದ್ದರಿಂದ ಅವರು ನಿಲ್ಲಿಸಲು ಹೇಳಿದರು. ನೀವು ನನ್ನ ಬೆನ್ನು ಮುರಿಯುವೆ ಮತ್ತು ನೀವು ಹಝ್ರತ್ ಅಬೂಬಕ್ಕರ್(ರ) ರವರ ಛೀಮಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಆದರೆ ಹಝ್ರತ್ ಖಾಲಿದ್(ರ.ಅ) ಅವರು ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡಿ ಎಂದು ಹೇಳಿದರು ಆದ್ದರಿಂದ ಅವರು ತಮ್ಮ ಮಗಳನ್ನು ಅವರಿಗೆ ಮದುವೆ ಮಾಡಿದರು. ಅಬೂಬಕರ್(ರ) ಯಮಾಮಾದ ಸುದ್ದಿಗಾಗಿ ಕಾಯುತ್ತಿದ್ದರು ಮತ್ತು ಅವರು ಖಾಲಿದ್ ಸುದ್ದಿಗಾಗಿ ಕಾಯುತ್ತಿದ್ದರು. ಒಂದು ಸಂಜೆ ಅವರು ಮುಹಾಜಿರೀನ್ ಮತ್ತು ಅನ್ಸಾರ್‌ಗಳ ಗುಂಪಿನೊಂದಿಗೆ ಒಂದು ಸ್ಥಳದಲ್ಲಿದ್ದಾಗ ಅವರು ಖಾಲಿದ್‌ನ ಸಂದೇಶವಾಹಕರಾದ ಅಬು ಖೈಸಮಾ(ರ) ಅವರನ್ನು ಭೇಟಿಯಾದರು ಮತ್ತು ಅಬುಬಕರ್(ರ) ಅವರನ್ನು ನೋಡಿ ಕೇಳಿದರು: ಏನಾಯಿತು? ಅವರು ಹೇಳಿದರು, "ಎಲ್ಲ ಸರಿಯಾಗಿದೆ, ಓ ಪ್ರವಾದಿಯ ಖಲೀಫರೇ!" ಸರ್ವಶಕ್ತನಾದ ಅಲ್ಲಾಹನು ನಮಗೆ ಯಮಾಮನ ಮೇಲೆ ವಿಜಯವನ್ನು ನೀಡಿದ್ದಾನೆ ಮತ್ತು ಖಾಲಿದ್ ಅವರ ಈ ಪತ್ರವನ್ನು ತೆಗೆದುಕೊಳ್ಳಿ. ಹಝ್ರತ್ ಅಬೂಬಕರ್(ರ.ಅ) ತಕ್ಷಣವೇ ಸಜದ ಶುಕ್ರಿಯವನ್ನು (ಧನ್ಯವಾದ) ಸಲ್ಲಿಸಿ ಹೇಳಿದರು: ಯುದ್ಧದ ಸ್ವರೂಪವನ್ನು ನನಗೆ ಹೇಳಿರಿ, ಅದು ಹೇಗೆ ಸಂಭವಿಸಿತು? ಈ ನಿಟ್ಟಿನಲ್ಲಿ ದೀರ್ಘ ವರದಿ ಇದೆ. ಆದಾಗ್ಯೂ, ಅಬು ಖೈಸಮ(ರ) ಅವರು ಯುದ್ಧವನ್ನು ವಿವರವಾಗಿ ವಿವರಿಸಿದರು, ಖಾಲಿದ್(ರ) ಏನು ಮಾಡಿದರು, ಅವರು ಸೈನ್ಯವನ್ನು ಹೇಗೆ ಜೋಡಿಸಿದರು, ಯಾವ ಸಹಚರರು ಹುತಾತ್ಮರಾದರು ಮತ್ತು ನಾವು ಶತ್ರುಗಳ ಹಿಮ್ಮೆಟ್ಟುವಿಕೆಯನ್ನು ಹೇಗೆ ಎದುರಿಸಿದ್ದೇವೆ ಮತ್ತು ಅವರು ನಮಗೆ ಚೆನ್ನಾಗಿ ತಿಳಿದಿಲ್ಲದ ವಿಷಯಗಳಿಗೆ ವ್ಯಸನಿಯಾಗಿದ್ದರು.

ಅದೇ ರೀತಿ ಹಝ್ರತ್ ಖಾಲಿದ್(ರ) ಅವರ ವಿವಾಹದ ಬಗ್ಗೆಯೂ ಪ್ರಸ್ತಾಪವಾಯಿತು. ಹಝ್ರತ್ ಅಬೂಬಕರ್(ರ) ಅವರಿಗೆ ಬರೆದರು: ಓ ಉಮ್ಮ್ ಖಾಲಿದ್ ಅವರ ಮಗ! ನೀವು ಮಹಿಳೆಯರನ್ನು ಮದುವೆಯಾಗುವ ಆಲೋಚನೆಯನ್ನು ಹೊಂದಿದ್ದೀರಿ ಮತ್ತು ನಿಮ್ಮ ಹೊಲದಲ್ಲಿ ಇನ್ನೂ ಒಂದು ಸಾವಿರದ ಇನ್ನೂರು ಮುಸ್ಲಿಮರ ರಕ್ತವು ಒಣಗಿಲ್ಲ ಮತ್ತು ನಂತರ ಮುಜಾಅ ನಿಮ್ಮನ್ನು ಮೋಸಗೊಳಿಸಿದನು ಮತ್ತು ಸರ್ವಶಕ್ತನಾದ ಅಲ್ಲಾಹನು ನಿಮಗೆ ಅವರ ಮೇಲೆ ಸಂಪೂರ್ಣ ಅಧಿಕಾರವನ್ನು ನೀಡಿದ್ದರೂ ಸಹ ನಿಮ್ಮನ್ನು ರಾಜಿ ಮಾಡಿದರು. ಮುಜ್ಜಾಅದೊಂದಿಗಿನ ಒಪ್ಪಂದ ಮತ್ತು ಅವರ ಮಗಳ ಮದುವೆಯಿಂದಾಗಿ, ಖಲೀಫ್ ರಸೂಲ್ ಅಬುಬಕರ್(ರ) ಅವರ ಈ ಖಂಡನೆಯು ಖಾಲಿದ್(ರ) ಅವರನ್ನು ತಲುಪಿತು. ಹಝ್ರತ್ ಖಾಲಿದ್(ರ) ತಮ್ಮ ಕಡೆಯಿಂದ ಪ್ರತಿವಾದವಾಗಿ ಹೀಗೆ ಬರೆದರು. ಹಝ್ರತ್ ಖಾಲಿದ್(ರ) ಅವರು ಹೀಗೆ ಬರೆದರು: ಅಮ್ಮಾ ಬಅದ್! ನಾನು ಧರ್ಮದ ಮೇಲೆ ಪ್ರತಿಜ್ಞೆ ಮಾಡುತ್ತೇನೆ, ಸಂತೋಷವು ಪೂರ್ಣಗೊಳ್ಳುವವರೆಗೆ ಮತ್ತು ಸ್ಥಿರತೆಯನ್ನು ಸಾಧಿಸುವವರೆಗೆ ನಾನು ಮದುವೆಯಾಗಲಿಲ್ಲ. ನಾನು ಮದೀನಾದಿಂದ ಸಂದೇಶ ಕಳುಹಿಸಿದರೆ ನಿರಾಕರಿಸದವನ ಮಗಳನ್ನು ನಾನು ಮದುವೆ ಮಾಡಿದ್ದೇನೆ. ಕ್ಷಮಿಸಿ, ನಾನು ನನ್ನ ಸ್ಥಳದಿಂದ ಸಂದೇಶ ಕಳುಹಿಸಲು ಬಯಸುತ್ತೇನೆ. ನೀವು ಈ ಸಂಬಂಧ ಅಥವಾ ಲೌಕಿಕವನ್ನು ಇಷ್ಟಪಡದಿದ್ದರೆ, ನಿಮ್ಮ ಇಚ್ಛೆಯನ್ನು ಪೂರ್ಣಗೊಳಿಸಲು ನಾನು ಸಿದ್ಧನಿದ್ದೇನೆ. ಮುಸ್ಲಿಂ ಸಂತ್ರಸ್ತರ ಸಂತಾಪಕ್ಕಾಗಿ, ಯಾರೊಬ್ಬರ ಸಂಕಟ ಮತ್ತು ದುಃಖವು ಯಾರನ್ನಾದರೂ ಜೀವಂತವಾಗಿಡಲು ಅಥವಾ ಸತ್ತವರನ್ನು ಹಿಂದಿರುಗಿಸಲು ಸಾಧ್ಯವಾದರೆ, ನನ್ನ ಸಂಕಟ ಮತ್ತು ದುಃಖವು ಜೀವಂತವಾಗಿರುವುದನ್ನು ಉಳಿಸುತ್ತದೆ ಮತ್ತು ಸತ್ತವರನ್ನು

ಹಿಂದಿರುಗಿಸುತ್ತದೆ. ನಾನು ಜೀವನದಲ್ಲಿ ಭ್ರಮನಿರಸನಗೊಂಡು ಸಾವಿನ ಬಗ್ಗೆ ಮನವರಿಕೆಯಾಗುವ ರೀತಿಯಲ್ಲಿ ದಾಳಿ ಮಾಡಿದ್ದೇನೆ ಮತ್ತು ಮುಜ್ಜಾಅನ ಮೋಸದ ವಿಳಯವಾಗಿ ನಾನು ನನ್ನ ಅಭಿಪ್ರಾಯದಲ್ಲಿ ತಪ್ಪಾಗಿಲ್ಲ, ಆದರೆ ನನಗೆ ಅದೃಶ್ಯದ ಜ್ಞಾನವಿಲ್ಲ. ಅಲ್ಲಾಹನು ಏನೇ ಮಾಡಿದರೂ ಅದು ಮುಸ್ಲಿಮರಿಗೆ ಒಳ್ಳೆಯದ್ದಾಗಿದೆ. ಆತನು ಅವರನ್ನು ಭೂಮಿಯ ಬಾಧ್ಯರನ್ನಾಗಿ ಮಾಡಿದನು ಮತ್ತು ಅಂತ್ಯವು ನೀತಿವಂತರಿಗಾಗಿದೆ. ಈ ಪತ್ರವು ಹಝ್ರತ್ ಅಬೂಬಕ್ಕರ್(ರ) ಅವರಿಗೆ ತಲುಪಿದಾಗ, ಅವರು ಕೋಪವು ದೂರವಾಯಿತು ಮತ್ತು ಖುರೈಷಿಗಳ ಗುಂಪು ಮತ್ತು ಹಝ್ರತ್ ಖಾಲಿದ್(ರ) ಅವರ ಪತ್ರವನ್ನು ತಂದವರು ಹಝ್ರತ್ ಖಾಲಿದ್(ರ) ಅವರ ಪರವಾಗಿ ಕ್ಷಮೆಯಾಚಿಸಿದಾಗ ಹಝ್ರತ್ ಅಬೂಬಕರ್(ರ) ಹೇಳಿದರು ನೀವು ಸರಿಯಾಗಿ ಹೇಳಿದ್ದೀರಿ ಹೀಗೆ ಹಝ್ರತ್ ಖಾಲಿದ್(ರ) ಅವರ ವಿವರಣೆ ಮತ್ತು ಕ್ಷಮೆಯನ್ನು ಸ್ವೀಕರಿಸಲಾಯಿತು. (ಅಲ್-ಇಕ್ತಾಫಾ, ಸಂಪುಟ-2, ಭಾಗ-1, ಪುಟ 69-70, ಆಲಮ್ ಅಲ್-ಕಿತಾಬ್ ಬೈರುತ್ 1997) (ಸೈಯದುನಾ ಅಬುಬಕರ್ ಸಿದ್ದಿಕ್(ರ), ಡಾ॥ ಅಲಿ ಮುಹಮ್ಮದ್ ಸಲಾಬಿ, ಉರ್ದು ಅನುವಾದ ಪುಟ-937,368)

ಈ ಪ್ರಸ್ತಾಪ ಮುಂದುವರೆಯುವುದು, ಧರ್ಮಭ್ರಷ್ಟರ ಒಂದು ಕಥೆಯು ಇಲ್ಲಿಗೆ ಮುಗಿದಿದೆ.

**(ಅಲ್‌ಫಝಲ್ ಇಂಟರ್‌ನ್ಯಾಶ್ನಲ್, 1-07-2022, ಪುಟ-5-9)**

***********

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮಾಡಿದರು. ಅವರು ಹಝ್ರತ್ ಪೈಗಂಬರ್(ಸ)ರ ನಿಧನದ ತನಕ ಅದೇ ಸ್ಥಾನದಲ್ಲಿ ಇದ್ದರು. ಅನಂತರ ಅವರು ಸಿರಿಯದ ವಿಜಯಗಳಲ್ಲೂ ಭಾಗಿಯಾದರು. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಪೆಲಸ್ತೀನಿನ ಅಧಿಕಾರಿಯಾದರು. ಅವರ ಕಾರ್ಯಸಾಧನೆಗಳಲ್ಲಿ ಒಂದು ಪ್ರಮುಖ ಕಾರ್ಯಸಾಧನೆ ಈಜಿಪ್ಟ್ ವಿಜಯವೂ ಆಗಿದೆ. ಈಜಿಪ್ಟಿನ ವಿಜಯದ ನಂತರ ಹಝ್ರತ್ ಉಮರ್(ರ) ಅವರನ್ನು ಈಜಿಪ್ಟಿನ ಅಧಿಕಾರಿಯನ್ನಾಗಿ ಮಾಡಿದರು. ಅವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಈಜಿಪ್ಟಿನ ಅಧಿಕಾರದಿಂದ ವಜಾಗೊಂಡರು ಮತ್ತು ಪೆಲಸ್ತೀನಿನಲ್ಲಿ ಏಕಾಂತ ವಾಸವನ್ನು ಕೈಗೊಂಡರು. ಅಮೀರ್ ಮುಆವಿಯ ಅವರನ್ನು ಪುನಃ ಈಜಿಪ್ಟಿನ ಅಧಿಕಾರಿಯನ್ನಾಗಿ ಮಾಡಿದರು. ನಿಧನದ ತನಕ ಅವರು ಇದೇ ಸೇವೆಯಲ್ಲಿ ನಿಶ್ಚಯಗೊಂಡಿದ್ದರು. ಕೆಲವರ ಪ್ರಕಾರ ಅವರು ಹಿಜರೀ 43ರಲ್ಲಿ ಅಥವಾ 47ರಲ್ಲಿ ಅಥವಾ 48ರಲ್ಲಿ ನಿಧನರಾದರು ಎಂದು ಹೇಳಲಾಗುತ್ತದೆ. 44ರಲ್ಲಿ ನಿಧನರಾದರು ಎಂಬ ಹೇಳಿಕೆಯನ್ನು ಸಾಮಾನ್ಯವಾಗಿ ಸರಿಯೆಂದು ಒಪ್ಪಲಾಗಿದೆ. (ಅಸದುಲ್‌ಗಾಬ, ಸಂಪುಟ-4, ಪುಟ-232-234, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2016)

ಹಝ್ರತ್ ಅಮ್ರ್ ಬಿನ್ ಆಸ್(ರ) ಬಹಳ ಹಸನ್ಮುಖಿರಾಗಿ ಮತ್ತು ಮಧುರವಾಗಿ ಮಾತನಾಡುವ ಭಾಷಣಗಾರರಾಗಿದ್ದರು. ವಾಗ್ಮಿಯೂ, ಉತ್ತಮ ಭಾಷಣಗಾರರು, ರಾಜಕೀಯ ನೇತಾರರು ಮತ್ತು ಸೇನಾಧಿಪತಿ ಆಗಿದ್ದರು. ಯುದ್ಧ ಕಾರ್ಯಾಚರಣೆಗಳಲ್ಲಿ ಹಝ್ರತ್ ಪೈಗಂಬರ್(ಸ) ಅವರ ಮೇಲೆ ವಿಶ್ವಾಸ ಅರ್ಪಿಸಿಕೊಂಡಿದ್ದರು. ಅಮ್ರ್ ಬಿನ್ ಆಸ್, ಅವರ ಮಗನಾದ ಅಬ್ದುಲ್ಲಾಹ್ ಮತ್ತು ಅವರ ಪತ್ನಿಯಾದ ಉಮ್ಮೇ ಅಬ್ದುಲ್ಲಾಹ್‌ರನ್ನು ಒಳಗೊಂಡ ಕುಟುಂಬವನ್ನು ಅತ್ಯುತ್ತಮ ಮನೆತನವೆಂದು ಹೇಳಲಾಗಿದೆ.

(ಅಟ್ಲಸ್ ಸೀರತ್ ನಬವಿ, ಪುಟ-386, ದಾರುಸ್ಸಲಾಮ್ ಪಾಕಿಸ್ತಾನ್)

ಒಬ್ಬ ಲೇಖಕ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ತಯಾರಿಸಿದ ಹನ್ನೊಂದು ಧ್ವಜಗಳಲ್ಲಿ ಒಂದು ಧ್ವಜ ಹಝ್ರತ್ ಅಮ್ರ್ ಬಿನ್ ಆಸ್‌ರಿಗೂ ಇತ್ತು.

ಖುಝಾಅದ ಧರ್ಮತ್ಯಾಗಿಗಳ ವಿರುದ್ಧ ಯುದ್ಧ ಮಾಡುವ ಕಾರ್ಯವನ್ನು ಹಝ್ರತ್ ಅಬೂಬಕರ್(ರ) ಅವರಿಗೆ ಒಪ್ಪಿಸಿದರು. ಏಕೆಂದರೆ, ಅವರು ಹಝ್ರತ್ ಪೈಗಂಬರ್(ಸ)ರ ಜೀವಿತ ಕಾಲದಲ್ಲೂ ಧಾತುಸ್ಸಲಾಸಿಲ್ ಯುದ್ಧದಲ್ಲಿ ಖುಝಾಅ ಗೋತ್ರದ ವಿರುದ್ಧ ಹೋರಾಡಿದ್ದರು ಹಾಗೂ ಆ ಗೋತ್ರದ ಎಲ್ಲ ಸ್ಥಿತಿಗತಿಗಳ ಮತ್ತು ಎಲ್ಲ ರಸ್ತೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. (ಫಾತಿಹ್ ಆಝಮ್ ಹಝ್ರತ್ ಉಮರ್ ಬಿನ್ ಆಸ್(ರ), ಮುಹಮ್ಮದ್ ಫರ್‍ರುಖ್ ಮಿಸ್ರಿ ಅನುವಾದಕ ಪುಟ-109, ನಫೀಸ್ ಅಕಾಡಮಿ ಕರಾಚಿ)

ಬನೂ ಖುಝಾಅ ಗೋತ್ರದವರು ಸಂತೋಷದಿಂದ ಇಸ್ಲಾಂ ಸ್ವೀಕಾರ ಮಾಡಿರಲಿಲ್ಲ. ಅವರ ಹೃದಯಗಳಲ್ಲಿ ಇಸ್ಲಾಮಿನ ಪ್ರೇಮವಿದ್ದಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅವರು ಝಕಾತ್ ನೀಡುವುದನ್ನು ನಿರಾಕರಿಸಿದರು. ಖಿಲಾಫತಿನ ಸನ್ನಿಧಾನದಿಂದ ಆದೇಶ ಲಭಿಸುತ್ತಲೇ ಅಮ್ರ್ ಬಿನ್ ಆಸ್(ರ) ತನ್ನ ಸೇನೆಯೊಂದಿಗೆ ಖುಝಾಅಗೆ ತಲುಪಿದರು. ಬನೂ ಖುಝಾಅ ಗೋತ್ರವು ಯುದ್ಧಕ್ಕಾಗಿ ಪೂರ್ಣ ರೀತಿಯಲ್ಲಿ ತಯಾರಾಗಿರುವುದನ್ನು ಅಲ್ಲಿಗೆ ತಲುಪಿದಾಗ ಅವರು ಕಂಡರು. ಹೋರಾಟ ಆರಂಭವಾಯಿತು ಮತ್ತು ಘೋರ ಯುದ್ಧ ನಡೆಯಿತು. ಮೊದಲಿನಂತೆ ಆಗಲೂ ಖುಝಾಅಗೆ ಸೋಲು ಅನುಭವಿಸಬೇಕಾಯಿತು. ಅಮ್ರ್ ಬಿನ್ ಆಸ್(ರ) ಅವರಿಂದ ಝಕಾತ್ ಪಡೆದುಕೊಂಡು ಅವರನ್ನು ಪುನಃ ಇಸ್ಲಾಮಿಗೆ ವಿಧೇಯರನ್ನಾಗಿ ಮಾಡಿಕೊಂಡು ವಿಜಯಶಾಲಿಯಾಗಿ ಮದೀನಕ್ಕೆ ಮರಳಿ ಬಂದರು. (ಫಾತಿಹ್ ಆಝಮ್ ಹಝ್ರತ್ ಉಮರ್ ಬಿನ್ ಆಸ್(ರ) ಮುಹಮ್ಮದ್ ಫರ್‍ರುಖ್ ಮಿಸ್ರಿ ಅನುವಾದಕ, ಪುಟ-109, ನಫೀಸ್ ಅಕಾಡಮಿ ಕರಾಚಿ)

ಉಳಿದ ಕಾರ್ಯಾಚರಣೆಗಳ ಬಗ್ಗೆ ಮುಂದೆ ಪ್ರಸ್ತಾಪಿಸಲಾಗುವುದು.

**(ಅಲ್‌ಫಝಲ್ ಇಂಟರ್‌ನ್ಯಾಶ್ನಲ್ 08-07-2022, ಪುಟ-5-9)**

***********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಾಲು ಆಗುತ್ತದೆ.

ಪುರಾತನ ಜನರು ಈ ಆಯತನ್ನು ಅರ್ಥೈಸುವುದು ಬಹಳ ಕಷ್ಟಕರವಾದ ಸಂಗತಿಯಾಗಿತ್ತು. ಮತ್ತು ಪ್ರಚಲಿತ ಅಭಿಪ್ರಾಯದ ಪ್ರಕಾರ, ಸಗಣಿ ಮತ್ತು ರಕ್ತದ ರಚನೆಯ ನಡುವೆ ಬಹುಶಃ ವ್ಯತ್ಯಾಸವಿದೆ ಎಂದು ಭಾವಿಸಲಾಗಿತ್ತು. ಆದ್ದರಿಂದ, ಸಾಹಿಬ್ ಕಶಾಫ್ ಅವರು ಪ್ರಾಣಿಗಳ ಹೊಟ್ಟೆಯನ್ನು ಆಹಾರ ಪ್ರವೇಶಿಸಿದಾಗ ಅದರ ಕೆಳಗಿನ ಭಾಗವು ಸಗಣಿ ಮತ್ತು ಮಧ್ಯ ಭಾಗವು ಹಾಲು ಮತ್ತು ಮೇಲಿನ ಭಾಗವು ರಕ್ತವಾಗುತ್ತದೆ ಎಂದು ಬರೆಯುತ್ತಾರೆ, ಆದರೆ ಈ ಆಯತ್ ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ ಸಗಣಿ ಮತ್ತು ರಕ್ತದ ಮೂಲಕ ಹಾಲು ಉತ್ಪಾದನೆಯಾಗುತ್ತದೆ ಅಂದರೆ ಮೊದಲು ಸಗಣಿಯ ಸ್ಥಿತಿ ಇರುತ್ತದೆ ನಂತರ ರಕ್ತ, ತದನಂತರ ಹಾಲು ಆಗುತ್ತದೆ ಮತ್ತು ಮನುಷ್ಯ ಈ ಮೊದಲ ಎರಡು ಪದಾರ್ಥಗಳಲ್ಲಿ ಯಾವುದನ್ನೂ ಸಂತೋಷದಿಂದ ತಿನ್ನಲು ಸಿದ್ಧವಾಗಿರುವುದಿಲ್ಲ. ಸಗಣಿ ತಿನ್ನಲು ಒಪ್ಪಲಾರನು ಮತ್ತು ರಕ್ತ ಕುಡಿಯಲು ಸಂತೋಷದಿಂದ ಸಿದ್ಧವಾಗುವುದಿಲ್ಲ ಆದರೆ ಅದೇ ರಕ್ತವು ಹಾಲಾಗಿ ಉತ್ಪಾದನೆಯಾದಾಗ ಅವರು ಅದನ್ನು ಬಹಳ ರುಚಿಯಾಗಿ ಕುಡಿಯುತ್ತಾರೆ ಮತ್ತು ಅದರಲ್ಲಿ ಸಗಣಿಯ ಕೊಳಕು ಮತ್ತು ರಕ್ತದ ವಿಷ ಏನೂ ಉಳಿದಿರುವುದಿಲ್ಲ.

ಈ ಆಯತ್ ಯಾರೂ ಅಲ್ಪ ಪ್ರಮಾಣದ ಹಾಲನ್ನೂ ಸಹ ಉತ್ಪಾದಿಸಲು ಸಾಧ್ಯವಿಲ್ಲ ಎಂದು ಅರ್ಥವಲ್ಲ. ಬಹುಶಃ ಮುಂದಿನ ದಿನಗಳಲ್ಲಿ ಜನರು ಸ್ವಲ್ಪ ಹಾಲು ಉತ್ಪಾದಿಸಲು ಸಾಧ್ಯವಾಗಬಹುದು. ಆದರೆ ಆ ರೀತಿಯಲ್ಲಿ ಅವರು ಇಡೀ ಜಗತ್ತಿಗೆ ಆಹಾರವನ್ನು ತಲುಪಿಸಲು ಸಾಧ್ಯವಿಲ್ಲ. ಈ ರೀತಿಯಾಗಿ, ಜನರು ಗ್ಯಾಸ್‌ನಿಂದ ನೀರನ್ನು ತಯಾರಿಸಬಹುದು ಆದರೆ ಅವರು ಕೆಲವು ಹನಿಗಳನ್ನು ಮೋಡಗಳಾಗಿ ಬಳಸಲಾಗುವುದಿಲ್ಲ. ಅದೇ ರೀತಿ, ಯಾವುದೇ ಸಮಯದಲ್ಲಿ ಹುಲ್ಲಿನಿಂದ ಹಾಲನ್ನು ತಯಾರಿಸಬಹುದಾದರೆ ಆಶ್ಚರ್ಯವೇನಿಲ್ಲ, ಆದರೆ ನೀರು ಒದಗಿಸುವ ಕೆಲಸವನ್ನು ಮೋಡಗಳಿಗೆ ವಹಿಸಿದಂತೆ ಜಗತ್ತಿಗೆ ಆಹಾರವನ್ನು ನೀಡುವ ಕೆಲಸವನ್ನು ಇನ್ನೂ ಪ್ರಾಣಿಗಳಿಗೆ ವಹಿಸಲಾಗುತ್ತದೆ.

ಮನುಷ್ಯನು ಆಹಾರವನ್ನು ಕೊಳಕು ಮಾಡಬಹುದು ಆದರೆ ಅದರಿಂದ ಹಾಲನ್ನು ತಯಾರಿಸಲು ಸಾಧ್ಯವಿಲ್ಲ ಎಂದು ಈ ಆಯತ್ ಸೂಚಿಸುತ್ತದೆ. ಅದೇ ರೀತಿಯಲ್ಲಿ, ಮಾನವರು ಪ್ರವಾದಿಗಳ ಬೋಧನೆಗಳನ್ನು ಸಹ ಹಾಳು ಮಾಡುತ್ತಾರೆ, ಆದರೆ ಮಾನವರ ಮನಸ್ಸಿನಲ್ಲಿ ಕಂಡುಬರುವ ಶುದ್ಧವಲ್ಲದ ನೈಸರ್ಗಿಕ ಸತ್ಯಗಳನ್ನು ಶುದ್ಧ ಮತ್ತು ಉನ್ನತ ಆಧ್ಯಾತ್ಮಿಕ ಶಿಕ್ಷಣ ಮಾಡಲು ಸಾಧ್ಯವಿಲ್ಲ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-192, ಖಾದಿಯಾನ್ 2010)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯಿದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೇ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

**ಅಲ್ಲಾಹನ ಹೆಸರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದ ಹಝ್ರ‌ರತ್ ಪೈಗಂಬರ್(ಸ) ಹೇಳಿದರು: ನೀನು ಅತ್ಯಂತ ಹಿರಿಯ ಅಸ್ತಿತ್ವದ ಹೆಸರನ್ನು ಎತ್ತಿಕೊಂಡಿದ್ದೀಯ ಮತ್ತು ಅವನೊಡನೆ ಅಭಯವನ್ನು ಯಾಚಿಸಿದ್ದೀಯ. ಅವನು ಅತ್ಯಂತ ಹೆಚ್ಚಾಗಿ ಅಭಯ ನೀಡುವವನಾಗಿರುವನು. ಆದ್ದರಿಂದ ನಾನು ನಿನ್ನ ವಿನಂತಿಯನ್ನು ಸ್ವೀಕಾರ ಮಾಡುತ್ತೇನೆ. ಹೀಗೆ ಹಝ್ರ‌ರತ್ ಪೈಗಂಬರ್(ಸ) ಕೂಡಲೇ ಹೊರಗೆ ಬಂದು ಹೇಳಿದರು: ಹೇ ಅಬೂ ಉಸೈದ್, ಅವಳಿಗೆ ಎರಡು ಹೊದಿಕೆಗಳನ್ನು ಕೊಟ್ಟು ಅವಳ ಮನೆಯವರ ಬಳಿಗೆ ತಲುಪಿಸು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–06–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಯಮಾಮದ ಕಪಟವಿಶ್ವಾಸಿಗಳು ಮತ್ತು ಮುಸೈಲಿಮ ಮತ್ತು ಅವನ ಸಹಚರರರಿಗೆ ಸಂಬಂಧಿಸಿದ ಘಟನೆಗಳ ಪ್ರಸ್ತಾಪ ಮುಕ್ತಾಯವಾಯಿತು ಎಂದು ನಾನು ಕಳೆದ ಖುತ್ಬದಲ್ಲಿ ಹೇಳಿದ್ದೆ.

ಹಝ್ರ‌ರತ್ ಅಬೂಬಕರ್(ರ)ರ ಕಾಲದಲ್ಲಿ ಆಯುಧಗಳನ್ನು ಎತ್ತಿದ ಧರ್ಮತ್ಯಾಗಿಗಳ ಪ್ರಸ್ತಾಪ ನಡೆಯುತ್ತಿದೆ.

ನಾನು ಮೊದಲೇ ಹೇಳಿದಂತೆ ಅನೇಕ ಕಾರ್ಯಾಚರಣೆಗಳು ನಡೆದಿದ್ದುವು. ಮೊದಲ ಕಾರ್ಯಾಚರಣೆಯ ಬಗ್ಗೆ ಹೇಳಿಯಾಯಿತು. ಅದು ಬಹಳ ದೀರ್ಘವಾದ ಪ್ರಸ್ತಾಪವಾಗಿತ್ತು. ಉಳಿದ ಹತ್ತು ಕಾರ್ಯಾಚರಣೆಗಳಲ್ಲಿ ಎರಡನೇ ಮತ್ತು ಮೂರನೆಯ ಕಾರ್ಯಾಚರಣೆಗಳ ನೇತೃತ್ವವನ್ನು ಹಝ್ರ‌ರತ್ ಹುಧೈಫ(ರ) ಮತ್ತು ಹಝ್ರ‌ರತ್ ಅರ್‌ಫಜ(ರ) ವಹಿಸಿದ್ದರು. ಅದು ಒಮಾನಿನ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ನಡೆಸಲಾದ ಕಾರ್ಯಾಚರಣೆಯಾಗಿತ್ತು. ಒಮಾನ್ ಎಂಬುದು ಬಹ್‌ರೈನಿನ ಸಮೀಪವಿರುವ ಯಮನಿನ ಒಂದು ಪಟ್ಟಣವಾಗಿದೆ. ಫಾರಿಸಿನ ಕೊಲ್ಲಿ ಪ್ರದೇಶ ಮತ್ತು ಅರಬ್ ಸಮುದ್ರದ ನಡುವೆ ಒಮಾನ್ ಇದೆ. ಅಲ್ಲಿ ವಿಗ್ರಹಪೂಜಕ ಗೋತ್ರವಾದ ಆಝ಼ುದ್ ಮತ್ತು ಅಗ್ನಿಪೂಜಕರಾದ ಇತರ ಗೋತ್ರಗಳು ನೆಲೆಸಿದ್ದುವು. ಮಸ್ಕಟ್, ಸಿಹಾರ್ ಮತ್ತು ದಬಾ ಇಲ್ಲಿಯ ಕಾರಾವಳಿ ಪಟ್ಟಣಗಳಾಗಿದ್ದುವು. ಹಝ್ರ‌ರತ್ ಪೈಗಂಬರ್(ಸ)ರ ಅನುಗ್ರಹೀತ ಕಾಲದಲ್ಲಿ ಒಮಾನ್ ಇರಾನಿಯರ ವಶದಲ್ಲಿ ಇತ್ತು. ಅವರ ಕಡೆಯಿಂದ ಜೈಫರ್ ಎಂಬ ಹೆಸರಿನ ವ್ಯಕ್ತಿ ಅಲ್ಲಿಯ ಅಧಿಕಾರಿಯಾಗಿದ್ದನು. ಈ ಪ್ರದೇಶದಲ್ಲಿ ಅಗ್ನಿಪೂಜಕರ ಧರ್ಮ ಹರಡಿತ್ತು. ಹಝ್ರ‌ರತ್ ಪೈಗಂಬರ್(ಸ) ಹಿಜರೀ 8ರಲ್ಲಿ ಹಝ್ರ‌ರತ್ ಅಬೂಝೈದ್ ಅನ್ಸಾರಿ(ರ)ರನ್ನು ಇಸ್ಲಾಮಿನ ಪ್ರಚಾರ ನಡೆಸಲಿಕ್ಕಾಗಿ ಮತ್ತು ಹಝ್ರ‌ರತ್ ಅಮ್ರ್ ಬಿನ್ ಆಸ್(ರ)ರನ್ನು ಅಲ್ಲಿಯ ಎರಡು ಸರದಾರ ಸಹೋದರರಾದ ಜೈಫರ್ ಬಿನ್ ಜುಲಂದೀಹ್ ಮತ್ತು ಉಬಾದ್ ಬಿನ್ ಜುಲಂದೀಹ್‌ರ ಹೆಸರಲ್ಲಿ ಪತ್ರಗಳನ್ನು ಕೊಟ್ಟು ಕಳುಹಿಸಿದ್ದರು.

ಹಝ್ರ‌ರತ್ ಪೈಗಂಬರ್(ಸ) ಬರೆದ ಪತ್ರದ ವಿಷಯ ಹೀಗಿತ್ತು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಈ ಪತ್ರವು ಅಲ್ಲಾಹನ ದಾಸ ಮತ್ತು ಅವನ ದೂತರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಯಿಂದ ಜುಲಂದಿಹ್‌ನ ಮಕ್ಕಳಾದ ಜೈಫರ್ ಮತ್ತು ಉಬಾದ್‌ರಿಗೆ ಬರೆಯಲಾಗಿದೆ. ಸನ್ಮಾರ್ಗವನ್ನು ಅನುಸರಿಸುವವರ ಮೇಲೆ ಸಮಾಧಾನವಿರಲಿ. ನಾನು ನಿಮ್ಮೊಡನೆ ಇಸ್ಲಾಂ ಸ್ವೀಕಾರ ಮಾಡಲು ಆಮಂತಣ ನೀಡುತ್ತೇನೆ. ನೀವು ಇಸ್ಲಾಂ ಸ್ವೀಕಾರ ಮಾಡಿದರೆ ಸುರಕ್ಷಿತರಾಗುವಿರಿ. ನಾನು ಜೀವಂತನಾಗಿರುವ ಪ್ರತಿಯೊಂದು ವ್ಯಕ್ತಿಗೆ ಮುನ್ನೆಚ್ಚರಿಕೆ ನೀಡಲು ಮತ್ತು ಸತ್ಯನಿಷೇಧಿಗಳಿಗೂ ಸರಿಯಾಗಿ ಸಂದೇಶವನ್ನು ತಲುಪಿಸಲಿಕ್ಕಾಗಿ ಪೂರ್ತಿ ಲೋಕಕ್ಕಾಗಿ ಅಲ್ಲಾಹನು ಕಳುಹಿಸಿದ ಪ್ರವಾದಿಯಾಗಿರುವೆನು. ನೀವು ಇಸ್ಲಾಂ ಸ್ವೀಕಾರ ಮಾಡಿದರೆ ನಾನು ನಿಮ್ಮನ್ನು ಹಿಂದಿನಂತೆ ಅಲ್ಲಿಯ ಅಧಿಕಾರಿಗಳನ್ನಾಗಿ ಇರಲು ಬಿಡುವೆನು. ಆದರೆ ನೀವು ಇಸ್ಲಾಂ ಸ್ವೀಕಾರ ಮಾಡದಿದ್ದರೆ ನಿಮ್ಮ ಅಧಿಕಾರ ನಿಮ್ಮಿಂದ ಕಸಿಯಲ್ಪಡುವುದು. (ಸೀರತ್ ಹಝ್ರ‌ರತ್ ಉಮ್ರೊ ಬಿನುಲ್ ಆಸ್(ರ) ಪುಟ–49, ಡಾ॥ ಹಸನ್ ಇಬ್ರಾಹೀಮ್ ಹಸನ್, ಉರ್ದು ಅನುವಾದ ಶೇಖ್ ಮುಹಮ್ಮದ್ ಅಹ್ಮದ್ ಪಾನೀಪತಿ) (ಫತೂಹುಲ್ ಬಲದಾನ್, ಪುಟ–103–104, ಮುಅಸ್ಸಸತುಲ್ ಮುಆರಿಫ್ ಬೈರೂತ್ 1987) (ಫರ್ಹಂಗ್ ಸೀರತ್ ಪುಟ–209, ಝುವಾರ ಅಕಾಡಮಿ ಪಬ್ಲಿಕೇಶನ್ಸ್ ಕರಾಚಿ 2003) (ಅಟ್ಲಸ್ ಸೀರತ್ ನಬವಿ(ಸ) ಪುಟ–68, ದಾರುಸ್ಸಲಾಮ್ ರಿಯಾಝ್ 1424ಹಿ)

ಕೆಲವು ವರದಿಗಳ ಪ್ರಕಾರ ಸಾಕಷ್ಟು ದಿನಗಳು ಚರ್ಚೆ ಮಾಡಿದ ನಂತರ ಆ ಇಬ್ಬರು ಸಹೋದರರು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರು. ಒಂದು ವರದಿಯ ಪ್ರಕಾರ ಒಮಾನಿನ ಅಧಿಕಾರಿ ಜೈಫರ್ ಹೀಗೆ ಹೇಳಿದನು: ಇಸ್ಲಾಂ ಸ್ವೀಕಾರ ಮಾಡುವುದರಲ್ಲಿ ನನಗೇನೂ ಅಡ್ಡಿಯಿಲ್ಲ. ಆದರೆ ನಾನು ಇಲ್ಲಿಂದ ಝಕಾತ್ ಒಟ್ಟುಗೂಡಿಸಿ ಮದೀನಕ್ಕೆ ಕಳುಹಿಸಿದರೆ ನನ್ನ ಸಮುದಾಯ ನನಗೆ ವಿರುದ್ಧವಾಗಿ ನಿಲ್ಲುವರು. ಆಗ ಹಝ್ರ‌ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ಈ ಪ್ರದೇಶದಿಂದ ವಸೂಲು ಮಾಡಲಾಗುವ ಝಕಾತಿನ ಸಂಪತ್ತನ್ನು ಇದೇ ಪ್ರದೇಶದ ಬಡವರ ಮೇಲೆ ಖರ್ಚು ಮಾಡಲಾಗುವುದು. ಆಗ ಅವನು ಇಸ್ಲಾಂ ಸ್ವೀಕಾರ ಮಾಡಿದನು. ಹಝ್ರ‌ರತ್ ಅಮ್ರ್(ರ) ಅಲ್ಲಿ ಎರಡು ವರ್ಷಗಳಷ್ಟು ಕಾಲ ತಂಗಿದ್ದರು ಮತ್ತು ಜನರಿಗೆ ಇಸ್ಲಾಮಿನ ಸಂದೇಶ ಹೇಳಿಕೊಡುತ್ತಿದ್ದರು. ಅವರ ಈ ವಿಜಯಕರ ತಬ್ಲೀಗಿನ ಪ್ರಯತ್ನದಿಂದ ಆ ಪ್ರದೇಶದ ಅನೇಕ ಜನರು ಇಸ್ಲಾಂ ಸ್ವೀಕಾರ ಮಾಡಿದರು. ಹಝ್ರ‌ರತ್ ಪೈಗಂಬರ್(ಸ) ನಿಧನರಾದಾಗ ನಾಲ್ಕೂ ಕಡೆಯಲ್ಲೂ ಧರ್ಮತ್ಯಾಗ ಮತ್ತು ದಂಗೆ ಹರಡಿದಾಗ ಹಝ್ರ‌ರತ್ ಅಬೂಬಕರ್(ರ) ಹಝ್ರ‌ರತ್ ಅಮ್ರ್ ಬಿನ್ ಆಸ್‌ರನ್ನು(ರ) ಮದೀನಕ್ಕೆ ಕರೆದರು. ಮೊತ್ತೊಂದೆಡೆ ಹಝ್ರ‌ರತ್ ಪೈಗಂಬರ್(ಸ)ರ ನಿಧನದ ನಂತರ ಲಖೀದ್ ಬಿನ್ ಮಾಲಿಕ್ ಅಝ಼ುದಿ ಎಂಬವನು ಎದ್ದನು. ಅವನ ಬಿರುದುನಾಮ ಝುತ್ತಾಜ್ ಎಂದಾಗಿತ್ತು. ಒಮಾನಿನ ಅರಸನಾದ ಜುಲಂದೀಹ್‌ನಿಗೆ ಬಹುತೇಕ ಸಮಾನ ಸ್ಥಾನವನ್ನು ಹೊಂದಿರುವ ವ್ಯಕ್ತಿಯೆಂದು ಅವನ ಬಗ್ಗೆ ಜಾಹಿಲಿಯಾ ಕಾಲದಲ್ಲಿ ಭಾವಿಸಲಾಗುತ್ತಿತ್ತು. ಜುಲಂದೀಹ್ ಎಂಬುದು ಒಮಾನಿನ ಅರಸರ ಬಿರುದು ನಾಮವಾಗಿತ್ತು. ಹೇಗಿದ್ದರೂ ಅವನು ಪ್ರವಾದಿತ್ವದ ವಾದವನ್ನು ಮಾಡಿದನು. ಒಮಾನಿನ ಮೂಢರು ಅವನನ್ನು ಅನುಸರಿಸಿದರು. ಅವನು ಒಮಾನನ್ನು ತನ್ನ ನಿಯಂತ್ರಣದಲ್ಲಿ ತಂದನು. ಜೈಫರ್ ಮತ್ತು ಅವನ ಸಹೋದರನಿಗೆ ಪರ್ವತಗಳಲ್ಲಿ ಅಭಯ ಪಡೆಯಬೇಕಾಯಿತು. ಈ ಎಲ್ಲ ಸ್ಥಿತಿಗತಿಗಳ ಬಗ್ಗೆ ಜೈಫರ್ ಹಝ್ರ‌ರತ್ ಅಬೂಬಕರ್(ರ)ರಿಗೆ ತಿಳಿಸಿ ಸಹಾಯವನ್ನು ಬೇಡಿದರು. ಹಝ್ರ‌ರತ್ ಅಬೂಬಕರ್(ರ) ಅವರ ಬಳಿಗೆ ಇಬ್ಬರು ಅಮೀರರನ್ನು ಕಳುಹಿಸಿದರು. ಒಬ್ಬರು ಹುಧೈಫ ಬಿನ್ ಮುಹ್‌ಸಿನ್ ಗ಼ಲ್‌ಫಾನಿ ಹಮೀರಿಯನ್ನು ಒಮಾನಿನ ಕಡೆಗೆ ಮತ್ತೊಬ್ಬ ಅರ್ಜಫ ಬಿನ್ ಹರ್ಸಮ ಬಾರ್ಕಿ ಯಝ್ದಿಯನ್ನು ಮಹ್‌ರದ ಕಡೆಗೆ. ಅವರಿಬ್ಬರೂ ಜೊತೆಜೊತೆಗೆ ಯಾತ್ರೆ ಮಾಡಲು ಮತ್ತು ಯುದ್ಧದ ಆರಂಭ ಒಮಾನಿನಿಂದ ಮಾಡಲು ಹಝ್ರ‌ರತ್ ಅಬೂಬಕರ್(ರ) ಅವರಿಗೆ ಆದೇಶ ನೀಡಿದರು. ಮಹ್‌ರ ಎಂಬುದು ಯಮನಿನ ಒಂದು ಗೋತ್ರದ ಹೆಸರಾಗಿತ್ತು. ಒಮಾನಿನಲ್ಲಿ ಯುದ್ಧ ನಡೆಯುವಾಗ ಹುಧೈಫ ಪೂರ್ತಿ ಸೇನೆಯ ಸರ್ವಾಧಿಕಾರಿ ಆಗಿರಬೇಕು ಮತ್ತು ಮಹ್‌ರದಲ್ಲಿ ಯುದ್ಧ ನಡೆಯುವಾಗ ಹುಧೈಫ ಸೇನಾಧಿಪತಿಯಾಗಿರಬೇಕು ಎಂದು ಹಝ್ರ‌ರತ್ ಅಬೂಬಕರ್(ರ) ಆದೇಶ ನೀಡಿದ್ದರು.

ಹಝ್ರ‌ರತ್ ಹುಧೈಫ(ರ) ಮತ್ತು ಹಝ್ರ‌ರತ್ ಅರ್ಫಜರ ಪರಿಚಯ ಹೀಗಿದೆ. ತಾರೀಕ್ ತಬರಿಯಲ್ಲಿ ಹಝ್ರ‌ರತ್ ಹುಧೈಫರ(ರ) ಹೆಸರು ಹುಧೈಫ ಬಿನ್ ಮುಹ್‌ಸಿನ್ ಗ಼ಲ್‌ಫಾನಿ ಎಂದು ಬರೆದಿದೆ. ಆದರೆ ಸಹಾಬಿಯರ ಜೀವನಚರಿತ್ರೆಯ ಕುರಿತು ಇರುವ ಗ್ರಂಥದಲ್ಲಿ ಅವರ ಹೆಸರು ಹುಧೈಫ ಕಲ್‌ಆನಿ ಎಂದಿದೆ. ಅವರು ಹಝ್ರ‌ರತ್ ಅಬೂಬಕರ್(ರ)ರ ನಿಧನದ ತನಕ ಒಮಾನಿನ ಅಧಿಕಾರಿಯಾಗಿದ್ದರು.

ಸಹಾಬಿಯರ ಜೀವನಚರಿತ್ರೆಗೆ ಸಂಬಂಧಿಸಿದ ಪುಸ್ತಕದಲ್ಲಿ ಹಝ್ರ‌ರತ್ ಅರ್ಜಫರ(ರ) ಪೂರ್ಣ ಹೆಸರು ಅರ್ಜಫ ಬಿನ್ ಹಝೀಮ ಎಂದಿದೆ. ಅಲ್ಲಾಮ ಇಬ್ನು ಅಸೀರರ ಪ್ರಕಾರ ಅವರ ತಂದೆಯ ಹೆಸರು ಹರ್ಸಮ ಎಂದಾಗಿತ್ತು. ಅವರು ಶತ್ರುಗಳ ವಿರುದ್ಧ ಯುದ್ಧತಂತ್ರ ಮಾಡುವ ವಿಷಯದಲ್ಲಿ ಪ್ರಸಿದ್ಧರಾಗಿದ್ದರು.

ಹಝ್ರ‌ರತ್ ಅಬೂಬಕರ್(ರ) ಅವರಿಬ್ಬರ ಸಹಾಯಕ್ಕಾಗಿ ಹಝ್ರ‌ರತ್ ಇಕ್ರಿಮರನ್ನು(ರ) ಕಳುಹಿಸಿದರು. ಯಮಾಮ ಯುದ್ಧ ಮತ್ತು ಮುಸೈಲಿಮ ಕದ್ದಾಬಿನ ಪ್ರಸ್ತಾಪದಲ್ಲಿ ಈ ಹಿಂದೆ ಹೇಳಿದಂತೆ, ಹಝ್ರ‌ರತ್ ಅಬೂಬಕರ್(ರ) ಹಝ್ರ‌ರತ್ ಇಕ್ರಿಮರನ್ನು(ರ) ಧರ್ಮತ್ಯಾಗದ ಪಿತೂರಿ ಮತ್ತು ದಂಗೆಯನ್ನು

ಎದುರಿಸಲಿಕ್ಕಾಗಿ ಕಳುಹಿಸಿದ್ದರು ಹಾಗೂ ಶುರಹ್‌ಬೀಲ್ ಬಿನ್ ಹಸನರನ್ನು ಇಕ್ರಿಮರ ಸಹಾಯಕ್ಕಾಗಿ ಕಳುಹಿಸಿದರು. ಶುರಹ್‌ಬೀಲ್ ತಲುಪುವ ತನಕ ದಾಳಿ ನಡೆಸಬಾರದು ಎಂದು ಇಕ್ರಿಮರಿಗೆ ಹಝ್ರತ್ ಅಬೂಬಕರ್(ರ) ಆದೇಶ ನೀಡಿದರು. ಆದರೆ ಶುರಹ್‌ಬೀಲ್(ರ) ಬರುವುದನ್ನು ಕಾಯದೇ ಇಕ್ರಿಮ(ರ) ದಾಳಿ ನಡೆಸಿದರು. ಅದರ ಪರಿಣಾಮವಾಗಿ ಸೋಲನುಭವಿಸಬೇಕಾಯಿತು. ಇದರಿಂದ ಹಝ್ರತ್ ಅಬೂಬಕರ್(ರ) ಅವರೊಂದಿಗೆ ಅತೃಪ್ತರಾದರು ಮತ್ತು ಅವರೊಡನೆ ಒಮಾನಿಗೆ ಹೋಗಲು ಹೇಳಿದರು. ಹಝ್ರತ್ ಅಬೂಬಕರ್(ರ)ರ ಆದೇಶ ಪ್ರಕಾರ ಹಝ್ರತ್ ಇಕ್ರಿಮ(ರ) ತನ್ನ ಸೈನ್ಯದೊಂದಿಗೆ ಒಮಾನಿನ ಕಡೆಗೆ ಅರ್ಜಫ(ರ) ಮತ್ತು ಹುದೈಫರ(ರ) ಹಿಂದೆ ಹಿಂದೆ ಹೊರಟರು. ಅವರಿಬ್ಬರೂ ಒಮಾನಿಗೆ ತಲುಪುವುದಕ್ಕೆ ಮುಂಚಿತವಾಗಿ ಒಮಾನಿನ ಸಮೀಪವಿರುವ ರುಜಾಮ್ ಎಂಬ ಪ್ರದೇಶದಲ್ಲಿ ಅವರಿಬ್ಬರನ್ನೂ ಹಝ್ರತ್ ಇಕ್ರಿಮ(ರ) ಭೇಟಿಯಾದರು. ಅವರು ಜೈಫರ್ ಮತ್ತು ಅವರ ಸಹೋದರ ಉಬಾದ್‌ನಿಗೆ ಸಂದೇಶವನ್ನು ಕಳುಹಿಸಿದರು. ಚರಿತ್ರೆಯ ಕೆಲವು ಪುಸ್ತಕಗಳಲ್ಲಿ, ಉದಾಹರಣೆಗೆ ಕಾಮಿಲ್ ಇಬ್ನು ಸೀರೀನಿನಲ್ಲಿ, ಅವನ ಹೆಸರು ಅಯಾಝ್‌ಬಾನ್ ಎಂದು ಬರೆಯಲಾಗಿದೆ. ರುಜಾಂ ಎಂಬುದು ಒಮಾನಿನಲ್ಲಿ ಇರುವ ಪರ್ವತಗಳ ಉದ್ದದ ಒಂದು ಶ್ರೇಣಿಯಾಗಿದೆ.

ಹೇಗಿದ್ದರೂ ಮುಸ್ಲಿಮ್ ಸೇನೆಯ ಸರದಾರರ ಸಂದೇಶ ಲಭಿಸಿದ ನಂತರ ಜೈಫರ್ ಮತ್ತು ಉಬಾದ್ ತಮ್ಮ ತಮ್ಮ ತಂಗುದಾಣಗಳಿಂದ ಹೊರಟರು. ಧರ್ಮತ್ಯಾಗಿಯಾದ ವ್ಯಕ್ತಿ ಪ್ರವಾದಿತ್ವವನ್ನು ವಾದಿಸಿ, ತನ್ನ ಸೈನ್ಯವನ್ನು ತಯಾರಿಸಿ ತನ್ನ ಶಕ್ತಿಯನ್ನು ವರ್ಧಿಸಿದ ನಂತರ ಇವರಿಬ್ಬರೂ ಅಡಗಿ ಕುಳಿತುಕೊಂಡಿದ್ದರು. ಅಲ್ಲಿಂದ ಮುಸ್ಲಿಮರ ಸೈನ್ಯ ತಲುಪಿದ ಸಂದೇಶ ಲಭಿಸಿದಾಗ ಅವರಿಬ್ಬರೂ ಹೊರಗೆ ಬಂದರು ಮತ್ತು ಸಿಹಾರಿಗೆ ಬಂದು ಡೇರೆ ಹಾಕಿದರು ಮತ್ತು ಹುದೈಫ, ಅರ್ಜಫ ಮತು ಇಕ್ರಿಮರೊಡನೆ ಅವರಿಬ್ಬರ ಬಳಿಗೆ ಬರಲು ಸಂದೇಶ ಕಳುಹಿಸಿದರು. ಸಿಹಾರ್ ಎಂಬುದು ಒಮಾನಿನಲ್ಲಿ ಪರ್ವತಗಳನ್ನು ಒಳಗೊಂಡ ಒಂದು ಗ್ರಾಮವಾಗಿದೆ. ರಜಬ್ ತಿಂಗಳ ಆರಂಭದಲ್ಲಿ ಐದು ದಿನಗಳಿಗೆ ಒಮಾನಿನ ಒಂದು ಮಾರುಕಟ್ಟೆ ಇಲ್ಲಿ ತೆರೆಯಲಾಗುತ್ತಿತ್ತು. ಹೀಗೆ ಮುಸ್ಲಿಮರ ಸೈನ್ಯ ಸುಹಾರ್‌ನಲ್ಲಿ ಬಂದು ಒಟ್ಟುಸೇರಿದರು ಮತ್ತು ಅದಕ್ಕೆ ಸೇರಿಕೊಂಡ ಪ್ರದೇಶದಿಂದ ಧರ್ಮತ್ಯಾಗಿಗಳನ್ನು ತೊಳಗಿಸಿದರು.

ಮತ್ತೊಂದೆಡೆ ಲಖೀದ್ ಬಿನ್ ಮಾಲಿಕ್‌ನಿಗೆ ಇಸ್ಲಾಮಿನ ಸೈನ್ಯ ತಲುಪಿದ ಸುದ್ದಿ ಲಭಿಸಿದಾಗ ತನ್ನ ಸೈನ್ಯದೊಂದಿಗೆ ಹೋರಾಡಲು ಹೊರಟು ದಬಾ ಪ್ರದೇಶದಲ್ಲಿ ತಂಗಿದನು. ಯುದ್ಧದಲ್ಲಿ ಬಲ ಲಭಿಸಲು ಅವನು ಮಹಿಳೆಯರನ್ನು, ಮಕ್ಕಳನ್ನು, ಸಂಪತ್ತು ಮತ್ತು ಸೊತ್ತುಗಳನ್ನು ತನ್ನ ಹಿಂದೆ ಇರಿಸಿದನು. ದಬಾ ಕೂಡ ಈ ಪ್ರದೇಶದ ಒಂದು ಪಟ್ಟಣವೂ ವ್ಯಾಪಾರ ಕೇಂದ್ರವೂ ಆಗಿತ್ತು. ಮುಸ್ಲಿಂ ಸರದಾರರು ಲಖೀದಿನ ಜೊತೆಗೆ ಇದ್ದ ಸರದಾರರಿಗೆ ಪತ್ರ ಬರೆದರು. ಮೊದಲು ಅವರು ಬನೂ ಹಝ್ಖೀದ್‌ನ ಸರದಾರನಿಗೆ ಪತ್ರ ಬರೆದರು. ಅವುಗಳಿಗೆ ಉತ್ತರವಾಗಿ ಆ ಸರದಾರರು ಕೂಡ ಮುಸ್ಲಿಂ ಸರದಾರರಿಗೆ ಪತ್ರ ಬರೆದರು. ಈ ಪತ್ರ ವ್ಯವಹಾರದ ಪರಿಣಾಮವಾಗಿ ಆ ಎಲ್ಲ ಸರದಾರರು ಲಖೀದ್‌ನಿಂದ ಬೇರ್ಪಟ್ಟು ಮುಸ್ಲಿಮರ ಜೊತೆಗೆ ಆದರು. (ಅಸ್‌ದ್ಉಲ್ ಗಾಬ ಸಂಪುಟ–4, ಪುಟ–21–22, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008) (ಅಲ್‌ಮುಫಸ್ಸಿಲ್ ಫಿತ್ತಾರೀಖ್ ಅಲ್‌ಅರಬ್ ಖಬಲ್ ಇಸ್ಲಾಮ್, ಸಂಪುಟ–4, ಪುಟ–329, ಮಕ್ತಬ ಜರೀರ್ 2006) (ತಾರೀಖ್ ತಬರಿ, ಸಂಪುಟ–2, ಪುಟ–291–292, ದಾರುಲ್ ಕುತುಬ ಇಲ್‌ಮಿಯ ಬೈರೂತ್ 2012) (ಸಯ್ಯಿದುನಾ ಅಬೂಬಕರ್ ಸಿದ್ದೀಖ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಸಲಾಬಿ, ಪುಟ–338, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್) (ಮುಜಮುಲ್ ಬಲದಾನ್, ಸಂಪುಟ–5, ಪುಟ–31, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಫರ್ಹಂಗ್ ಸೀರತ್ ಪುಟ–170, ಝುವಾರ ಅಕಾಡಮಿ ಕರಾಚಿ)

ಇದೇ ದಬಾ ಎಂಬ ಪ್ರದೇಶದಲ್ಲಿ ಲಖೀದಿನ ಸೈನ್ಯದೊಂದಿಗೆ ಘೋರವಾದ ಯುದ್ಧ ನಡೆಯಿತು. ಆರಂಭದಲ್ಲಿ ಲಖೀದ್ ಮೇಲುಗೈ ಸಾಧಿಸುತ್ತಿದ್ದನು. ಮುಸ್ಲಿಮರು ಪರಾಜಿತಗೊಳ್ಳುವ ಸಾಧ್ಯತೆಯಿತ್ತು. ಆದರೆ ಅಲ್ಲಾಹನು ಕೃಪೆದೋರಿದನು. ಇಂತಹ ಅಪಾಯಕರ ಸನ್ನಿವೇಶದಲ್ಲಿ ತನ್ನ ಸಹಾಯವನ್ನು ಇಳಿಸಿದನು. ಬಹ್ರೈನಿನ ಅನೇಕ ಗೋತ್ರಗಳು ಮತ್ತು ಬನೂ ಅಬ್ದುಲ್‌ಖೈಸಿನ ಕಡೆಯಿಂದ ಬಹಳಷ್ಟು ಸಹಾಯಕ ಸೈನ್ಯಗಳು ತಲುಪಿದುವು. ಇದರಿಂದ ಮುಸ್ಲಿಮರ ಶಕ್ತಿ ಮತ್ತು ಬಲ ವರ್ಧಿಸಿತು. ಮುಸ್ಲಿಮರು ಮುಂದಕ್ಕೆ ಹೋಗಿ ಲಖೀದಿನ ಸೈನ್ಯದ ಮೇಲೆ ಶಕ್ತವಾದ ದಾಳಿ ನಡೆಸಿತು. ಇದರಿಂದ ಲಖೀದಿನ ಸೈನ್ಯ ಅಸ್ಥಿರವಾಯಿತು ಮತ್ತು ಪರಾರಿಯಾಗಲು ಶುರುವಾಯಿತು. ಮುಸ್ಲಿಮರು ಅವರನ್ನು ಹಿಂಬಾಲಿಸಿ 10 ಸಾವಿರ ಯೋಧರನ್ನು ವಧಿಸಿದರು. ಮಕ್ಕಳು ಮತ್ತು ಮಹಿಳೆಯರನ್ನು ಬಂಧಿಸಿದರು. ಸಂಪತ್ತು ಮತ್ತು ಮಾರುಕಟ್ಟೆಯನ್ನು ವಶಪಡಿಸಿಕೊಂಡರು. ಅದರ ಐದನೇ ಒಂದು ಭಾಗವನ್ನು ಅರ್ಜಫರ(ರ) ಮೂಲಕ ಹಝ್ರತ್ ಅಬೂಬಕರ್(ರ)ರ ಸನ್ನಿಧಿಗೆ ಕಳುಹಿಸಿದರು. ಈ ರೀತಿಯಲ್ಲಿ ಒಮಾನಿನಲ್ಲಿ ಈ ಪಿತೂರಿ ಕೊನೆಗೊಂಡಿತು. ಮುಸ್ಲಿಮರ ಆಡಳಿತ ಶಕ್ತವಾದ ಅಡಿಪಾಯದ ಮೇಲೆ ಸ್ಥಾಪನೆಗೊಂಡಿತು. ಯುದ್ಧದ ನಂತರ ಹುದೈಫ(ರ) ಒಮಾನಿನಲ್ಲೇ ನೆಲೆಸಿದರು. ಅಲ್ಲಿಯ ಸ್ಥಿತಿಗತಿಗಳನ್ನು ಸರಿಪಡಿಸುವ, ಶಾಂತಿ ಮತ್ತು ಸಮಾಧಾನವನ್ನು ಸ್ಥಾಪಿಸುವ ಕಾರ್ಯದಲ್ಲಿ ನಿರತರಾದರು. ಅರ್ಜಫ(ರ) ಯುದ್ಧ ಸಂಪತ್ತಿನೊಂದಿಗೆ ಮದೀನಕ್ಕೆ ಹೊರಟರು. ಹಝ್ರತ್ ಇಕ್ರಿಮ(ರ) ತನ್ನ ಸೈನ್ಯದೊಂದಿಗೆ ಮಹ್‌ರದಲ್ಲಿ ಎದ್ದ ದಂಗೆಯನ್ನು ಕೊನೆಗೊಳಿಸಲು ಹೊರಟರು. (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲೀ ಮುಹಮ್ಮದ್ ಸಲಾಬಿ ಅನುವಾದ ಪುಟ–338–339, ಅಲ್‌ಫುರ್ಖಾನ್ ಮುಝುಫ್ಫರ್‌ಗಡ್ ಪಾಕಿಸ್ತಾನ್) (ಹಝ್ರತ್ ಅಬುಬಕರ್ ಸೀದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕಲ್ ಅನುವಾದ ಶೇಖ್ ಅಹ್ಮದ್ ಪಾನೀಪತಿ, ಪುಟ–244–245)

ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ಹಝ್ರತ್ ಇಕ್ರಿಮ(ರ) ನಡೆಸಿದ ಕಾರ್ಯಾಚರಣೆಗಳ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಇಕ್ರಿಮ(ರ)ರಿಗೆ ಕೊಟ್ಟು ಅವರೊಡನೆ ಮುಸೈಲಿಮರನ್ನು ಎದುರಿಸಲು ಆದೇಶ ನೀಡಿದ್ದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–257, ದಾರುಲ್ ಕುತುಬ್ ಇಲ್‌ಮಿಯ)

ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮ(ರ)ರನ್ನು ಮುಸೈಲಿಮನನ್ನು ಎದುರಿಸಲಿಕ್ಕಾಗಿ ಯಮಾಮದ ಕಡೆಗೆ ಕಳುಹಿಸಿದರು. ಅವರ ಹಿಂದೆ ಹಝ್ರತ್ ಶುರಹ್‌ಬೀಲ್ ಬಿನ್ ಹಸನರನ್ನು ಕೂಡ ಯಮಾಮದ ಕಡೆಗೆ ಕಳುಹಿಸಿದ್ದರು. ಶುರಹ್‌ಬೀಲ್ ಯಮಾಮಗೆ ತಲುಪುವ ತನಕ ದಾಳಿ ನಡೆಸಬಾರದು ಎಂದು ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮ(ರ)ರೊಡನೆ ಹೇಳಿದ್ದರು. ಆದರೆ ಮೊದಲೇ ಪ್ರಸ್ತಾಪಿಸಲಾದಂತೆ ಹಝ್ರತ್ ಇಕ್ರಿಮ(ರ) ಅವಸರಪಟ್ಟರು. ಶುರಹ್‌ಬೀಲ್ ತಲುಪುವುದಕ್ಕೆ ಮುಂಚಿತವಾಗಿ ಮುಂದೆ ಹೋಗಿ ದಾಳಿ ನಡೆಸಿದರು. ಮುಸೈಲಿಮ ಅವರನ್ನು ಹಿಂದಕ್ಕೆ ನೂಕಿದನು. ಎಂದರೆ ಹಝ್ರತ್ ಇಕ್ರಿಮ(ರ)ರ ಸೈನ್ಯ ಪರಾಜಿತಗೊಂಡು ಹಿಂದಕ್ಕೆ ಸರಿಯುವಂತಾಯಿತು. ನಡೆದ ಘಟನೆಯ ಬಗ್ಗೆ ಶುರಹ್‌ಬೀಲ್‌ಗೆ ಮಾಹಿತಿ ಲಭಿಸಿದಾಗ ಅವರು ಇದ್ದ ಜಾಗದಲ್ಲೇ ನಿಂತುಕೊಂಡರು. ನನ್ನ ಬೇರೊಂದು ಆದೇಶ ಬರುವ ತನಕ ಯಮಾಮದ ಸಮೀಪದಲ್ಲೇ ತಂಗಬೇಕು ಎಂದು ಹಝ್ರತ್ ಅಬೂಬಕರ್(ರ) ಶುರಹ್‌ಬೀಲ್‌ರಿಗೆ ಪತ್ರ ಬರೆದು ತಿಳಿಸಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–291, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಮೊದಲೇ ಪ್ರಸ್ತಾಪಿಸಲಾದಂತೆ ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮ(ರ)ರಿಗೆ ಹೀಗೆ ಪತ್ರ ಬರೆದರು: ಏನಾದರೂ ದೊಡ್ಡ ಸಾಧನೆಯನ್ನು ಮಾಡುವ ತನಕ ನಾನು ನಿನ್ನ ಮುಖ ನೋಡುವುದಿಲ್ಲ ಮತ್ತು ನಿನ್ನ ಯಾವುದೇ ಮಾತನ್ನು ಒಪ್ಪುವುದಿಲ್ಲ. ಏನಾದರೂ ಅಸಾಮಾನ್ಯವಾದ ಕಾರ್ಯವನ್ನು ಮಾಡಿದರೆ ಮಾತ್ರ ನನ್ನ ಬಳಿಗೆ ಬಂದರಾಯಿತು. ನೀನು ಈಗ ಒಮಾನಿಗೆ ಹೋಗು ಮತ್ತು ಒಮಾನ್‌ರವರ ವಿರುದ್ಧ ಯುದ್ಧ ನಡೆಸು. ಹುದೈಫ ಮತ್ತು ಅರ್ಜಫರಿಗೆ ನೆರವಾಗು.

ಹೇಗಿದ್ದರೂ ಮೊದಲೇ ಹೇಳಿದಂತೆ ಒಮಾನ್ ಎಂಬುದು ಪೇರ್ಶಿಯದ ಕೊಲ್ಲಿಯ ಒಂದು ಭಾಗವಾಗಿದೆ. ಅದರಲ್ಲಿ ಆ ಕಾಲದಲ್ಲಿ ಈಗಿನ ಸಂಯುಕ್ತ ಅರಬ್ ರಾಜ್ಯಗಳ ಪೂರ್ವ ಪ್ರದೇಶಗಳು ಒಳಪಟ್ಟಿದ್ದುವು. ಇಲ್ಲಿ ವಿಗ್ರಹಪೂಜಕ ಗೋತ್ರವಾದ ಅಝ್ದ್ ಮತ್ತು ಇತರ ಅಗ್ನಿಪೂಜಕ ಗೋತ್ರಗಳು ನೆಲೆಸಿದ್ದುವು. ಮಸ್ಕತ್, ಸುಹಾರ್ ಮತ್ತು ದಬಾ ಇಲ್ಲಿಯ ಕಾರಾವಳಿ ಪಟ್ಟಣಗಳಾಗಿದ್ದುವು. ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ನಿಮ್ಮಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಕುದುರೆಸವಾರರ ಸರದಾರರಾಗಿರುವಿರಿ. ಆದರೆ ನೀವು ಹುದೈಫರ ಮೇಲ್ನೋಟದಲ್ಲಿರುವ ಪ್ರದೇಶಗಳಲ್ಲಿ ಇರುವಾಗ ಹುದೈಫ ನಿಮ್ಮೆಲ್ಲರ ನೇತಾರರಾಗುವರು. ಕಾರ್ಯಾಚರಣೆಯ ನಂತರ ನೀವು ಮಹ್‌ರಗೆ ಹೋಗಿರಿ. ಅನಂತರ ಅಲ್ಲಿಂದ ಯಮನಿಗೆ ಹೋಗಿರಿ. ಯಮನ್ ಮತ್ತು ಹಿಝ್ರೇ ಮೌತಿನಲ್ಲಿ ನಡೆಯುವ ಕಾರ್ಯಾಚರಣೆಗಳಲ್ಲಿ ಮುಹಾಜಿರ್ ಬಿನ್ ಅಬು ಉಮಯ್ಯರ ಜೊತೆಗೆ ಇರಿ. ಒಮಾನ್ ಮತ್ತು ಯಮನಿನ ನಡುವೆ ನೆಲೆಸಿರುವ ಪ್ರದೇಶಗಳಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರನ್ನು ಕೊನೆಗೊಳಿಸಿರಿ. ಯುದ್ಧದಲ್ಲಿ ನೀವು ಮಾಡುವ ಕಾರ್ಯಸಾಧನೆಗಳ ಮಾಹಿತಿಗಳನ್ನು ನನಗೆ ತಿಳಿಸುತ್ತಾ ಇರಿ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–291, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಅಟ್ಲಸ್ ಸೀರತ್ ನಬವಿ(ಸ), ಪುಟ–68, ದಾರುಸ್ಸಲಾಮ್ ರಿಯಾಝ್ 1424ಹಿ)

ಇವುಗಳಾಗಿದ್ದುವು ಹಝ್ರತ್ ಅಬೂಬಕರ್(ರ)ರ ನಿರ್ದೇಶನಗಳು. ಹೇಗಿದ್ದರೂ ಇಕ್ರಿಮ(ರ) ಹೊರಡುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಹುದೈಫ ಬಿನ್ ಮುಹ್‌ಸಿನ್ ಗಲ್‌ಫಾನಿ ಒಮಾನಿನ ಧರ್ಮತ್ಯಾಗಿಗಳ ವಿರುದ್ಧ ಮತ್ತು ಅರ್ಜಫ(ರ) ಮಹ್‌ರದ ಧರ್ಮತ್ಯಾಗಿಗಳ ವಿರುದ್ಧ ಯುದ್ಧ ಮಾಡಲು ಹೊರಟಿದ್ದರು. ಹಝ್ರತ್ ಅಬೂಬಕರ್(ರ)ರ ಆದೇಶ ಪ್ರಕಾರ ಇಕ್ರಿಮ(ರ) ತನ್ನ ಸೈನ್ಯದೊಂದಿಗೆ ಅರ್ಜಫ(ರ) ಮತ್ತು ಹುದೈಫರ(ರ) ಹಿಂದೆ ಹಿಂದೆ ಹೊರಟರು. ಅವರಿಬ್ಬರೂ ಒಮಾನಿಗೆ ತಲುಪುವುದಕ್ಕೆ ಮುಂಚಿತವಾಗಿ ಇಕ್ರಿಮ(ರ) ಅವರನ್ನು ಭೇಟಿಯಾದರು. ಒಮಾನಿನ ಕಾರ್ಯಾಚರಣೆಗಳು ಮುಕ್ತಾಯಗೊಂಡ ನಂತರ ಅವರಿಬ್ಬರೂ ಇಕ್ರಿಮರ ಅಭಿಪ್ರಾಯದಂತೆ ನಡೆಯಲು ಹಾಗೂ ಇಕ್ರಿಮರನ್ನು ತಮ್ಮ ಜೊತೆಗೆ ಕೊಂಡುಹೋಗಲು ಅಥವಾ ಅಲ್ಲೇ ತಂಗಲು ಹೇಳಬೇಕೆಂದು ಅವರಿಬ್ಬರಿಗೆ ಹಝ್ರತ್ ಅಬೂಬಕರ್(ರ) ಆದೇಶ ನೀಡಿದ್ದರು. ಹೇಗಿದ್ದರೂ ಈ ಮೂವರು ನೇತಾರರು ಒಮಾನಿನ ಸಮೀಪವಿರುವ ರುಜಾಮ್ ಎಂಬ ಪ್ರದೇಶದಲ್ಲಿ ಪರಸ್ಪರ ಭೇಟಿಯಾದಾಗ, ಮುಸ್ಲಿಮರ ಸೈನ್ಯ ತಲುಪಿದ ಬಗ್ಗೆ ಮಾಹಿತಿ ನೀಡಲು ಅವರು ಜೈಫರ್ ಮತ್ತು ಉಬಾದಿನ ಬಳಿಗೆ ತಮ್ಮ ದೂತರನ್ನು ಕಳುಹಿಸಿದರು. ಮತ್ತೊಂದೆಡೆ ಮುಸ್ಲಿಮರ ಸೈನ್ಯ ತಲುಪಿರುವ ಸುದ್ದಿ ಲಖೀದಿನಿಗೆ

ಲಭಿಸಿದಾಗ ಅವನು ತನ್ನ ಗುಂಪುಗಳನ್ನು ಒಟ್ಟು ಸೇರಿಸಿ ದಬಾದಲ್ಲಿ ಬಂದು ತಂಗಿದನು. ಜೈಫರ್ ಮತ್ತು ಉಬಾದ್ ಕೂಡ ತಮ್ಮ ತಮ್ಮ ತಂಗುದಾಣಗಳಿಂದ ಹೊರಟು ಸುಹಾರ್‌ನಲ್ಲಿ ಡೇರೆ ಹಾಕಿಕೊಂಡರು. ಅವರ ಬಳಿಗೆ ಬರಲು ಹುದೈಫ, ಅರ್ಜಫ ಮತ್ತು ಇಕ್ರಿಮರಿಗೆ ಸಂದೇಶ ಕಳುಹಿಸಿದರು. ಮೊದಲು ಪ್ರಸ್ತಾಪಿಸಲಾದಂತೆ ಅವರೆಲ್ಲರೂ ಸುಹಾರಿಗೆ ಬಂದರು. ತಮ್ಮ ಸುತ್ತವಿರುವ ಪ್ರದೇಶಗಳಲ್ಲಿ ಇದ್ದ ಧರ್ಮತ್ಯಾಗಿಗಳನ್ನು ಕೊನೆಗೊಳಿಸಿದರು. ಕೊನೆಗೆ ಸಮೀಪ ಪ್ರದೇಶಗಳಲ್ಲಿ ಇದ್ದ ಎಲ್ಲ ಜನರೊಡನೆ ಸಂಧಾನವಾಯಿತು. ಅದರೊಂದಿಗೆ ಅವರು ಲಖೀದಿನ ಜೊತೆಗಿದ್ದ ಸರದಾರರರಿಗೆ ಪತ್ರಗಳನ್ನು ಬರೆದರು. ಅವರು ಬನೂ ಜದೀದಿನ ಸರದಾರನಿಗೆ ಮೊದಲ ಪತ್ರವನ್ನು ಬರೆದಿದ್ದರು. ಆ ಪತ್ರಗಳಿಗೆ ಉತ್ತರವಾಗಿ ಸರದಾರರು ಕೂಡ ಮುಸ್ಲಿಮರಿಗೆ ಪತ್ರಗಳನ್ನು ಬರೆದರು. ಮೊದಲೇ ಪ್ರಸ್ತಾಪಿಸಲಾದಂತೆ ಅದರ ಪರಿಣಾಮವಾಗಿ ಈ ಎಲ್ಲ ಸರದಾರರು ಲಖೀದಿನಿಂದ ಬೇರ್ಪಟ್ಟರು. ಅನಂತರ ಲಖೀದಿನ ಸೈನ್ಯ ಮತ್ತು ಮುಸ್ಲಿಮರ ನಡುವೆ ಘೋರ ಯುದ್ಧ ನಡೆಯಿತು. ಈ ಯುದ್ಧದ ನಂತರ ಹುದೈಫ ಒಮಾನಿನಲ್ಲೇ ತಂಗಿಕೊಂಡು ಸಮಸ್ಯೆಗಳನ್ನು ಪರಿಹರಿಸಬೇಕು ಮತ್ತು ಜನರಿಗೆ ಸಮಾಧಾನವನ್ನು ಉಂಟುಮಾಡಿಕೊಡಬೇಕು ಎಂಬ ವಿಷಯದಲ್ಲಿ ಇಕ್ರಿಮ ಮತ್ತು ಹುದೈಫ ಪರಸ್ಪರ ಒಪ್ಪಿಕೊಂಡರು. ಮುಸ್ಲಿಮರ ದೊಡ್ಡ ಸೈನ್ಯದೊಂದಿಗೆ ಇಕ್ರಿಮ ಇತರ ಮುಶ್ರಿಕರನ್ನು ಕೊನೆಗೊಳಿಸಲು ಮುಂದಕ್ಕೆ ಹೊರಟರು. ಅವರು ಮಹ್‌ರದಿಂದ ತಮ್ಮ ಯುದ್ಧ ಕಾರ್ಯಾಚರಣೆಗಳ ಆರಂಭ ಮಾಡಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–292, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಮಹ್‌ರ ಗೋತ್ರದ ಕಡೆಗೆ ಹಝ್ರತ್ ಇಕ್ರಿಮ(ರ) ಹೋದ ಬಗ್ಗೆ ಹೀಗೆ ವರದಿಯಿದೆ: ಒಮಾನಿನ ಧರ್ಮತ್ಯಾಗಿಗಳನ್ನು ಕೊನೆಗೊಳಿಸಿದ ನಂತರ ಹಝ್ರತ್ ಇಕ್ರಿಮ(ರ) ತನ್ನ ಸೈನ್ಯದ ಜೊತೆಗೆ ನಜದಿನ ಪ್ರದೇಶವಾದ ಮಹ್‌ರ ಗೋತ್ರದ ಕಡೆಗೆ ಹೊರಟರು. ಒಮಾನ್ ನಿವಾಸಿಗಳಿಂದ ಮತ್ತು ಒಮಾನಿನ ಸುತ್ತಮುತ್ತ ಇದ್ದ ಜನರಿಂದ ತನ್ನ ಕಾರ್ಯಾಚರಣೆಗಳಿಗೆ ಹಝ್ರತ್ ಇಕ್ರಿಮ(ರ) ನೆರವು ಬೇಡಿದರು. ಅವರು ಹೊರಟು ಮಹ್‌ರ ಗೋತ್ರವಿರುವ ಪ್ರದೇಶಕ್ಕೆ ತಲುಪಿದರು. ಅವರ ಜೊತೆಗೆ ಅನೇಕ ಗೋತ್ರಗಳ ಜನರಿದ್ದರು. ಕೊನೆಗೆ ಹಝ್ರತ್ ಇಕ್ರಿಮ(ರ) ಮಹ್‌ರ ಗೋತ್ರಗಳು ಮತ್ತು ಅದರ ಸುತ್ತಮುತ್ತ ಇರುವ ಪ್ರದೇಶಗಳ ಮೇಲೆ ದಾಳಿ ನಡೆಸಿದರು. ಹಝ್ರತ್ ಇಕ್ರಿಮ(ರ)ರ ಸೈನ್ಯವನ್ನು ಎದುರಿಸಲು ಮಹ್‌ರದ ಜನರು ಎರಡು ಗುಂಪುಗಳಾಗಿ ವಿಂಗಡನೆಗೊಂಡರು. ಒಂದು ಗುಂಪು ಜಬ್ರೂತ್ ಎಂಬ ಪ್ರದೇಶದಲ್ಲಿ ಶುಖ್‌ರಿಯತ್ ಎಂಬ ಹೆಸರಿನ ಒಬ್ಬ ವ್ಯಕ್ತಿಯ ನೇತೃತ್ವದಲ್ಲಿ ಯುದ್ಧಕ್ಕಾಗಿ ತಯಾರಾಯಿತು. ಮತ್ತೊಂದು ಗುಂಪು ನಜದಿನಲ್ಲಿ ಬನೂ ಮುಹಾರಿಬಿನ ಒಬ್ಬ ವ್ಯಕ್ತಿಯಾದ ಮುಸ್ಯೆಯಿಬ್‌ರ ನೇತೃತ್ವದಲ್ಲಿ ನಿಂತಿತ್ತು. ಸತ್ಯದಲ್ಲಿ ಶುಖ್‌ರಿಯತ್ ಮತ್ತು ಅವನ ಜೊತೆಗೆ ಇದ್ದ ಗುಂಪನ್ನು ಹೊರತುಪಡಿಸಿ ಮಹ್ರದ ಪೂರ್ತಿ ಜನರು ಈ ಸೇನಾಧಿಪತಿಯ ಅಧೀನದಲ್ಲಿದ್ದರು. ಈ ಇಬ್ಬರು ಸರದಾರರು ಪರಸ್ಪರ ವಿರೋಧಿಗಳಾಗಿದ್ದರು. ತನ್ನ ನೇತಾರನಿಗೆ ಯಶಸ್ಸು ಲಭಿಸಬೇಕು ಎಂದು ಈ ಎರಡೂ ಸೈನ್ಯಗಳಲ್ಲಿ ಇರುವ ಪ್ರತಿಯೊಬ್ಬರು ಬಯಸುತ್ತಿದ್ದರು. ಇದೇ ಸಂಗತಿಯ ಮೂಲಕವೇ ಅಲ್ಲಾಹನು ಮುಸ್ಲಿಮರಿಗೆ ನೆರವು ನೀಡಿದನು. ಮುಸ್ಲಿಮರನ್ನು ಅವರ ಶತ್ರುಗಳ ವಿರುದ್ಧ ಬಲಪಡಿಸಿದನು ಮತ್ತು ಶತ್ರುಗಳನ್ನು ದುರ್ಬಲಗೊಳಿಸಿದನು. ಶುಖ್‌ರಿಯತಿನ ಜೊತೆಗೆ ಸ್ವಲ್ಪವೇ ಜನರನ್ನು ಕಂಡಾಗ ಅವರೊಡನೆ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಲು ಹಝ್ರತ್ ಇಕ್ರಿಮ(ರ) ಹೇಳಿದರು. ಅವನು ಮುಸ್ಲಿಮನಾಗಿದ್ದನು. ಪುನಃ ಮುಸ್ಲಿಮನಾಗಲು ಮತ್ತು ಮುಸ್ಲಿಮರ ವಿರುದ್ಧ ಯುದ್ಧ ನಡೆಸದಿರಲು ಹಝ್ರತ್ ಇಕ್ರಿಮ(ರ) ಹೇಳಿದರು. ಹೀಗೆ ಹುರಿದುಂಬಿಸಲಾದ ಕೂಡಲೇ ಶುಖ್‌ರಿಯತ್ ಅವರ ಆಮಂತ್ರಣವನ್ನು ಸ್ವೀಕಾರ ಮಾಡಿದನು. ಈ ರೀತಿಯಲ್ಲಿ ಅಲ್ಲಾಹನು ಮುಸ್ಯೆಯಿಬ್‌ನ ಸೈನ್ಯವನ್ನು ದುರ್ಬಲಗೊಳಿಸಿದನು. ಅನಂತರ ಇಸ್ಲಾಂ ಕಡೆಗೆ ಮರಳಿ ಬರಲು ಮತ್ತು ಸತ್ಯನಿಷೇಧದಿಂದ ಹಿಂದೆ ಸರಿಯಲು ಹಝ್ರತ್ ಇಕ್ರಿಮ(ರ) ಮುಸ್ಯೆಯಿಬ್‌ನ ಕಡೆಗೆ ದೂತರ ಮೂಲಕ ಸಂದೇಶ ಕಳುಹಿಸಿದರು. ಆದರೆ ಅವನ ಜೊತೆಗೆ ದೊಡ್ಡ ಸೈನ್ಯವಿತ್ತು. ಅದರ ಆಧಿಕ್ಯ ಅವನನ್ನು ಮೋಸಗೊಳಿಸಿತು. ಶುಖ್‌ರಿಯತ್ ಇಸ್ಲಾಂ ಸ್ವೀಕಾರ ಮಾಡಿದ ಕಾರಣದಿಂದ ಮುಸ್ಯೆಯಿಬ್ ಮತ್ತು ಶುಖ್‌ರಿಯತಿನ ನಡುವೆ ಇದ್ದ ವಿರೋಧ ಇನ್ನಷ್ಟು ಹೆಚ್ಚಾಯಿತು. ಹೇಗಿದ್ದರೂ ಇಕ್ರಿಮ ಅವನ ಸೈನ್ಯದ ಕಡೆಗೆ ಹೊರಟರು. ಶುಖ್‌ರಿಯತ್ ಕೂಡ ಅವರ ಜೊತೆಗೆ ಇದ್ದನು. ನಜದಿನಲ್ಲಿ ಇರುಪಕ್ಷಗಳ ಸೈನ್ಯಗಳು ಮುಸ್ಯೆಯಿಬ್‌ನ ಸೈನ್ಯದ ವಿರುದ್ಧ ಹೋರಾಡಿದುವು. ಅವರು ದುಬಾದಲ್ಲಿ ನಡೆಸಿದ ಯುದ್ಧಕ್ಕಿಂತ ಘೋರವಾದ ಯುದ್ಧ ನಡೆಸಿತು. ಅಲ್ಲಾಹನು ಧರ್ಮತ್ಯಾಗಿಗಳಾದ ದಂಗೆಗಾರರ ಸೇನೆಯನ್ನು ಪರಾಜಿತಗೊಳಿಸಿದನು. ಅವರ ಸರದಾರ ವಧಿಸಲ್ಪಟ್ಟನು. ಓಡಿಹೋಗುವವರನ್ನು ಮುಸ್ಲಿಮರು ಹಿಂಬಾಲಿಸಿದರು. ಅವರಲ್ಲಿ ಅನೇಕರನ್ನು ವಧಿಸಿದರು. ಅನೇಕರನ್ನು ಬಂಧಿಸಿದರು. ಯುದ್ಧ ಸಂಪತ್ತಾಗಿ ಎರಡು ಸಾವಿರದಷ್ಟು ಉತ್ತಮ ಗುಣಮಟ್ಟದ ಒಂಟೆಗಳು ಮುಸ್ಲಿಮರಿಗೆ ಲಭಿಸಿದುವು.

ಯುದ್ಧ ಸಂಪತ್ತನ್ನು ಹಝ್ರತ್ ಇಕ್ರಿಮ(ರ) ಐದು ಭಾಗಗಳನ್ನಾಗಿ ವಿಂಗಡಿಸಿದರು. ಐದನೇ ಒಂದು ಭಾಗವನ್ನು ಹಝ್ರತ್ ಅಬೂಬಕರ್(ರ)ರಿಗೆ ತಲುಪಿಸಲು ಶುಖ್‌ರಿಯತನ್ನು ಕಳುಹಿಸಿದರು. ಉಳಿದ ನಾಲ್ಕು ಭಾಗಗಳು ಮುಸ್ಲಿಮರ ನಡುವೆ ವಿತರಣೆ ಮಾಡಲಾದುವು. ಈ ರೀತಿಯಲ್ಲಿ ಹಝ್ರತ್ ಇಕ್ರಿಮ(ರ)ರ ಸೈನ್ಯ ಸವಾರಿಮೃಗಗಳು, ಸಂಪತ್ತು, ಸೊತ್ತು ಮತ್ತು ಸಾಮಾನುಗಳ ಕಾರಣಗಳಿಂದ ಇನ್ನಷ್ಟು ಶಕ್ತಿಶಾಲಿಯಾಯಿತು. ಹಝ್ರತ್ ಇಕ್ರಿಮ(ರ) ಅಲ್ಲೇ ತಂಗಿಕೊಂಡು ಆ ಪ್ರದೇಶದ ಎಲ್ಲ ಜನರನ್ನು ಒಟ್ಟುಸೇರಿಸಿದರು. ಅವರೆಲ್ಲರೂ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರು. ಈ ವಿಜಯದ ಸುವಾರ್ತೆಯನ್ನು ಸಾಯಿಬ್ ಎಂಬ ವ್ಯಕ್ತಿಯ ಮೂಲಕ ಹಝ್ರತ್ ಅಬೂಬಕರ್(ರ)ರ ಸನ್ನಿಧಿಗೆ ಮುಟ್ಟಿಸಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–292–293, ದಆರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಹಝ್ರತ್ ಇಕ್ರಿಮ(ರ) ಯಮನಿನ ಕಡೆಗೆ ಹೋದ ಬಗ್ಗೆ ಪ್ರಸ್ತಾಪವಿದೆ. ಮಹ್‌ರದ ನಂತರ ಯಮನಿಗೆ ಹೋಗಲು, ಯಮನ್ ಮತ್ತು ಹಿಝ್‌ರೆ ಮೌತಿನ ಕಾರ್ಯಾಚರಣೆಗಳಲ್ಲಿ ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯರ ಜೊತೆಗೆ ಇರಲು ಹಾಗೂ ಒಮಾನ್ ಮತ್ತು ಯಮನಿನ ನಡುವೆ ಇರುವ ಜನರಲ್ಲಿ ಧರ್ಮತ್ಯಾಗ ಮಾಡಿದ್ದವರನ್ನು ಕೊನೆಗೊಳಿಸಲು ಹಝ್ರತ್ ಅಬೂಬಕರ್(ರ) ಪತ್ರ ಮೂಲಕ ಹಝ್ರತ್ ಇಕ್ರಿಮ(ರ)ರಿಗೆ ನಿರ್ದೇಶನ ಕೊಟ್ಟಿದ್ದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–291, ದಆರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಹೀಗೆ ಹಝ್ರತ್ ಇಕ್ರಿಮ(ರ) ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಮಹ್‌ರದಿಂದ ಹೊರಟು ಯಮನಿನ ಮಾರ್ಗವಾಗಿ ಅಬೀನಿಗೆ ತಲುಪಿದರು. ಅಬೀನ್ ಎಂಬುದು ಕೂಡ ಯಮನಿನ ಒಂದು ಊರಾಗಿದೆ. ಅವರ ಜೊತೆಗೆ ದೊಡ್ಡದಾದೊಂದು ಸೈನ್ಯವಿತ್ತು. ಅದರಲ್ಲಿ ಮುಹ್‌ರ ಗೋತ್ರ ಮತ್ತು ಇತರ ಗೋತ್ರಗಳ ಅನೇಕ ಜನರು ಭಾಗಿಯಾಗಿದ್ದರು. ಹಝ್ರತ್ ಇಕ್ರಿಮ(ರ) ತನ್ನ ಪೂರ್ತಿ ತಂಗುದಾಣವನ್ನು ದಕ್ಷಿಣ ಯಮನಿನಲ್ಲೇ ಇರಿಸಿದರು. ಅಲ್ಲಿ ನಖಾ ಮತ್ತು ಹಮೀರಿನ ಗೋತ್ರಗಳನ್ನು ಕೊನೆಗೊಳಿಸುವುದರಲ್ಲಿ ನಿರತರಾದರು. ಉತ್ತರ ಯಮನಿನ ಕಡೆಗೆ ಹೋಗುವ ಆವಶ್ಯಕತೆ ಬರಲಿಲ್ಲ.

ಪರಾರಿಯಾಗುತ್ತಿದ್ದ ನಖಾ ಗೋತ್ರವರನ್ನು ಹಿಡಿದ ನಂತರ ಹಝ್ರತ್ ಇಕ್ರಿಮ(ರ) ಆ ಗೋತ್ರದ ಜನರನ್ನು ಒಟ್ಟುಗೂಡಿಸಿದರು. ಇಸ್ಲಾಮಿನ ಬಗ್ಗೆ ಅಭಿಪ್ರಾಯವೇನೆಂದು ಅವರೊಡನೆ ಕೇಳಿದರು. ಅವರು ಹೇಳಿದರು: ಇಸ್ಲಾಮಿಗೆ ಮುಂಚೆಯೂ ನಾವು ಧರ್ಮಾವಲಂಬಿಯಾಗಿದ್ದೆವು. ನಾವು ಅರಬ್ ಮತ್ತು ಇತರರ ಮೇಲೆ ದಾಳಿ ಮಾಡುತ್ತಿರಲಿಲ್ಲ. ಹೀಗಿರುವಾಗ ಈಗ ಯಾವ ಧರ್ಮದ ಶ್ರೇಷ್ಠತೆ ಬಗ್ಗೆ ನಮಗೆ ಮನವರಿಕೆಯಾಗಿದೆಯೋ ಮತ್ತು ಯಾವ ಧರ್ಮದ ಪ್ರೇಮ ನಮ್ಮ ಹೃದಯಗಳ ಒಳಗೆ ಹೋಗಿದೆಯೋ ಅದನ್ನು ಪ್ರವೇಶಿಸುವುದರಲ್ಲಿ ನಮಗೆ ಯಾವ ಅಡ್ಡಿ ಇರಲು ಸಾಧ್ಯ? ಅವರು ಮನಸ್ಸಾರೆ ಹೇಳುತ್ತಿದ್ದಾರೆಯೇ ಅಥವಾ ಜೀವರಕ್ಷಣೆಗಾಗಿ ಹಾಗೆ ಹೇಳುತ್ತಿರುವರೋ ಎಂದು ಅರಿಯಲು ಹಝ್ರತ್ ಇಕ್ರಿಮ(ರ) ತನಿಖೆ ನಡೆಸಿದಾಗ ಅವರು ಹೇಳಿದ್ದು ಸರಿಯೇ ಆಗಿದೆ ಎಂದು ತಿಳಿದುಬಂತು. ಅವರು ನಿಜವಾಗಿಯೂ ಸರಿಯಾದ ಮಾತನ್ನು ಹೇಳುತ್ತಿದ್ದರು. ಅವರ ಜನಸಾಮಾನ್ಯರು ರೂಢಿಯಂತೆ ಇಸ್ಲಾಮಿನಲ್ಲಿ ಸ್ಥಿರರಾದರು. ಆದರೆ ಅವರಲ್ಲಿ ಧರ್ಮತ್ಯಾಗಿಗಳಾದ ವಿಶಿಷ್ಟ ಜನರು ಪರಾರಿಯಾದರು. ಹೀಗೆ ಹಝ್ರತ್ ಇಕ್ರಿಮ(ರ) ನಖಾ ಮತ್ತು ಹಮೀರ್ ಗೋತ್ರಗಳನ್ನು ಧರ್ಮತ್ಯಾಗದ ಆಕ್ಷೇಪದಿಂದ ಮುಕ್ತಗೊಳಿಸಿದರು. ಅವರನ್ನು ಒಟ್ಟುಗೂಡಿಸಲು ಅಲ್ಲೇ ತಂಗಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–298, ದಆರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–233, ಬುಕ್ ಕಾರ್ನರ್ ಶೋರೂಮ್ ಜೇಲಮ್) (ಮುಜಮುಲ್ ಬಲದಾನ್ ಸಂಪುಟ–1, ಪುಟ–109)

ಹಝ್ರತ್ ಇಕ್ರಿಮ(ರ) ಅಬೀನಿನಲ್ಲಿ ತಂಗಿದ ಕಾರಣದಿಂದ ಅಸ್ವದ್ ಅನ್ಸಿಯನ್ನು ನಂಬಿದ ಅಳಿದುಳಿದ ಜನರ ಸಂಘದ ಮೇಲೆ ಆಳವಾದ ಪ್ರಭಾವ ಉಂಟಾಯಿತು. ಅವರ ನೇತೃತ್ವವನ್ನು ಖೈಸ್ ಬಿನ್ ಮಖ್‌ಶೂಹ್ ಮತ್ತು ಅಮ್ರ್ ಬಿನ್ ಮಅ್‌ದಿ ಕರ್ಬ್ ಮಾಡುತ್ತಿದ್ದರು. ಸುನ್‌ಅದಿಂದ ಪರಾರಿಯಾದ ನಂತರ ಖೈಸ್ ಸುನ್‌ಅದ ನಡುವೆ ಓಡಾಡುತ್ತಿದ್ದನು ಮತ್ತು ಲಹಜಿನಲ್ಲಿ ಇದ್ದ ಅಸ್ವದ್ ಅನ್ಸಿಯ ಸಂಘದಲ್ಲಿ ಅಮ್ರ್ ಬಿನ್ ಮಅ್‌ದಿ ಕರ್ಬ್ ಸೇರಿದ್ದರು. ಆದರೆ ಹಝ್ರತ್ ಇಕ್ರಿಮ(ರ) ಅಬೀನಿಗೆ ತಲುಪಿದಾಗ ಅವರಿಬ್ಬರೂ ಹಝ್ರತ್ ಇಕ್ರಿಮ(ರ)ರ ವಿರುದ್ಧ ಹೋರಾಡಲು ಒಟ್ಟುಸೇರಿದರು. ಆದರೆ ಕೂಡಲೇ ಇಬ್ಬರ ನಡುವೆ ಭಿನ್ನತೆ ಉಂಟಾಯಿತು. ಅವರಿಬ್ಬರು ಬೇರ್ಪಟ್ಟರು. ಹೀಗೆ ಲಹಜಿನಿಂದ ಪೂರ್ವದ ಕಡೆಗೆ ಬರುತ್ತಿದ್ದ ಧರ್ಮತ್ಯಾಗಿಗಳ ಸಂಘಗಳನ್ನು ಕೊನೆಗೊಳಿಸುವುದರಲ್ಲಿ ಹಝ್ರತ್ ಇಕ್ರಿಮ(ರ) ಮುಖ್ಯವಾದ ಪಾತ್ರವನ್ನು ವಹಿಸಿಕೊಂಡರು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಸ್ಸಲಾಬಿ ಅನುವಾದ, ಪುಟ–304, ಅಲ್‌ಫುರ್ಖಾನ್ ಮುಝಫ್ಫರ್‌ಗಡ್)

ಯಮನಿನ ಜೊತೆಗೆ ಖಿಂದ ಗೋತ್ರವು ನೆಲೆಸಿತ್ತು. ಅವರು ಹಿಝ್‌ರೆ ಮೌತಿನ ಪ್ರದೇಶದಲ್ಲಿ ಇದ್ದರು. ಆ ಪ್ರದೇಶದ ಅಧಿಕಾರಿ ಹಝ್ರತ್ ಝಿಯಾದ್ ಬಿನ್ ಲಬೀದ್ ಆಗಿದ್ದರು. ಅವರು ಝುಕಾತಿನ ಬಗ್ಗೆ ಕಠಿಣ ಕ್ರಮ ಕೈಗೊಂಡಾಗ ಅವರ ವಿರುದ್ಧ ಜನರು ದಂಗೆಯೆದ್ದರು. ಹೀಗೆ ಹಝ್ರತ್ ಇಕ್ರಿಮ(ರ) ಮತ್ತು ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ ಅವರ ನೆರವಿಗಾಗಿ ಹೊರಟರು. ಅದರ ವಿವರಣೆ ಹಝ್ರತ್ ಮುಹಾಜಿರ್ ಬಿನ್ ಉಮಯ್ಯರಿಗೆ ಸಂಬಂಧಿಸಿ ಹೇಳುವಾಗ ಪ್ರಸ್ತಾಪಸಲಾಗುವುದು. ಹೇಗಿದ್ದರೂ ಹಝ್ರತ್ ಇಕ್ರಿಮ(ರ) ಧರ್ಮತ್ಯಾಗಿಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ಮುಗಿಸಿದ ನಂತರ ಮದೀನಕ್ಕೆ ಮರಳಲು ತಯಾರಿ ಶುರುಮಾಡಿದರು.

ಅವರೊಂದಿಗೆ ನುಮಾನ್ ಬಿನ್ ಜೂನಿನ ಮಗಳಿದ್ದರು. ಅವರು ಅವಳನ್ನು ಯುದ್ಧ ಮೈದಾನದಲ್ಲಿ ವಿವಾಹ ಮಾಡಿಕೊಂಡಿದ್ದರು. ಉಮ್ಮೇ ತಮೀಂ ಮತ್ತು ಮುಜಾಅನ ಮಗಳನ್ನು ಹಝ್ರತ್ ಖಾಲಿದ್(ರ) ವಿವಾಹ ಮಾಡಿಕೊಂಡ ಕಾರಣದಿಂದ ಹಝ್ರತ್ ಅಬೂಬಕರ್(ರ) ಕೋಪಗೊಂಡಿದ್ದರು ಎಂದು ಅವರಿಗೆ ಗೊತ್ತಿದ್ದರೂ ಹಝ್ರತ್ ಇಕ್ರಿಮ(ರ) ಅವಳನ್ನು ಮದುವೆ ಮಾಡಿಕೊಂಡರು. ಇದರಿಂದ ಹಝ್ರತ್ ಇಕ್ರಿಮ(ರ)ರ ಸೇನೆಯ ಅನೇಕ ವ್ಯಕ್ತಿಗಳು ಅವರಿಂದ ಬೇರ್ಪಟ್ಟರು. ಈ ಸಂಗತಿ ಹಝ್ರತ್ ಮುಹಾಜಿರರ(ರ) ಮುಂದಿರಿಸಲಾಯಿತು. ಆದರೆ ಅವರಿಂದ ಕೂಡ ಯಾವುದೇ ತೀರ್ಮಾನ ಮಾಡಲು ಸಾಧ್ಯವಾಗಲಿಲ್ಲ. ಈ ಎಲ್ಲ ಸ್ಥಿತಿಗತಿಗಳನ್ನು ಹಝ್ರತ್ ಅಬೂಬಕರ್(ರ)ರಿಗೆ ಬರೆದು ಅವರಿಂದ ತೀರ್ಪು ಬೇಡಲಾಯಿತು.

ಹಝ್ರತ್ ಅಬೂಬಕರ್(ರ) ಹೀಗೆ ಬರೆದರು: ಹಝ್ರತ್ ಇಕ್ರಿಮ(ರ) ಮದುವೆ ಮಾಡಿಕೊಂಡು ತಪ್ಪೇನೂ ಮಾಡಿಲ್ಲ. ಹೇಗಿದ್ದರೂ ಕೋಪಗೊಂಡಿದ್ದ ಜನರಿಗೆ ಇದರಿಂದ ಸಮಾಧಾನವಾಯಿತು. ಆದರೆ ಕೆಲವರು ಕೋಪಗೊಳ್ಳಲು ಕಾರಣವಾದ ಹಿನ್ನೆಲೆ ಏನೆಂದರೆ, ನುಮಾನ್ ಬಿನ್ ಜೂನ್ ಒಂದು ಬಾರಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಅವರ ಮಗಳನ್ನು ವಿವಾಹವಾಗಲು ವಿನಂತಿಸಿಕೊಂಡಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ನಿರಾಕರಿಸಿದರು. ಅವಳ ಮಗಳನ್ನು ಅವಳ ತಂದೆಯೊಂದಿಗೆ ಮರಳಿ ಕಳುಹಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಆ ಹುಡುಗಿಯನ್ನು ನಿರಾಕರಿಸಿದ ಕಾರಣದಿಂದ, ಹಝ್ರತ್ ಇಕ್ರಿಮ(ರ)ರ ಸೈನ್ಯದ ಕೆಲವು ಜನರ ಅಭಿಪ್ರಾಯವೇನಾಗಿತ್ತು ಎಂದರೆ, ಹಝ್ರತ್ ಪೈಗಂಬರ್(ಸ)ರ ಉತ್ತಮ ಮಾದರಿಯನ್ನು ಅನುಸರಿಸುತ್ತಾ ಹಝ್ರತ್ ಇಕ್ರಿಮ(ರ) ಕೂಡ ಆ ಹುಡುಗಿಯೊಂದಿಗೆ ವಿವಾಹ ಮಾಡಬಾರದಿತ್ತು ಎಂದಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ) ಈ ವಾದವನ್ನು ಒಪ್ಪಲಿಲ್ಲ. ಈ ವಾದ ಸರಿಯಲ್ಲ ಮತ್ತು ಹಝ್ರತ್ ಇಕ್ರಿಮ(ರ)ರ ವಿವಾಹವನ್ನು ಸರಿಯೆಂದು ಹೇಳಿದರು.

ಹಝ್ರತ್ ಇಕ್ರಿಮ(ರ) ತನ್ನ ಪತ್ನಿಯೊಂದಿಗೆ ಮದೀನಕ್ಕೆ ಮರಳಿ ಬಂದರು. ಹಝ್ರತ್ ಇಕ್ರಿಮರೊಡನೆ(ರ) ಅತೃಪ್ತಿ ಪ್ರಕಟಿಸಿ ಬೇರೆಯಾಗಿದ್ದ ಸೈನ್ಯದ ಭಾಗವು ಪುನಃ ಅವರೊಂದಿಗೆ ಬಂದು ಸೇರಿತು.
(ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–242–243, ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್)

ಹಝ್ರತ್ ಇಕ್ರಿಮ(ರ) ಮದುವೆ ಮಾಡಿಕೊಂಡಿದ್ದ ಅಸ್ಮಾ ಬಿನ್ತ್ ನುಮಾನ್ ಬಿನ್ ಜೂನ್‌ರ ಹುಡುಗಿಯ ಸಂಕ್ಷಿಪ್ತ ಪರಿಚಯ ಹೀಗಿದೆ. ಬುಖಾರಿ ಮತ್ತು ಹದೀಸಿನ ಇತರ ಗ್ರಂಥಗಳಲ್ಲಿ ಇದರ ಬಗ್ಗೆ ಪ್ರಸ್ತಾಪವಿದೆ. ಈ ಮಹಿಳೆಯ ವಿವಾಹ ಹಝ್ರತ್ ಪೈಗಂಬರ್(ಸ)ರೊಂದಿಗೆ ಆಗಿತ್ತು. ಆದರೆ ಅವಳಿಂದ ಆದ ಒಂದು ವರ್ತನೆಯ ಕಾರಣದಿಂದ ಹಝ್ರತ್ ಪೈಗಂಬರ್(ಸ) ಆ ಮಹಿಳೆಯನ್ನು ಮರಳಿ ಅವಳ ಗೋತ್ರಕ್ಕೆ ಕಳುಹಿಸಿದರು. ಅವಳ ಹೆಸರಿನ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಕೆಲವರು ಅವಳ ವಿವಾಹ ಹಝ್ರತ್ ಮುಹಾಜಿರ್ ಬಿನ್ ಉಮಯ್ಯ ಬಿನ್ ಅಬೀ ಉಮಯ್ಯರೊಂದಿಗೆ ಆಗಿತ್ತು ಎಂದು ಬರೆದಿದೆ. ಹೇಗಿದ್ದರೂ ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅರೇಬಿಯ ವಿಜಯಗೊಂಡು ಇಸ್ಲಾಂ ಧರ್ಮ ಹರಡಲು ಶುರುವಾದಾಗ ಖಿಂದ ಗೋತ್ರದ ಅಸ್ಮಾ ಅಥವಾ ಉಮೈಮ ಎಂಬ ಹೆಸರಿನ ಒಬ್ಬ ಮಹಿಳೆಯ ಸಹೋದರನಾದ ಲುಖ್ಮಾನ್ ತನ್ನ ಸಮುದಾಯದ ಕಡೆಯಿಂದ ಸಂಘದೊಂದಿಗೆ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಒಬ್ಬ ಸಂಬಂಧಿಕನನ್ನು ವಿವಾಹವಾಗಿದ್ದ ತನ್ನ ಸಹೋದರಿಯು ಈಗ ವಿಧವೆಯಾಗಿರುವಳು, ಅವಳು ಅತ್ಯಂತ ಸುಂದರಿ ಮತ್ತು ಯೋಗ್ಯ ಹುಡುಗಿಯಾಗಿರುವಳು. ಆದ್ದರಿಂದ ಅವಳನ್ನು ಹಝ್ರತ್ ಪೈಗಂಬರ್(ಸ) ವಿವಾಹ ಮಾಡಿಕೊಳ್ಳಬೇಕೆಂಬ ಬಯಕೆಯನ್ನು ಸಹ ಅವನು ಮುಂದಿರಿಸಿದನು. ಅರಬ್ ಗೋತ್ರದ ಒಗ್ಗಟ್ಟನ್ನು ಬಯಸುತ್ತಿದ್ದ ಹಝ್ರತ್ ಪೈಗಂಬರ್(ಸ) ಈ ವಿನಂತಿಯನ್ನು ಒಪ್ಪಿದರು.

ನಿಕಾಹ್ ಮಾಡಲಾಯಿತು. ಯಾರನ್ನಾದರೂ ಕಳುಹಿಸಿ ಪತ್ನಿಯನ್ನು ಬರಮಾಡಿಕೊಳ್ಳಿರಿ ಎಂದು ಅವನು ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿಕೊಂಡರು. ಹಝ್ರತ್ ಪೈಗಂಬರ್(ಸ) ಅಬೂಉಸೈದ್‌ರನ್ನು ಈ ಕೆಲಸಕ್ಕಾಗಿ ನಿಶ್ಚಯಿಸಿದರು. ಅವರು ಅಲ್ಲಿಗೆ ಹೋದರು. ಜೂನಿಯ ಅವರನ್ನು ಮನೆಯೊಳಗೆ ಬರಲು ಹೇಳಿದರು. ಹಝ್ರತ್ ಅಬೂಉಸೈದ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ)ರ ಪತ್ನಿಯರ ಕುರಿತು ಪರ್ದಾದ ಆದೇಶ ಅವತೀರ್ಣಗೊಂಡಿದೆ. ಆಗ ಇತರ ನಿರ್ದೇಶನಗಳ ಬಗ್ಗೆಯೂ ಅವರೊಡನೆ ಕೇಳಲಾಯಿತು. ಅವರು ಅವುಗಳನು ಹೇಳಿಕೊಟ್ಟರು ಮತ್ತು ಒಂಟೆಯಲ್ಲಿ ಕುಳ್ಳಿರಿಸಿ ಮದೀನಕ್ಕೆ ಕರೆದುಕೊಂಡರು ಬಂದರು. ಖರ್ಜೂರಗಳ ಮರಗಳಿಂದ ಸುತ್ತುವರೆದಿದ್ದ ಒಂದು ಮನೆಯ ಮುಂದೆ ಅವಳನ್ನು ಇಳಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ಹುಡುಗಿ ಸುಂದರಿಯಾಗಿರುವಳು ಎಂದು ಹೇಳಲಾಗುತ್ತಿತ್ತು. ಅಲ್ಲದೆಯೂ ಮಹಿಳೆಯರಿಗೆ ಮದುಮಗಳನ್ನು ನೋಡಲು ಆಸಕ್ತಿ ಇರುತ್ತದೆ. ಮದೀನದ ಮಹಿಳೆಯರು ಅವಳನ್ನು ನೋಡಲು ಹೋದರು. ಗಾಂಭೀರ್ಯವನ್ನು ಮೊದಲ ದಿನದಿಂದಲೇ ಉಂಟುಮಾಡಿಕೊಳ್ಳಬೇಕು ಎಂದು ಯಾವಳೋ ಮಹಿಳೆಯೊಬ್ಬಳು ಅವಳೊಡನೆ ಹೇಳಿದ್ದಳು. ಹಝ್ರತ್ ಪೈಗಂಬರ್(ಸ) ಬಳಿಗೆ ಬರುವಾಗ, ನಾನು ನಿಮ್ಮಿಂದ ಅಭಯ ಯಾಚಿಸುತ್ತೇನೆ ಎಂದು ಹೇಳಬೇಕು, ಹಾಗಾದರೆ ಅವರು ನಿಮ್ಮನ್ನು ಹೆಚ್ಚು ಪ್ರೀತಿಸುವರು ಮತ್ತು ಗೌರವಿಸುವರು ಎಂದು ಆ ಮಹಿಳೆ ಇವಳೊಡನೆ ಹೇಳಿಕೊಟ್ಟಳು. ಯಾವನಾದರೂ ಕಪಟವಿಶ್ವಾಸಿ ತನ್ನ ಪತ್ನಿ ಅಥವಾ ಸಂಬಂಧಿಕರ ಮೂಲಕ ಈ ಚೇಷ್ಟೆಯನ್ನು ಮಾಡಿರಬಹುದು. ಒಟ್ಟಿನಲ್ಲಿ ಅವಳು ಬಂದ ವಿವರ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ ಅವಳಿಗೆ ನಿಶ್ಚಯಿಸಲಾದ ಮನೆಗೆ ಹಝ್ರತ್ ಪೈಗಂಬರ್(ಸ) ಹೋದರು. ಹಝ್ರತ್ ಪೈಗಂಬರ್(ಸ) ಅವಳೊಡನೆ ಹೇಳಿದರು: ನೀನು ನಿನ್ನನ್ನು ನನಗೆ ಅರ್ಪಿಸು. ಆಗ ಅವಳು ಹೇಳಿದಳು: ರಾಣಿಯಾದವಳು ಒಬ್ಬ ಸಾಮಾನ್ಯ ವ್ಯಕ್ತಿಗೆ ತನ್ನನ್ನು ಒಪ್ಪಿಸುವಳೋ? ಅವಳು ತನ್ನನ್ನು ಸ್ವತಃ ದೊಡ್ಡವಳು ಎಂದು ಪ್ರಕಟಿಸಿ ಕೊಂಡಳು. ನಊದುಬಿಲ್ಲಾಹ್. ಪರಿಚಯವಿಲ್ಲದ ಕಾರಣದಿಂದ ಹೆದರುತ್ತಿದ್ದಾಳೆ ಎಂದು ಭಾವಿಸಿಕೊಂಡು ಹಝ್ರತ್ ಪೈಗಂಬರ್(ಸ) ಅವಳನ್ನು ಸಮಾಧಾನಪಡಿಸಲು ತನ್ನ ಕೈಯನ್ನು ಅವಳ ಮೇಲೆ ಇರಿಸಿದರು. ಕೂಡಲೇ "ನಾನು ನಿಮ್ಮಿಂದ ಅಭಯ ಯಾಚಿಸುತ್ತೇನೆ ಎಂಬ ಅತ್ಯಂತ ಅವಿವೇಕದ ವಾಕ್ಯವನ್ನು ಅವಳು ಹೇಳಿದಳು. ಅಲ್ಲಾಹನ ಹೆಸರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಅತ್ಯಂತ ಹಿರಿಯ ಅಸ್ತಿತ್ವದ ಹೆಸರನ್ನು ಎತ್ತಿಕೊಂಡಿದ್ದೀಯ ಮತ್ತು ಅವನೊಡನೆ ಅಭಯವನ್ನು ಯಾಚಿಸಿದ್ದೀಯ. ಅವನು ಅತ್ಯಂತ ಹೆಚ್ಚಾಗಿ ಅಭಯ ನೀಡುವವನಾಗಿರುವನು. ಆದ್ದರಿಂದ ನಾನು ನಿನ್ನ ವಿನಂತಿಯನ್ನು ಸ್ವೀಕಾರ ಮಾಡುತ್ತೇನೆ. ಹೀಗೆ ಹಝ್ರತ್ ಪೈಗಂಬರ್(ಸ) ಕೂಡಲೇ ಹೊರಗೆ ಬಂದು ಹೇಳಿದರು: ಹೇ ಅಬೂ ಉಸೈದ್, ಅವಳಿಗೆ ಎರಡು ಹೊದಿಕೆಗಳನ್ನು ಕೊಟ್ಟು ಅವಳ ಮನೆಯವರ ಬಳಿಗೆ ತಲುಪಿಸು. ಅದರ ನಂತರ ಮಹರ್ ಅಲ್ಲದೆಯೂ ಔದಾರ್ಯವೆಂಬಂತೆ ಎರಡು ಹೊದಿಕೆಗಳನ್ನು ಕೊಡಲು ಆದೇಶಿಸಲಾಯಿತು.

ಅಬೂ ಉಸೈದ್ ಅವಳನ್ನು ಮನೆಗೆ ತಲುಪಿಸಿದರು. ಇದು ಅವಳ ಗೋತ್ರದ ಜನರನ್ನು ದುಃಖಿಸಿತು. ಅವರು ಅವಳನ್ನು ದೂರಿದರು. ಆದರೆ ಇದು ನನ್ನ ದೌರ್ಭಾಗ್ಯವೆಂದು ಅವಳು ಹೇಳಿಕೊಳ್ಳುತ್ತಿದ್ದಳು. ಹಝ್ರತ್ ಪೈಗಂಬರ್(ಸ) ಸಮೀಪಕ್ಕೆ ಬರುವಾಗ ದೂರ ಸರಿದರೆ ಮತ್ತು ಅತೃಪ್ತಿಯನ್ನು ತೋರಿಸಿದರೆ ನಿನ್ನ ಬಗ್ಗೆ ಒಂದು ಗೌರವ ಭಾವ ಉಂಟಾಗುವುದು ಎಂದು ಹೇಳಿಕೊಂಡು ನನ್ನನ್ನು ಮರುಳುಗೊಳಿಸಲಾಯಿತು ಎಂದೂ ಅವಳು ಹೇಳುತ್ತಿದ್ದಳು. ಇದೇ ಅದಕ್ಕೆ ಕಾರಣವೋ ಎಂದು ಗೊತ್ತಿಲ್ಲ. ಹೇಗಿದ್ದರೂ ಅವಳು ಅತೃಪ್ತಿಯನ್ನು ತೋರಿಸಿದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಅವಳಿಂದ ಬೇರ್ಪಟ್ಟು ಅವಳನ್ನು ಅವಳ ಮನೆಗೆ ಮರಳಿಸಿದರು.

(ತಫ್ಸೀರೆ ಕಬೀರ್, ಸಂಪುಟ–2, ಪುಟ–533–535)

ಇದನ್ನು ಹಿಂದೆಯೂ ಹಝ್ರತ್ ಉಸೈದ್(ರ)ರ ಪ್ರಸ್ತಾಪದಲ್ಲಿ ವಿವರಿಸಿದ್ದೆ. ಹೇಗಿದ್ದರೂ ಹಝ್ರತ್ ಇಕ್ರಿಮ(ರ) ಖಿಂದ ಹಿಝ್ರೆ ಮೌತ್‌ನಿಂದ ಯಮನ್ ಮತ್ತು ಮಕ್ಕದ ಮಾರ್ಗವಾಗಿ ಮರಳಿ ಬಂದರು. ಅವರು ಮದೀನಕ್ಕೆ ತಲುಪಿದಾಗ, ಖಾಲಿದ್ ಬಿನ್ ಸಈದ್‌ರ ಸಹಾಯಕ್ಕಾಗಿ ಹೊರಡಲು ಅವರೊಡನೆ ಹಝ್ರತ್ ಅಬೂಬಕರ್(ರ) ಆದೇಶ ನೀಡಿದರು. ಧರ್ಮತ್ಯಾಗಿಗಳಿಗೆ ಸಂಬಂಧಿಸಿದ ಯುದ್ಧಗಳಲ್ಲಿ ಭಾಗವಹಿಸಿದ ತನ್ನ ಸೈನ್ಯಕ್ಕೆ ಹಝ್ರತ್ ಇಕ್ರಿಮ(ರ) ಬಿಡುವು ನೀಡಿದ್ದರು. ಬಹಳ ದೊಡ್ಡ ಕಾರ್ಯಾಚರಣೆಗಳನ್ನು ಮಾಡಿ ಬಂದಿದ್ದ ಕಾರಣದಿಂದ ಆಯಾಸಗೊಂಡಿರಬಹುದು ಎಂಬ ಕಾರಣಕ್ಕೆ ಅವರಿಗೆ ಬಿಡುವು ನೀಡಲಾಗಿತ್ತು. ಹಝ್ರತ್ ಅಬೂಬಕರ್(ರ) ಆ ಸೈನಿಕರಿಗೆ ಬದಲಾಗಿ ಬೇರೊಂದು ಸೇನೆಯನ್ನು ತಯಾರು ಮಾಡಿಕೊಂಡು ಹಝ್ರತ್ ಇಕ್ರಿಮ(ರ)ರ ಧ್ವಜದ ಅಡಿಯಲ್ಲಿ ಸಿರಿಯಗೆ ಹೋಗಲು ಅದಕ್ಕೆ ಆದೇಶ ನೀಡಿದರು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ ಔರ್ ಕಾರ್ನಾಮೆ, ಸಲಾಬಿ ಅನುವಾದಕ, ಪುಟ–433 ಅಡಿಟಿಪ್ಪಣಿ, ಮಕ್ತಬ ಅಲ್‌ಫುರ್ಖಾನ್ ಮುಝುಫ್ಫರ್‌ಗಡ್)

ಅಲ್ಲಿ ಹಝ್ರತ್ ಇಕ್ರಿಮ(ರ) ಮಾಡಿದ ಶ್ರೇಷ್ಠ ಕಾರ್ಯಸಾಧನೆಗಳು ಮತ್ತು ಬಹಳ ಧೈರ್ಯದಿಂದ ಹೋರಾಡಿ ಹುತಾತ್ಮರಾದ ಬಗ್ಗೆಗಿನ ವಿವರಣೆ ಸಿರಿಯದ ಕಾರ್ಯಾಚರಣೆಗಳಿಗೆ ಸಂಬಂಧಿಸಿ ಪ್ರಸ್ತಾಪಿಸಲಾಗುವಾಗ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

ಐದನೇ ಕಾರ್ಯಾಚರಣೆಯು ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಹಝ್ರತ್ ಶುರಹ್‌ಬೀಲ್ ಬಿನ್ ಹಸನ(ರ) ನಡೆಸಿದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮ(ರ)ರನ್ನು ಮುಸೈಲಿಮರ ಕಡೆಗೆ ಕಳುಹಿಸಿದ್ದರು. ಅವರ ಹಿಂದೆಯಾಗಿ ಹಝ್ರತ್ ಶುರಹ್‌ಬೀಲ್ ಬಿನ್ ಹಸನರನ್ನು ಕೂಡ ಕಳುಹಿಸಿದರು. ಹಝ್ರತ್ ಶುರಹ್‌ಬೀಲ್ ಬಿನ್ ಹಸನರ ಸಂಕ್ಷಿಪ್ತವಾದ ಪರಿಚಯ ಹೀಗಿದೆ: ಅವರ ತಂದೆಯ ಹೆಸರು ಅಬ್ದುಲ್ಲಾಹ್ ಬಿನ್ ಮುತಾಅ್ ಮತ್ತು ತಾಯಿಯ ಹೆಸರು ಹಸನ ಎಂದಾಗಿತ್ತು. ಅವರ ತಂದೆತಾಯಂದಿರು ಚಿಕ್ಕಂದಿನಿಂದಲೇ ನಿಧನರಾದರು. ಅವರು ತನ್ನ ತಾಯಿಯಾದ ಹಸನರ ಹೆಸರಲ್ಲಿ ಶುರಹ್‌ಬೀಲ್ ಹಸನ ಎಂದು ಕರೆಯಲ್ಪಟ್ಟರು. ಆರಂಭ ಕಾಲದಲ್ಲಿ ಇಸ್ಲಾಂ ಸ್ವೀಕಾರ ಮಾಡಿದವರಲ್ಲಿ ಹಝ್ರತ್ ಶುರಹ್‌ಬೀಲ್(ರ) ಒಳಪಡುತ್ತಾರೆ. ಅವರು ತಮ್ಮ ಸಹೋದರರೊಂದಿಗೆ ಅಬೀಸೀನಿಯದ ಕಡೆಗೆ ವಲಸೆ ಹೋದರು ಮತ್ತು ಅಬೀಸೀನಿಯದಿಂದ ಮದೀನಕ್ಕೆ ಮರಳಿ ಬಂದಾಗ ಅವರು ಬನೂ ಝುರೀಕ್ ಗೋತ್ರದ ಮನೆಗಳಲ್ಲಿ ತಂಗಿದರು. ಖಿಲಾಫತ್ ಕಾಲದಲ್ಲಿ ಅವರು ಪ್ರಸಿದ್ಧ ಸೇನಾಧಿಪತಿಗಳಲ್ಲಿ ಒಬ್ಬರಾಗಿದ್ದರು. ಹಿಜರೀ 18ರಲ್ಲಿ, 67ನೇ ವಯಸಿನಲ್ಲಿ ಅಮ್‌ವಾಸಿನಲ್ಲಿ ಹರಡಿದ ಪ್ಲೇಗ್ ರೋಗದಿಂದ ನಿಧನರಾದರು. (ಅಸದುಲ್‌ಗಾಬ ಫೀ

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

**Distt: Gurdaspur (Pb.) INDIA Qadian - 143516**

Postal Reg. No: 3000039689/2020-22 Vol No.03, Thursday, 21 July 2022, Issue No. 29

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

**ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)**

ಮಾರಿಫತಿಸ್ಸಹಾಬ, ಸಂಪುಟ-2, ಪುಟ-619-620, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಏನೇ ಇರಲೀ, ಮೊದಲು ಹೇಳಿದಂತೆ ಶರಹಬೀಲ್(ರ) ಅವರ ಆಗಮನದ ಮೊದಲು ದಾಳಿ ಮಾಡಬಾರದೆಂದು ಹಝ್ರತ್ ಅಬುಬಕರ್(ರ) ಆದೇಶದ ಹೊರತಾಗಿಯೂ, ಹಝ್ರತ್ ಇಕ್ರಿಮಾ(ರ), ಹಝ್ರತ್ ಶರಹಬಿಲ್ ಆಗಮನದ ಮೊದಲು ಮುಸೈಲಮಾಗೆ ವಿಜಯದ ಶ್ರೇಯಸ್ಸು ಸಲ್ಲಬೇಕೆಂದು ಆತುರದಿಂದ ದಾಳಿ ಮಾಡಿದರು ಆದರೆ ಮಯಸೈಲಮ ಅವರನ್ನು ಹಿಂದೆ ತಳ್ಳಿದನು. ಮತ್ತು ಹಝ್ರತ್ ಇಕ್ರಿಮಾ(ರ) ಅವರು ಈ ವೈಫಲ್ಯವನ್ನು ಹಝ್ರತ್ ಅಬೂಬಕರ್(ರ) ಅವರಿಗೆ ತಿಳಿಸಿದಾಗ, ಮೊದಲೇ ಹೇಳಿದಂತೆ ಹಝ್ರತ್ ಅಬೂಬಕರ್(ರ) ಅವರಿಗೆ ಎಚ್ಚರಿಕೆ ಪತ್ರ ಬರೆದು ಜನರಲ್ಲಿ ಯಾವುದೇ ಬದಲಾವಣೆಯಾಗದಂತೆ ಸೋಲಿನ ಕಳಂಕದೊಂದಿಗೆ ಮದೀನಾಕ್ಕೆ ಬರಬಾರದು ಎಂದು ಹೇಳಿದರು. ಮತ್ತು ಅವರನ್ನು ಓಮನ್‌ಗೆ ಹೋಗಲು ಆದೇಶಿಸಿದರು. ಹಝ್ರತ್ ಶರಹಬೀಲ್ ಬಿನ್ ಹಸನಾ(ರ) ಅವರು ಇನ್ನೂ ದಾರಿಯಲ್ಲಿದ್ದಾಗ ಅವರಿಗೆ ಹಝ್ರತ್ ಇಕ್ರಿಮಾ(ರ) ಅವರ ಸೋಲಿನ ಸುದ್ದಿಯನ್ನು ಸ್ವೀಕರಿಸಿದರು. ಅವರು ಮುಂದುವರಿಯುವುದನ್ನು ನಿಲ್ಲಿಸಿದರು ಮತ್ತು ಹೊಸ ಸೂಚನೆಗಳಿಗಾಗಿ ಅಬೂಬಕರ್(ರ) ಅವರಿಗೆ ಪತ್ರವನ್ನು ಕಳುಹಿಸಿದರು. ಹಝ್ರತ್ ಅಬೂಬಕರ್(ರ) ಅವರಿಗೆ "ನೀವು ಇರುವಲ್ಲಿಯೇ ಇರಿ." ಎಂದು ಬರೆದರು. (ಹಝ್ರತ್ ಅಬುಬಕರ್(ರ) ಕೇ ಸರ್ಕಾರಿ ಖುತೂತ್, ಖುರ್ಷಿದ್ ಅಹ್ಮದ್ ಫಾರೂಕ್, ಕಿತಾಬ್ ಮೇಲ, ಜಾವೇದ್ ಬಟ್ ಪ್ರೆಸ್ ಪುಟ-43)

ಹಝ್ರತ್ ಅಬೂಬಕರ್(ರ) ಅವರು ಶರಹಬೀಲ್ ಅವರಿಗೆ ಬರೆದರು, ನೀವು ನನ್ನ ಎರಡನೇ ಆಜ್ಞೆಯನ್ನು ಸ್ವೀಕರಿಸುವವರೆಗೆ ನೀವು ಯಮಾಮನ ಹತ್ತಿರ ಇರಿ ಮತ್ತು ಯಾವ ವ್ಯಕ್ತಿಯ ಅಂದರೆ ಮುಸೈಲಮನ ವಿರುದ್ಧ ಹೋರಾಡಲು ಕಳುಹಿಸಿದ್ದೇನೊ ಅವನೊಂದಿಗೆ ಹೋರಾಡಬೇಡಿ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-291, ದಾರುಲ್-ಕಿತಾಬ್ ಅಲ್-ಅಲಮಿಯಾ ಲೆಬನಾನ್ 2012 ರಿಂದ ಪ್ರಕಟಿತ)

ನಂತರ ಹಝ್ರತ್ ಅಬುಬಕರ್ ಸಿದ್ದೀಕ್(ರ) ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಯಮಾಮಾದ ದಂಡಯಾತ್ರೆಗೆ ನಿಯೋಜಿಸಿದಾಗ, ಅವರು ಹಝ್ರತ್ ಶರಹಬೀಲ್ ಬಿನ್ ಹಸ್ನಾ ಅವರಿಗೆ ಆದೇಶಿಸಿದರು, ಖಾಲಿದ್ ಬಿನ್ ವಲೀದ್(ರ) ನಿಮ್ಮನ್ನು ಭೇಟಿ ಮಾಡಲು ಬಂದಾಗ ಮತ್ತು ಯಮಾಮನ ದಂಡಯಾತ್ರೆಯಿಂದ ನೀವು ಬಿಡುಗಡೆ ಹೊಂದಿದ ನಂತರ ಖುಝಾಅ ಗೋತ್ರದ ಕಡೆಗೆ ತಿರುಗಿರಿ ಮತ್ತು ಹಝ್ರತ್ ಉಮರ್ ಬಿನ್ ಆಸ್(ರ) ಅವರೊಂದಿಗೆ ಸೇರಿ ಇಸ್ಲಾಮ್ ಧರ್ಮದಿಂದ ಮತಾಂತರಗೊಂಡ ಆ ಧರ್ಮತ್ಯಾಗಿಗಳನ್ನು ವಿಚಾರಿಸಿರಿ ಮತ್ತು ಅವರು ಇಸ್ಲಾಮ್‌ಗೆ ಮತಾಂತರಗೊಳ್ಳಲು ನಿರಾಕರಿಸಿದರೆ ಮತ್ತು ಅದನ್ನು ವಿರೋಧಿಸಲು ಬಾಗಿದರೆ. ನಿರಾಕರಣೆ ಮಾತ್ರವಲ್ಲ ವಿರೋಧವೂ ಇದೆ. (ಹಝ್ರತ್ ಅಬುಬಕರ್ ಕೆ ಸರ್ಕಾರಿ ಖುತೂತ್, ಖುರ್ಷಿದ್ ಅಹ್ಮದ್ ಫಾರುಕ್, ಕಿತಾಬ್ ಮೇಳ, ಜಾವೇದ್ ಬಟ್ ಪ್ರೆಸ್ ಪುಟ-24)

ಖುಝಾಅ ಸಹ ಒಂದು ಸುಪ್ರಸಿದ್ಧ ಅರಬ್ ಗೋತ್ರವಾಗಿತ್ತು, ಅದು ಮದೀನಾದಿಂದ ಹತ್ತು ಮೈಲುಗಳಷ್ಟು ದೂರದಲ್ಲಿ ಮದಾಇನ್ ಸಾಲಿಹ್‌ನ ಪಶ್ಚಿಮ ಭಾಗದಲ್ಲಿ, ಅಲ್-ಕುರಾ ಕಣಿವೆಯ ಆಚೆಗೆ ನೆಲೆಸಿದರು.

(ಫರ್ಹಾಂಗ್ ಸಿರಾ, ಪುಟ-237, ಝುವಾರ್ ಅಕಾಡೆಮಿ ಕರಾಚಿ)

ಏನೇ ಇರಲಿ, ಹಝ್ರತ್ ಅಬುಬಕರ್ ಸಿದ್ದಿಕ್(ರ) ಅವರ ಸೂಚನೆಗಳ ಪ್ರಕಾರ, ಹಝ್ರತ್ ಶರಹಬಿಲ್ ತನ್ನ ಸೈನ್ಯದೊಂದಿಗೆ ಉಳಿದುಕೊಂಡರು, ಆದರೆ ಮುಸೈಲಮನು ಅವನ ಸೈನ್ಯದೊಂದಿಗೆ ದಾಳಿ ಮಾಡಿದನು.

ಇದನ್ನು ಉಲ್ಲೇಖಿಸಿ ಓರ್ವ ಲೇಖಕರು ಬರೆಯುತ್ತಾರೆ: ಹಝ್ರತ್ ಖಾಲಿದ್ ಬಿನ್ ವಲೀದ್(ರ) ಯಮಾಮಕ್ಕೆ ಹೋಗುತ್ತಿದ್ದಾಗ, ಮುಸೈಲಮಾದ ಸೈನ್ಯವು ಹಝ್ರತ್ ಶರಹಬೀಲ್‌ನ ಸೈನ್ಯದ ವಿರುದ್ಧ ಹೋರಾಡಿ ಅವರನ್ನು ಹಿಂದಕ್ಕೆ ತಳ್ಳಿತು. ಕೆಲವು ಇತಿಹಾಸಕಾರರು ಬರೆಯುತ್ತಾರೆ: ಹಝ್ರತ್ ಶುರಹಬಿಲ್(ರ) ಅವರು ತಮ್ಮ ಹಿಂದಿನ ಹಝ್ರತ್ ಇಕ್ರಿಮಾ ಅವರು ಹಿಂದೆ ಮಾಡಿದ ಅದೇ ತಪ್ಪನ್ನು ಮಾಡಿದರು, ಅಂದರೆ, ಮುಸೈಲಮಾನ ವಿರುದ್ಧದ ಗೆಲುವಿನ ಅನ್ವೇಷಣೆಯಲ್ಲಿ ಅವರು ಮುಂದೆ ಹೋದರು, ಆದರೆ ಅವರು ಸೋತ ನಂತರ ಹಿಮ್ಮೆಟ್ಟಬೇಕಾಯಿತು, ಇದು ನಿಜವಲ್ಲ. ಆದರೆ ಹಝ್ರತ್ ಶರಹಾಬೀಲ್ ಹಝ್ರತ್ ಖಾಲಿದ್ ಅವರಿಗೆ ಹಾನಿ ಮಾಡಬಾರದು ಎಂಬ ಆಲೋಚನೆಯೊಂದಿಗೆ ಯಮಮಾದ ಸೈನ್ಯವು ಮುಂದೆ ಹೋಗಿ ಸೈನ್ಯದ ಮೇಲೆ ದಾಳಿ ವಾಡಿ ಅವರನ್ನು ಸೋಲಿಸುವಲ್ಲಿ ಯುಶಸ್ವಿಯಾಯಿತು. ಈ ಎರಡು ವಿಷಯಗಳಲ್ಲಿ ಯಾವುದಾದರು ನಡೆದಿರಬಹುದು ಆದರೆ ವಾಸ್ತವವೆಂದರೆ ಹಝ್ರತ್ ಶುರಹಬಿಲ್ ತನ್ನ ಸೈನ್ಯದೊಂದಿಗೆ ಹಿಮ್ಮೆಟ್ಟಿದರು. ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ತಲುಪಿದಾಗ ಮತ್ತು ಎಲ್ಲಾ ಸಂದರ್ಭಗಳು ಮತ್ತು ಘಟನೆಗಳ ಬಗ್ಗೆ ತಿಳಿದುಕೊಂಡಾಗ, ಅವರು ಹಝ್ರತ್ ಶರಹಬಿಲ್ ಅವರನ್ನು ಖಂಡಿಸಿದರು. ಶತ್ರುವನ್ನು ಎದುರಿಸುವ ಪೂರ್ಣ ಶಕ್ತಿ ಇಲ್ಲದಿದ್ದರೆ ಸಹಜವಾಗಿಯೇ ಬೇಕಾದ ಶಕ್ತಿ ದೊರೆಯುವವರೆಗೆ ಆತನನ್ನು ಎದುರಿಸುವುದನ್ನು ತಡೆಯಬೇಕು ಎಂದು ಹಝ್ರತ್ ಖಾಲಿದ್(ರ) ಅವರು ಅಭಿಪ್ರಾಯಪಟ್ಟರು. ಶಕ್ತಿಯ ಕೊರತೆಯ ಹೊರತಾಗಿಯೂ ಶತ್ರುಗಳ ಮೇಲೆ ಯುದ್ಧವನ್ನು ನಡೆಸುವ ಬದಲು ಮತ್ತು ಪರಿಣಾಮವಾಗಿ ಸೋತರು. (ಹಝ್ರತ್ ಸೈಯದುನಾ ಅಬುಬಕರ್ ಸಿದ್ದೀಕ್(ರ), ಡಾ॥ ಮುಹಮ್ಮದ್ ಹುಸೇನ್ ಹೈಕಲ್, ಅನುವಾದಕ ಪುಟ-190 ಮುದ್ರಿತ ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್)

ಆದಾಗ್ಯೂ, ನಂತರ, ಹಝ್ರತ್ ಶರಹಬೀಲ್ ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರೊಂದಿಗೆ ಯುದ್ಧದಲ್ಲಿ ಭಾಗವಹಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ಹಝ್ರತ್ ಶರಹಬೀಲ್ ಅವರನ್ನು ಮುಕದ್ದಮ್ ಅಲ್-ಜೈಶ್‌ನ ರಕ್ಷಕನನ್ನಾಗಿ ನೇಮಿಸಿದರು, ಅಂದರೆ ಅವರು ಅವರನ್ನು ಸೈನ್ಯದ ಮುಂಭಾಗದ ಉಸ್ತುವಾರಿಯನ್ನಾಗಿ ನೇಮಿಸಿದರು ಮತ್ತು ಬಲಭಾಗದಲ್ಲಿ ಮೈಮಾನಾ ಮತ್ತು ಮೈಸಾರಾ ಮತ್ತು ಎಡಭಾಗದಲ್ಲಿ ಝೈದ್ ಬಿನ್ ಖತ್ತಾಬ್ ಮತ್ತು ಅಬು ಹುದೈಫಾ ಬಿನ್ ಉತ್ಬಾ ಬಿನ್ ರಬಿಯಾ ಅವರನ್ನು ನೇಮಿಸಿದರು. (ಹಝ್ರತ್ ಸೈಯದುನಾ ಅಬುಬಕರ್ ಸಿದ್ದೀಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಮುಹಮ್ಮದ್ ಹುಸೇನ್ ಹೈಕಲ್, ಅನುವಾದಕ ಪುಟ-355, ಮಕ್ತಾಬ್ ಅಲ್-ಫುರ್ಕಾನ್ ಮುಝಫರ್ಗಢ್ ಪಾಕಿಸ್ತಾನ)

ಯಮಾಮಾದ ಕಾರ್ಯಾಚರಣೆಯನ್ನು ಮುಗಿಸಿದ ನಂತರ, ಹಝ್ರತ್ ಅಬೂಬಕರ್ ಸಿದ್ದಿಕ್(ರ) ಅವರ ಸೂಚನೆಗಳ ಪ್ರಕಾರ, ಹಝ್ರತ್ ಶರ್ಹಬಿಲ್ ಅವರು ಬನು ಖುಝಾಅದ ಬಂಡುಕೋರರ ಸುದ್ದಿಯನ್ನು ಪಡೆಯಲು ಹಝ್ರತ್ ಅಮ್ರ್ ಬಿನ್ ಅಸ್(ರ) ಅವರ ಬಳಿಗೆ ಹೋದರು.

ಆದ್ದರಿಂದ, ಹಝ್ರತ್ ಶರಹಬೀಲ್ ಮತ್ತು ಹಝ್ರತ್ ಅಮ್ರ್ ಬಿನ್ ಆಸ್(ರ) ಖುಝಾಅದ ಧರ್ಮಭ್ರಷ್ಟ ಬಂಡುಕೋರರ ಮೇಲೆ ದಾಳಿ ಮಾಡಲು ಪ್ರಾರಂಭಿಸಿದರು ಎಂದು ಬರೆಯಲಾಗಿದೆ. ಹಝ್ರತ್ ಅಮ್ರ್ ಇಬ್ನ್ ಆಸ್(ರ) ಅವರು ಸಅದ್ ಗೋತ್ರಗಳ ಮೇಲೆ ಮತ್ತು ಬಲಖ್‌ನ ಮೇಲೆ ದಾಳಿ ಮಾಡಿದರು ಮತ್ತು ಹಝ್ರತ್ ಶುರಾಬೀಲ್ ಕುಲ್ಬ್ ಗೀತ್ರ ಮತ್ತು ಅದರ ಅಧೀನ ಗೋತ್ರಗಳ ಮೇಲೆ ದಾಳಿ ಮಾಡಿದರು. (ತಾರೀಖ್ ಇಬ್ನ್ ಖುಲ್ದೂನ್, ಸಂಪುಟ-2, ಪುಟ-440, ದಾರುಲ್-ಕಿತಾಬ್ ಅಲ್-ಅಲಮಿಯಾ ಲೆಬನಾನ್ 2016 ರಿಂದ ಪ್ರಕಟಿತ)

ಆರನೇ ಕಾರ್ಯಾಚರಣೆಯು ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಹಝ್ರತ್ ಅಮ್ರ್ ಬಿನ್ ಆಸ್(ರ) ನಡೆಸಿದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಅಮ್ರ್ ಬಿನ್ ಆಸ್(ರ)ರಿಗೆ ಕೊಟ್ಟು ಅವರೊಡನೆ ಖುಝಾಅ, ವದೀಅ ಮತ್ತು ಹಾರಿಸ್ ಎಂಬ ಮೂರು ಗೋತ್ರಗಳನ್ನು ಎದುರಿಸಲು ಆದೇಶ ನೀಡಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-257, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012)

ಖುಝಾಅ ಕೂಡ ಅರೇಬಿಯದ ಪ್ರಸಿದ್ಧ ಗೋತ್ರವಾಗಿದೆ. ಅದು ಮದೀನದಿಂದ 10 ರಾತ್ರಿಗಳ ಯಾತ್ರೆ ಮಾಡುವಷ್ಟು ದೂರದಲ್ಲಿ ಖುರಾ ಕಣಿವೆಗೆ ಸ್ವಲ್ಪ ಮುಂದೆ ಮದಾಇನ್ ಸಾಲಿಹಿನ ಪಶ್ಚಿಮದಲ್ಲಿ ನೆಲೆಸಿತ್ತು.

(ಫರ್ಹಂಗ್ ಸೀರತ್, ಪುಟ-237, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಅಮ್ರ್ ಬಿನ್ ಆಸ್(ರ)ರ ಸಂಕ್ಷಿಪ್ತ ಪರಿಚಯ ಹೀಗಿದೆ: ಅವರ ತಂದೆಯ ಹೆಸರು ಆಸ್ ಬಿನ್ ವಾಯಿಲ್ ಎಂದಾಗಿತ್ತು. ಅವರ ತಾಯಿಯ ಹೆಸರು ನಾಬಿಗ ಬಿನ್ತ್ ಹರ್ಮಲ ಎಂದಾಗಿತ್ತು. ಹಝ್ರತ್ ಅಮ್ರ್ ಬಿನ್ ಆಸ್(ರ) ಹಿಜರೀ 8ರಲ್ಲಿ ಮಕ್ಕಾ ವಿಜಯಕ್ಕೆ 6 ತಿಂಗಳಿಗೆ ಮುಂಚಿತವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರು. ಹಿಜರೀ 8ರಲ್ಲಿ ಹಝ್ರತ್ ಪೈಗಂಬರ್(ಸ) ಅವರನ್ನು ಒಮಾನಿನ ಅಧಿಕಾರಿಯನ್ನಾಗಿ

***(ಪುಟ ಸಂಖ್ಯೆ-07 ರಲ್ಲಿ ಮುಂದುವರಿಸಲಾಗಿದೆ)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.